ಗುರಿ, ನೀತಿ, ನಿಯಮ ಮತ್ತು ಸಂಘಟನೆ

AIMS, POLICY, RULES & ORGANISATION

ಭಾಗ – III
ಗೈಡ್ ವಿಭಾಗ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

#39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು 560 001

ದೂ.: 080–22260017, 22267470, shq@bsgkarnataka.org

shanthigruha@scout.org.in, shantigruha@bsgkarnataka.org

www.bsgkarnataka.org

The Bharat Scouts & Guides

STRUCTURE OF THE ORGANISATION

ಗುರಿ–ನೀತಿ –ನಿಯಮ ಮತ್ತು ಸಂಘಟನೆ

ಭಾಗ - 3

ಗೈಡ್ ವಿಭಾಗ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್

ಕರ್ನಾಟಕ ರಾಜ್ಯ ಪ್ರಧಾನ ಕಛೇರಿ

ಗುರಿ–ನೀತಿ–ನಿಯಮ–ಸಂಘಟನೆ (ಗು.ನೀ.ನಿ.ಸಂ.) ಗೈಡ್ಸ್ ವಿಭಾಗ
ಪ್ರಕಾಶಕರು: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, # 39, "ಶಾಂತಿಗೃಹ", ಅರಮನೆ ರಸ್ತೆ, ಬೆಂಗಳೂರು–560 001.

ದೂರವಾಣಿ : ರಾಜ್ಯ ಕೇಂದ್ರ ಕಛೇರಿ : 26701227
ರಾಜ್ಯ ಗೈಡ್ ಕಛೇರಿ : 22267470

ಮೊದಲ ಮುದ್ರಣ : 2004
ದ್ವಿತೀಯ ಮುದ್ರಣ : 2010
ತೃತೀಯ ಮುದ್ರಣ : 2018
ನಾಲ್ಕನೆಯ ಮುದ್ರಣ : 2022

© ಹಕ್ಕುಗಳು : ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ಪ್ರತಿಗಳು : 500
ಪುಟಗಳು : xiv+154=168
ಬೆಲೆ : ₹ 40/-

ಮುದ್ರಕರು :
ಸತ್ಯಶ್ರೀ ಪ್ರಿಂಟರ್ಸ್ ಪ್ರೈ. ಲಿ.
16/1, 2ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ,
ಕಸ್ತೂರಿಬಾ ನಗರ, ಮೈಸೂರು ರಸ್ತೆ,
ಬೆಂಗಳೂರು–560 026
ದೂರವಾಣಿ : 080–2674 8811

ಮುಖ್ಯ ಆಯುಕ್ತರ ನುಡಿ

ಸ್ಕೌಟ್-ಗೈಡ್ ಚಳವಳಿ ಯುವಕ-ಯುವತಿಯರಿಗೆ ಅತಿ ಕಿರಿಯ ವಯಸ್ಸಿನಲ್ಲಿ ಕ್ರಿಯಾತ್ಮಕ ಹಾಗೂ ಉದಾತ್ತವಾದ ಚಿಂತನೆಗಳನ್ನು ಬೆಳೆಸುವಲ್ಲಿ ಒಂದು ಶತಮಾನ ಮುಗಿಸಿ ಎರಡನೇ ಶತಮಾನಕ್ಕೆ ಕಾಲಿಟ್ಟಿರುವ ಅಂತಾರಾಷ್ಟ್ರೀಯ ಯುವ ಸಂಘಟನೆ.

ಚಳವಳಿಯ ಮೂರು ವಿಭಾಗಗಳಲ್ಲಿ ಗೈಡ್ ವಿಭಾಗ ಅತ್ಯಂತ ಪ್ರಮುಖ ಹಾಗೂ ವೈಶಿಷ್ಟ್ಯಪೂರ್ಣ ಅಂಗವಾಗಿ ಮುನ್ನಡೆದಿದೆ. ಚಳವಳಿ ಬಲಿಷ್ಠ ಸಂಘಟನೆಯಾಗುವಲ್ಲಿ ಗೈಡ್ ವಿಭಾಗದ ಶಿಕ್ಷಕಿಯರಿಗೆ ತಾವು ತಯಾರು ಮಾಡುತ್ತಿರುವ ಗೈಡ್‌ಗಳಿಗೆ, ತರಬೇತಿ ವಿವರ ನೀಡುವ ಮುಖೇನ ಅವರುಗಳನ್ನು ಉತ್ತಮ ಜೀವನ ಮೌಲ್ಯಗಳುಳ್ಳ ಸಮಾಜಮುಖಿಯಾಗಿ ಮತ್ತು ತಮ್ಮ ಕಾಲಮೇಲೆ ತಾವು ನಿಲ್ಲುವಲ್ಲಿ, ಅಂತಃಸತ್ವವುಳ್ಳ ಹಾಗೂ ಸಾಮಾಜಿಕ ಹೊಣೆಗಾರಿಕೆಯುಳ್ಳ ವ್ಯಕ್ತಿಗಳನ್ನಾಗಿ ರೂಪಿಸಲು ಸಾಧ್ಯವಿದೆ.

ಈಗಾಗಲೇ ರಾಜ್ಯ ಸಂಸ್ಥೆಯು ನವೆಂಬರ್ 2016ರಲ್ಲಿ ರಾಷ್ಟ್ರೀಯ ಸಂಸ್ಥೆ ಪ್ರಕಟಿಸಿರುವ ಗುರಿ–ನೀತಿ–ನಿಯಮ–ಸಂಘಟನೆ ಭಾಗ III ಗೈಡ್ ವಿಭಾಗವನ್ನು ರಾಜ್ಯದ ಹಿರಿಯ ಅನುಭವಿ ಗೈಡ್ ತರಬೇತಿ ನಾಯಕಿಯರುಗಳಾದ ದಿ॥ ಶ್ರೀಮತಿ ಎಸ್.ಕೆ. ಪ್ರಭಾ, ಎಲ್.ಟಿ. ಶ್ರೀಮತಿ ಬಿ.ಡಿ. ಶಾಂತ, ಎಲ್.ಟಿ., ದಿ॥ ಶ್ರೀಮತಿ ಎನ್.ಕೆ. ಛಾಯಾ, ಎಲ್.ಟಿ. ಹಾಗೂ ಇತರ ಅನುಭವಿ ಗೈಡ್ ಶಿಕ್ಷಕಿಯರ, ತರಬೇತುದಾರರ ಸಹಾಯ–ಸಹಕಾರ–ನೆರವಿನೊಂದಿಗೆ ಅಚ್ಚುಕಟ್ಟಾಗಿ ಭಾಷಾಂತರಿಸಿ ಮುದ್ರಿಸಲಾಗಿದೆ.

ಈಗ ಪುಸ್ತಕದ ಐದನೆಯ ಮುದ್ರಣ ಪೂರ್ಣಗೊಂಡಿದ್ದು–2000 ಪ್ರತಿಗಳು ರಾಜ್ಯದ ಗೈಡ್‌ದಳ ನಾಯಕಿಯರುಗಳಿಗೆ ಮಾರ್ಗದರ್ಶಿಯಾಗಿ ಕೈಸೇರಲಿವೆ.

ಪುಸ್ತಕದ ಪ್ರಕಟಣೆಗೆ ಪ್ರೋತ್ಸಾಹ, ಮಾರ್ಗದರ್ಶನ ನೀಡಿದ ನಮ್ಮ ಸಂಸ್ಥೆಯ ಎಲ್ಲ ಪ್ರಕಟಣೆಗಳಿಗೆ ಸದಾ ಬೆಂಬಲಿಸುತ್ತಿರುವ ಪ್ರಕಟಣೆಗಳ ಸಮಿತಿ ಅಧ್ಯಕ್ಷರು– ಶ್ರೇಷ್ಠ ಜಾನಪದ ತಜ್ಞರು– ಅನುಭವಿಗಳೂ ಆದ ಶ್ರೀ ಗೊ.ರು. ಚನ್ನಬಸಪ್ಪ, ಶ್ರೀಮತಿ ಬಿ.ಡಿ. ಶಾಂತ ಎಲ್.ಟಿ(ಜಿ), ಶ್ರೀಮತಿ ಬಿ.ವಿ. ರಾಮಲತಾ ಎಲ್.ಟಿ.,(ಜಿ) ಅವರು ಮರುಪರಿಶೀಲಿಸಿರುತ್ತಾರೆ. ಈ ನಿಟ್ಟಿನಲ್ಲಿ ಕೈಜೋಡಿಸಿದ ರಾಜ್ಯ ಗೈಡ್ ಸಂಘಟನಾ ಆಯುಕ್ತರಾದ ಶ್ರೀಮತಿ ಸಿ.ಮಂಜುಳ, ತರಬೇತಿ ಆಯುಕ್ತರಾದ ಶ್ರೀಮತಿ ಕೆ.ವಿ. ಶಾಮಲ ಅವರುಗಳಿಗೆ ನನ್ನ ಅಭಿನಂದನೆಗಳು.

ಎಲ್ಲ ಗೈಡ್‌ಗಳಿಗೆ ಹಾಗೂ ದಳನಾಯಕಿಯರುಗಳಿಗೆ ಅವಶ್ಯವಾಗಿ ಬೇಕಾಗಿರುವ ಈ ಪುಸ್ತಕದ ಅಂಶಗಳು ಅವರುಗಳ ಜ್ಞಾನವನ್ನು ಹೆಚ್ಚಿಸುವಲ್ಲಿ ಪರಿಣಾಮಕಾರಿಯಾಗಲಿ ಎಂದು ಆಶಿಸುತ್ತೇನೆ. ಅಂದವಾಗಿ ಮುದ್ರಿಸಿದ ಸತ್ಯಶ್ರೀ ಮುದ್ರಣಾಲಯದ ಸಿಬ್ಬಂದಿ ವರ್ಗಕ್ಕೆ – ನೆರವಾದ ಇತರರಿಗೆ ನನ್ನ ಹೃತ್ಪೂರ್ವಕ ವಂದನೆಗಳು.

ಪಿ.ಜಿ.ಆರ್. ಸಿಂಧ್ಯ
ರಾಜ್ಯ ಮುಖ್ಯ ಆಯುಕ್ತರು

ಆಶಯ ನುಡಿ

ಯಾವುದೇ ಒಂದು ಸಂಸ್ಥೆ ಅಥವಾ ಸಂಘಟನೆ ಸುಸಂಬದ್ಧವಾಗಿ ಕಾರ್ಯನಿರ್ವಹಣೆ ಮಾಡುತ್ತಿದೆ ಎಂದರೆ, ಅದರ ಸಾರಥ್ಯ ವಹಿಸಿರುವವರು ಸಮರ್ಪಣ ಭಾವದವರಾಗಿದ್ದಾರೆ ಎಂದೇ ಅರ್ಥ. ಹಾಗೆಯೇ ಯಾವುದೇ ಒಂದು ಗುಂಪು ಅಥವಾ ಹಿಂಡು ಸಮರ್ಥವಾಗಿ ತನ್ನ ಚಟುವಟಿಕೆಗಳನ್ನು ನಡೆಸುತ್ತಿದ್ದರೆ, ಅದರ ನಾಯಕ ಅಥವಾ ನಾಯಕಿಯರು ಉಪಯುಕ್ತ ಮಾರ್ಗದರ್ಶನ ನೀಡುತ್ತಿದ್ದಾರೆಂದೇ ಅರ್ಥ.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಕರ್ನಾಟಕ ರಾಜ್ಯ ಸಂಸ್ಥೆ ಆರಂಭದಿಂದಲೂ ಅಂತಹ ಸಮರ್ಪಣ ಭಾವದ ಮುಖ್ಯಸ್ಥರನ್ನೇ, ಕ್ಷೇತ್ರನಾಯಕರನ್ನೇ ಪಡೆಯುತ್ತಾ ಬಂದಿರುವುದು ಒಂದು ಪುಣ್ಯ ವಿಶೇಷ. ಈ ಕಾರಣದಿಂದಾಗಿಯೇ ನೂರು ವರ್ಷ ಕಳೆದರೂ ಕರ್ನಾಟಕ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಇಂದಿಗೂ ಹೊಸತು ಹೊಸತಾಗಿ ಬೆಳೆಯುತ್ತಿರುವುದು. ಇದು ನಿಜಕ್ಕೂ ಅಭಿಮಾನದ ಸಂಗತಿ.

ನಮ್ಮ ರಾಜ್ಯ ಸಂಸ್ಥೆಯ ಹಿರಿಮೆಯೆಂದರೆ, ರಾಷ್ಟ್ರ ಮತ್ತು ಅಂತಾರಾಷ್ಟ್ರ ಮಟ್ಟದಲ್ಲೂ ಮನ್ನಣೆ ಪಡೆದಿರುವ ನೂರಾರು ಕ್ಷೇತ್ರ ತಜ್ಞರಿರುವುದು. ಅವರೆಲ್ಲರೂ ಕ್ಷೇತ್ರ ಘಟಕ ಮಟ್ಟದಿಂದ ರಾಜ್ಯ ಮಟ್ಟದವರೆಗೆ ವಿವಿಧ ಹಂತಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ರಥ ಚಾಲನೆಯ ಮಣಿಹದಲ್ಲಿ ನಿರತರಾಗಿದ್ದಾರೆ. ಅವರೆಲ್ಲ ಮಹಾಕವಿ ಕುವೆಂಪು ಅವರು ಕೃಷಿಕನನ್ನು ಕುರಿತು, 'ಹೆಸರನ್ನು ಬಯಸದ ಅತಿ ಸುಖಕೆಳಸದ' ನೇಗಿಲ ಯೋಗಿಗಳಿದ್ದಂತೆ ಸ್ಕೌಟ್-ಗೈಡ್ ಯೋಗಿಗಳಾಗಿದ್ದಾರೆ.

ಸ್ಕೌಟ್ ಮತ್ತು ಗೈಡ್‌ಗಳಿಗೆ ಸೂಕ್ತ ತರಬೇತಿ ನೀಡಲು ಮಾರ್ಗದರ್ಶನಕ್ಕೆ ಸಾಹಿತ್ಯ ಬೇಕಾಗುತ್ತದೆ. ಈ ಅಗತ್ಯವನ್ನು ಪೂರೈಸಲು ನಮ್ಮ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ಅವರು ವಿಶೇಷಾಸಕ್ತಿ ಹೊಂದಿದ್ದು, ಆ ಪ್ರಕಟಣಾ ಯೋಜನೆಯಲ್ಲಿ ಪ್ರಸ್ತುತ "ಗುರಿ-ನೀತಿ-ನಿಯಮ ಮತ್ತು ಸಂಘಟನೆ" ಕೃತಿಯೂ ಒಂದಾಗಿದೆ. ಮುಖ್ಯ ಆಯುಕ್ತರ ನಿರೀಕ್ಷೆಯಂತೆ ಈ ಕೃತಿ ಹೊರಬಂದಿದೆ.

ಈ ಕೃತಿಯನ್ನು ಸಿದ್ಧಪಡಿಸಲು ಶ್ರಮವಹಿಸಿರುವ ಸಂಸ್ಥೆಯ ಕ್ಷೇತ್ರ ತಜ್ಞರು ಮತ್ತು ಉಪಯುಕ್ತ ಸಲಹೆ-ಸೂಚನೆಗಳನ್ನು ನೀಡಿದ ಪ್ರಕಟಣ ಸಮಿತಿಯ ಎಲ್ಲ ಸದಸ್ಯರಿಗೂ ನನ್ನ ವಂದನೆಗಳು.

ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ವ್ಯಾಪ್ತಿಯಲ್ಲಿ ಬರುವ ಎಲ್ಲರಿಗೂ ಈ ಕೃತಿ ಮಾರ್ಗದರ್ಶಕವಾಗಲಿ ಎಂದು ಆಶಿಸುತ್ತೇನೆ.

ಬೆಂಗಳೂರು

ಗೊ.ರು. ಚನ್ನಬಸಪ್ಪ
ಅಧ್ಯಕ್ಷ
ಪ್ರಕಟಣಾ ಸಮಿತಿ

ಮುನ್ನುಡಿ

ಯುವ ಗೈಡ್‌ಗಳ ಸರ್ವತೋಮುಖ ಬೆಳವಣಿಗೆಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಮಾರ್ಗದರ್ಶನ ಅನುಪಮವಾದುದು. ಸ್ಕೌಟ್ ಮತ್ತು ಗೈಡ್ ಚಳವಳಿಯಲ್ಲಿ ಅಡಕವಾಗಿರುವ ಉತ್ತಮ ಮೌಲ್ಯಗಳು, ಜೀವನ ಶಿಕ್ಷಣ, ಪರಿಸರ ಜಾಗೃತಿ, ನಾಯಕತ್ವ ತರಬೇತಿ, ವೈವಿಧ್ಯಮಯ ಚಟುವಟಿಕೆಗಳು ಮತ್ತು ಕೌಶಲಗಳು, ಜಾಗತಿಕ ಆಗುಹೋಗುಗಳ ಮಾಹಿತಿಗಳು ಕಲಿಕೆಗೆ ಪೂರಕವಾಗಿ ಸ್ವಸ್ಥ ಸಮಾಜಕ್ಕೆ ಬೇಕಾದ ಸೂಕ್ತ ಶಿಕ್ಷಣ ಗುಣಮಟ್ಟವನ್ನು ಪಠ್ಯದಲ್ಲಿ ಅಳವಡಿಸಲಾಗಿದೆ.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಷ್ಟ್ರೀಯ ಸಂಸ್ಥೆ, ನವದೆಹಲಿ ಯವರು ಗೈಡಿಂಗ್‌ಗೆ ಸಂಬಂಧಿಸಿದ ಪಠ್ಯಕ್ರಮವನ್ನು ಪರಿಷ್ಕರಿಸಿ 2016ರಲ್ಲಿ ಗುರಿ, ನೀತಿ, ನಿಯಮ ಮತ್ತು ಸಂಘಟನೆ (ಎಪಿಆರ್‌ಓ) ಪುಸ್ತಕ ಭಾಗ-3ನ್ನು ಇಂಗ್ಲೀಷ್‌ನಲ್ಲಿ ಪ್ರಕಟಿಸಿತು. ಕರ್ನಾಟಕ ರಾಜ್ಯ ಸಂಸ್ಥೆಯು ಕನ್ನಡದಲ್ಲಿ ಪ್ರಕಟಿಸಲು ನಿರ್ಧರಿಸಿದಾಗ ರಾಜ್ಯ ಜಂಟಿ ಕಾರ್ಯದರ್ಶಿಯವರಾಗಿದ್ದ ದಿ॥ ಎಸ್.ಕೆ. ಪ್ರಭಾ, ಎಲ್.ಟಿ.(ಗೈ) ಅವರು ಆಸಕ್ತಿಯಿಂದ ಆರಂಭಿಸಿದ್ದನ್ನು, ರಾಜ್ಯದ ಹಿರಿಯ ತರಬೇತಿ ನಾಯಕಿ ಶ್ರೀಮತಿ ಬಿ.ಡಿ. ಶಾಂತ, ಎಲ್.ಟಿ.(ಗೈ) ಅವರು ವಿಶೇಷ ಜವಾಬ್ದಾರಿಯೊಂದಿಗೆ ಕಾರ್ಯನಿರ್ವಹಿಸಿದ್ದು, ಈ ಕಾರ್ಯದಲ್ಲಿ ಸಹಕಾರ ನೀಡಿದ ಹಿರಿಯ ತರಬೇತಿ ನಾಯಕಿ ಶ್ರೀಮತಿ ದಿ॥ ಎನ್.ಕೆ. ಛಾಯ, ಎಲ್.ಟಿ.(ಗೈ) ಹಾಗೂ ಪ್ರಕಟಣಾ ಸಮಿತಿಯ ಸದಸ್ಯರಾದ ದಿ॥ ಕಮಲಾಕ್ಷಿ ಹೆಗಡೆ ಇವರೆಲ್ಲರಿಗೂ ನನ್ನ ಹೃತ್ಪೂರ್ವಕ ಅಭಿನಂದನೆಗಳು.

ರಾಜ್ಯ ಮುಖ್ಯ ಆಯುಕ್ತರಾದ ಶ್ರೀಯುತ ಪಿ.ಜಿ.ಆರ್. ಸಿಂಧ್ಯ ರವರಿಗೆ, ರಾಜ್ಯ ಸಂಸ್ಥೆಯ ಪ್ರಕಟನಾ ಸಮಿತಿಯ ಅಧ್ಯಕ್ಷರಾದ ಡಾ॥ ಗೊ.ರು. ಚನ್ನಬಸಪ್ಪನವರಿಗೆ ರಾಜ್ಯದ ಉಪಾಧ್ಯಕ್ಷರಾದ ಶ್ರೀಯುತ ಕೊಂಡಜ್ಜಿ ಬ. ಷಣ್ಮುಖಪ್ಪ, ರಾಜ್ಯ ಸ್ಕೌಟ್ ಆಯುಕ್ತರಾದ ಶ್ರೀ ಎಂ.ಎ. ಖಾಲಿದ್, ಶ್ರೀ ಗಂಗಪ್ಪಗೌಡ ರಾಜ್ಯ ಗೈಡ್ ಸಂಘಟನಾ ಆಯುಕ್ತರಾದ ಶ್ರೀಮತಿ ಸಿ. ಮಂಜುಳಾ, ರಾಜ್ಯ ಗೈಡ್ ತರಬೇತಿ ಆಯುಕ್ತರಾದ ಶ್ರೀಮತಿ ಕೆ.ವಿ. ಶಾಮಲ ಇವರೆಲ್ಲರಿಗೂ ನನ್ನ ಹೃತ್ಪೂರ್ವಕ ಅಭಿನಂದನೆಗಳು.

ಈ ಪುಸ್ತಕವು ರಾಜ್ಯದ ಎಲ್ಲಾ ಗೈಡರ್‌ಗಳಿಗೆ ಹಾಗೂ ಗೈಡ್ಸ್‌ಗಳಿಗೆ ಅಗತ್ಯವಾದ ಮಾಹಿತಿ ನೀಡಲು ಸಹಕಾರಿಯಾಗಲೆಂದು ಆಶಿಸುತ್ತೇನೆ. ಅಗತ್ಯವಿರುವಲ್ಲಿ ಸಚಿತ್ರಗಳೊಂದಿಗೆ ಸುಂದರ ಮುದ್ರಣದೊಂದಿಗೆ ಈ ಪುಸ್ತಕವು ಮೂಡಿಬಂದಿರುವುದು ನನಗೆ ಸಂತಸವನ್ನುಂಟು ಮಾಡಿದೆ. ಈ ಪುಸ್ತಕ ರಾಜ್ಯದ ಗೈಡ್ ವಿಭಾಗದ ನಾಯಕಿಯರುಗಳಿಗೆ ಹಾಗೂ ತರಬೇತಿಗಳಲ್ಲಿ ಭಾಗವಹಿಸುವ ಗೈಡ್‌ಗಳಿಗೆ ಸದುಪಯೋಗವಾಗಲೆಂದು ಆಶಿಸುತ್ತೇನೆ.

ಗೀತಾ ನಟರಾಜ್
ರಾಜ್ಯ ಆಯುಕ್ತರು (ಗೈಡ್ಸ್)

ವಿಶ್ವ ಗರ್ಲ್‌ಗೈಡ್ಸ್ ಮತ್ತು ಗರ್ಲ್ ಸ್ಕೌಟ್ಸ್
ಮತ್ತು
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಶತಮಾನೋತ್ಸವ ಪದಕ

ಶತಮಾನೋತ್ಸವದ ವಿಚಾರ – ಶತಮಾನೋತ್ಸವದ ಧ್ಯೇಯ ವಾಕ್ಯ

ಬಿತ್ತಿ–Plant : ಗೈಡ್ ಕಾರ್ಯಕ್ರಮಗಳನ್ನು ಸಮುದಾಯದಲ್ಲಿ ಮಾಡಿ.

ಬೆಳೆಯಿರಿ–Grow : ಕಾರ್ಯ ಯೋಜನೆಗಳನ್ನು ಅನುಷ್ಠಾನಗೊಳಿಸಿ

ಹಂಚಿಕೊಳ್ಳಿ–Share : ಫಲಗಳನ್ನು ನೀವು ಮತ್ತು ನಿಮ್ಮ ಸಮುದಾಯದವರು ಹಂಚಿಕೊಂಡು ಅನುಭವಿಸಿ

ಪರಿವಿಡಿ

ವಿಷಯ		ಪುಟಸಂಖ್ಯೆ
	ಅಧ್ಯಾಯ – 1	
1.	ಗೈಡ್	3
2.	ಗೈಡ್ ದಳ	3
3.	ಗೈಡ್ ನಾಯಕಿ – ಸಹ ನಾಯಕಿ	4
4.	ಗೈ. ನಾ – ಸ. ನಾ. : ಅರ್ಹತೆ	4
5.	ಗೈ. ನಾ – ಸ. ನಾ. : ಸಮವಸ್ತ್ರ	5
6.	ಜಲಗೈಡ್ ನಾಯಕಿ – ಸ. ನಾ. : ಸಮವಸ್ತ್ರ	10
7.	ವಾಯುಗೈಡ್ ನಾಯಕಿ – ಸ. ನಾ. : ಸಮವಸ್ತ್ರ	10
8.	ಅಷ್ಟಕ ಪದ್ಧತಿ	10
9.	ಗೈಡ್ : ಪ್ರವೇಶದ ಅವಶ್ಯಕತೆಗಳು	13
10.	ಗೈಡ್ : ಸಮವಸ್ತ್ರ	16
11.	ಜಲಗೈಡ್ : ಸಮವಸ್ತ್ರ	20
12.	ವಾಯುಗೈಡ್ : ಸಮವಸ್ತ್ರ	20
13.	ಗೈಡ್‌ಗಳ ಪ್ರಗತಿಪರ ಯೋಜನೆ	20
14.	ಪ್ರಥಮ ಸೋಪಾನದ ಗೈಡ್ ಪರೀಕ್ಷೆಗಳು	22
15.	ದ್ವಿತೀಯ ಸೋಪಾನದ ಗೈಡ್ ಪರೀಕ್ಷೆಗಳು	27
16.	ತೃತೀಯ ಸೋಪಾನದ ಗೈಡ್ ಪರೀಕ್ಷೆಗಳು	33

17. ರಾಜ್ಯ ಪುರಸ್ಕಾರ ಗೈಡ್ ಪರೀಕ್ಷೆಗಳು 41

18. ರಾಷ್ಟ್ರಪತಿ ಗೈಡ್ ಪುರಸ್ಕಾರ ಪರೀಕ್ಷೆಗಳು 46

20. ಗೈಡ್ : ಹೊರಸಂಚಾರ. ಚಾರಣ 54

19. ಗೈಡ್ : ಪ್ರಾವೀಣ್ಯತಾ ಪದಕಗಳು 57

ಅಧ್ಯಾಯ – 2

ಗೈಡ್ಸ್‌ಗಳ ಪ್ರಾವೀಣ್ಯತಾ ಪದಕಗಳು 57

ಅಧ್ಯಾಯ – 3

ಪ್ರಾದೇಶಿಕ ಆಸಕ್ತಿಯ ಪದಕಗಳು 150

---

* ಗೈ. ನಾ. : ಗೈಡ್ ನಾಯಕಿ ಸ.ನಾ. : ಸಹ ನಾಯಕಿ

ಅಧ್ಯಾಯ–1

14 ಕಾರ್ಯಕ್ರಮದ ಆದರ್ಶಗಳು

ಓರ್ವ ಗೈಡ್ ಪ್ರವೇಶ್‌ದಿಂದ ರಾಷ್ಟ್ರಪತಿ ಪುರಸ್ಕಾರದವರೆಗಿನ ಕಾರ್ಯಕ್ರಮಗಳನ್ನು ಮುಗಿಸಿ ಈ ಕೆಳಗಿನ ಸಾಮರ್ಥ್ಯಗಳನ್ನು ಪಡೆಯುವಳು:

1. ಆರೋಗ್ಯ ಸಮರ್ಥ ಯುವತಿಯಾಗಲು ಚಾರಿತ್ರ್ಯವನ್ನು ಅಭಿವೃದ್ಧಿಗೊಳಿಸಿಕೊಳ್ಳುವಳು.
2. ಉತ್ತಮ ನಾಗರಿಕತೆಯ ಮೂಲ ತತ್ವವನ್ನು ಅನುಸರಿಸುವಳು.
3. ಆತ್ಮವಿಶ್ವಾಸ ಹಾಗೂ ಸ್ವಾವಲಂಬನೆಯನ್ನು ಬೆಳೆಸಿಕೊಳ್ಳಲು ಅವಶ್ಯಕ ಕೌಶಲಗಳನ್ನು ಅಭ್ಯಾಸ ಮಾಡಿ ಇತರರಿಗೆ ಸಹಾಯ ಮಾಡಲು ಬಳಸುವಳು.
4. ಪೂರಕ ಸಮಗ್ರ ಚಟುವಟಿಕೆ ಹಾಗೂ ಸವಾಲುಗಳ ಮೂಲಕ ಸರ್ವತೋಮುಖ ಅಭಿವೃದ್ಧಿ ಹೊಂದುವಳು.
5. ತನ್ನ ಸಾಮರ್ಥ್ಯದ ಅರಿವನ್ನು ಹೊಂದಿ ಸಮುದಾಯ ಸೇವೆಯಲ್ಲಿ ಬಳಸಲು ಸಮರ್ಥಳಾಗುವಳು.
6. ಪ್ರಕೃತಿಯ ಅದ್ಭುತಗಳನ್ನು ವೀಕ್ಷಿಸಿ, ಮೆಚ್ಚಿ, ಪ್ರಶಂಸಿಸುವ ಮೂಲಕ ಪ್ರಕೃತಿಯನ್ನು ಕಾಪಾಡಲು, ಅಭಿವೃದ್ಧಿಗೊಳಿಸಲು ಮುಂದಾಗುವಳು.

7. ಇತರರಿಗೆ ಉಪಯುಕ್ತವಾಗುವ ವಸ್ತುಗಳನ್ನು ತಯಾರಿಸುವಳು.

8. ಸಾರ್ವಜನಿಕ ಆಸ್ತಿಯನ್ನು ತನ್ನ ಆಸ್ತಿ ಎಂದು ಭಾವಿಸಿ ಅದನ್ನು ಸಂರಕ್ಷಿಸುವಳು.

9. ತನ್ನ ಸಮುದಾಯದ ಸದಸ್ಯೆಯಾಗಿ ತನ್ನನ್ನು ಗುರುತಿಸಿಕೊಳ್ಳುವ ಮೂಲಕ ದೇಶಕ್ಕೆ ತನ್ನ ಕರ್ತವ್ಯವನ್ನು ಗ್ರಹಿಸುವಳು.

10. ಸಾಹಸ ಚಟುವಟಿಕೆಯಲ್ಲಿ ಭಾಗವಹಿಸಲು ಮತ್ತು ಸಾಹಸ ಸ್ನೇಹಿಯಾಗಲು ಗೈಡಿಂಗ್‌ನ ಕೌಶಲಗಳನ್ನು ಅಭಿವೃದ್ಧಿಪಡಿಸಿ ಕೊಂಡು ಬಳಸುವಳು.

11. ರಾಷ್ಟ್ರೀಯ ಸಂಸ್ಕೃತಿ ಮತ್ತು ಪರಂಪರೆಯನ್ನು ತಿಳಿದುಕೊಂಡು ಅವುಗಳನ್ನು ಸಂರಕ್ಷಿಸುವಳು.

12. ವೈಯಕ್ತಿಕ ಮತ್ತು ಸಾಮೂಹಿಕವಾಗಿ ಸಂರಕ್ಷಣೆಯ ಸಂಪನ್ಮೂಲ ವನ್ನು ಸಂರಕ್ಷಿಸುವಳು ಹಾಗೂ ಇತರರಿಗೆ ಪ್ರಕೃತಿ ಸಂರಕ್ಷಣೆಯ ಶಿಕ್ಷಣವನ್ನು ನೀಡುವಳು.

13. ಕ್ರಿಯಾಶೀಲ ನಾಯಕಿ ಕ್ರಿಯಾ ಗುಣಗಳನ್ನು ಅವಳು ಅಭಿವೃದ್ಧಿಪಡಿಸಿ ಕೊಳ್ಳುವ ಮೂಲಕ ಎಲ್ಲ ಸಂದರ್ಭಗಳಲ್ಲೂ ಪರಿಣಾಮಕಾರಿಯಾದ ನಾಯಕತ್ವವನ್ನು ವಹಿಸುವಳು.

14. ತನ್ನ ದೇಶ ಮತ್ತು ಜನರ ಅಧ್ಯಯನ ಮಾಡುವ ಮೂಲಕ ರಾಷ್ಟ್ರೀಯ ಭಾವೈಕ್ಯತೆಯನ್ನು ಬಲಪಡಿಸಲು ಸಹಾಯ ಮಾಡುವಳು.

1. **ಗೈಡ್ :** ಭಾರತದ ಪೌರತ್ವವನ್ನು ಹೊಂದಿರುವ ಮತ್ತು 10 ವರ್ಷ ತುಂಬಿರುವ ಹಾಗೂ 17 ವರ್ಷ ತುಂಬದೇ ಇರುವ ಬಾಲಕಿಯು ಗೈಡ್ ಆಗಲು ಅರ್ಹಳು. ಅವಳು ಗೈಡ್ ಪ್ರತಿಜ್ಞೆ ಮತ್ತು ನಿಯಮವನ್ನು ಒಪ್ಪಿಕೊಂಡರೆ ಗೈಡ್ ದಳದ ಸದಸ್ಯಳಾಗಲು ಅರ್ಹಳಾಗುವಳು. ಒಂದು ವೇಳೆ 18 ವರ್ಷದ ವರೆಗೆ. ಶಾಲೆಯಲ್ಲೇ ಮುಂದುವರಿದರೆ ಗೈಡ್‌ದಳದಲ್ಲಿ ಮುಂದುವರೆಯಲು ಅವಕಾಶ ನೀಡಲಾಗುವುದು.

2. **ಗೈಡ್ ದಳ : (ಮಾರ್ಗದರ್ಶಿ ದಳ = Guide Company) :**

(i) ಒಂದು ದಳದಲ್ಲಿ ಕನಿಷ್ಟ 12 ಗರಿಷ್ಟ 32 ಗೈಡ್‌ಗಳಿರಬೇಕು.

(ii) ಗೈಡ್ ದಳವು (Guide Company) ಹಕ್ಕಿಗಳ ಹಿಂಡು (Bul Bul Flock) ಮತ್ತು ರಕ್ಷಕಿ ತಂಡಗಳನ್ನು (Ranger Team) ಹೊಂದಿರುವ ಗುಂಪು ಇದ್ದರೆ, ಆ ಗುಂಪಿನ (Group) ಸದಸ್ಯತ್ವವನ್ನು ಪಡೆಯುವುದು. ಗುಂಪು ಇಲ್ಲದಿದ್ದಲ್ಲಿ ಗೈಡ್ ದಳ ಒಂದನ್ನೇ ಗುಂಪು ಎಂದು ಪರಿಗಣಿಸಲಾಗುವುದು. (ಒಂದೇ ಆಡಳಿತಕ್ಕೆ ಒಳಪಟ್ಟ ಒಂದಕ್ಕಿಂತ ಹೆಚ್ಚು ಹಿಂಡು/ದಳ/ತಂಡವಿದ್ದು ಅಥವಾ ಒಂದಕ್ಕಿಂತ ಹೆಚ್ಚು ವಿಭಾಗಗಳಿದ್ದರೆ ಅಥವಾ ಒಂದೇ ಹಿಂಡು/ದಳ/ತಂಡವಿದ್ದರೂ ಭಾರತ ಸ್ಕೌಟ್ಸ್–ಗೈಡ್ಸ್‌ನ ವ್ಯವಸ್ಥೆಯಲ್ಲಿ ಗುಂಪು ಎಂದು ಪರಿಗಣಿಸಲಾಗುವುದು).

(iii) ಪ್ರತಿ ಗೈಡ್ ದಳವೂ ನೋಂದಾಯಿಸಲ್ಪಟ್ಟಿರಬೇಕು.

(iv) ಪ್ರತಿ ದಳಕ್ಕೂ ತನ್ನದೇ ಆದ ನಾಮಧೇಯವಿರಬೇಕು. ಗೈಡ್ ದಳವು ಗುಂಪಿನ ಸದಸ್ಯರಾಗಿದ್ದರೆ ಆ ಗುಂಪಿನ ಹೆಸರನ್ನೇ ಹೊಂದಿರಬೇಕು. ಗುಂಪಿಗೆ ಸ್ಥಳೀಯ ಅಥವಾ ಇತಿಹಾಸ

ಪ್ರಸಿದ್ಧ ಭಾರತೀಯ ಮಹಿಳೆಯರ ಹೆಸರನ್ನು ಇಡಬಹುದು. ಪ್ರತಿ ಗುಂಪು ಸ್ಥಳೀಯ ಅಥವಾ ಜಿಲ್ಲಾ ಸಂಸ್ಥೆಯು ನೀಡಿದ ಕ್ರಮಸಂಖ್ಯೆಯನ್ನು ಹೊಂದಿರಬೇಕು.

3. **ಗೈಡ್ ನಾಯಕಿ (Guide Captain) – ಗೈಡ್ ಸಹನಾಯಕಿ (Assistant Guide Captain)**

(i) ಒಂದು ಗೈಡ್ ದಳಕ್ಕೆ ಒಬ್ಬ ನಾಯಕಿ ಇರಬೇಕು. ಆದರೆ ಸಹನಾಯಕಿಯರು ಒಬ್ಬರಿಗಿಂತ ಹೆಚ್ಚಿರಬಹುದು.

(ii) ನಾಯಕಿ ಮತ್ತು ಸಹನಾಯಕಿಯರು ಗುಂಪು ಇದ್ದಲ್ಲಿ ಗುಂಪಿನ ನಾಯಕರ ಸಾಮಾನ್ಯ ಮೇಲ್ವಿಚಾರಣೆಯಲ್ಲಿ ಕಾರ್ಯ ನಿರ್ವಹಿಸುವುದು. ಆದರೆ ಗೈಡ್ ನಾಯಕಿಯವರು ತನ್ನ ದಳದ ಆಗುಹೋಗುಗಳಿಗೆ ತಾವೇ ಜವಾಬ್ದಾರರಾಗಿರುತ್ತಾರೆ ಆಡಳಿತ, ಶಿಸ್ತು, ಹಣಕಾಸು, ಮುಂತಾದ ವಿಚಾರಗಳನ್ನು ಗುಂಪಿನ ಗೌರವನ್ಯಾಯ ಸಭೆಯಲ್ಲಿ ಪ್ರಸ್ತಾಪಿಸಲಾಗುವುದು. ಸಹನಾಯಕಿಯು ನಾಯಕಿಗೆ ಸಹಾಯಹಸ್ತ ನೀಡುವಳು.

(iii) ಸಂದರ್ಭಕ್ಕೆ ತಕ್ಕಂತೆ ಸ್ಥಳೀಯ ಅಥವಾ ಜಿಲ್ಲಾ ಗೈಡ್ ಆಯುಕ್ತರ ಶಿಫಾರಸ್ಸಿನ ಮೇರೆಗೆ ರಾಜ್ಯ ಮುಖ್ಯ ಆಯುಕ್ತರು ರಾಜ್ಯ ಗೈಡ್ ಆಯುಕ್ತ ರೊಡನೆ ಸಮಾಲೋಚಿಸಿ ಗೈಡ್ ನಾಯಕಿ ಮತ್ತು ಸಹನಾಯಕಿಯರನ್ನು ನೇಮಕ ಮಾಡುವರು.

4. **ಗೈಡ್ ನಾಯಕಿ – ಗೈಡ್ ಸಹನಾಯಕಿ ಅರ್ಹತೆ (Qualification of Guide Captain & Asst. Guide Captain) :**

(i) (ಅ) 21 ವರ್ಷ ತುಂಬಿದ ಭಾರತದ ಪೌರತ್ವ ಹೊಂದಿರುವ ಮಹಿಳೆಯು ನಾಯಕಿಯಾಗಲು ಅರ್ಹಳಾಗಿರುತ್ತಾಳೆ.

(ಆ) 18ವರ್ಷ ತುಂಬಿದ ಮಹಿಳೆಯು ಸಹನಾಯಕಿಯಾಗಲು ಅರ್ಹಳಾಗಿರುತ್ತಾಳೆ.

(ii) ಅವರುಗಳು ಮೆಟ್ರಿಕ್ಯುಲೇಷನ್ (SSLC) ಅಥವಾ ತತ್ಸಮಾನವಾದ ವಿದ್ಯಾರ್ಹತೆಯನ್ನು ಪಡೆದಿರಬೇಕು. ವಿಶೇಷ ಸಂದರ್ಭಗಳಲ್ಲಿ ಜಿಲ್ಲಾ ಗೈಡ್ ಆಯುಕ್ತರ ಶಿಫಾರಸ್ಸಿನ ಮೇರೆಗೆ, ರಾಜ್ಯ ಪ್ರಧಾನ ಆಯುಕ್ತರು ವಿದ್ಯಾರ್ಹತೆ ಕುರಿತಾಗಿ ವಿನಾಯಿತಿ ನೀಡಬಹುದು.

(iii) ಅವರುಗಳು ಸತ್ ಚಾರಿತ್ರ್ಯ ಸನ್ನಡತೆ ಮತ್ತು ಉತ್ತಮ ಪೂರ್ವಚರಿತ್ರೆ (ಸಾಮಾಜಿಕ ಹಿನ್ನೆಲೆ) ಹೊಂದಿರಬೇಕು.

(iv) ಅವರುಗಳು ಗೈಡ್ ಚಳವಳಿಯ ಬಗ್ಗೆ ಮತ್ತು ವಿಧಾನಗಳ ಬಗ್ಗೆ ತಿಳಿದುಕೊಂಡಿರಬೇಕು. ಚಳವಳಿಯ ಧಾರ್ಮಿಕ ಮತ್ತು ನೈತಿಕ ಬುನಾದಿಯು ಬಗ್ಗೆ ಮೆಚ್ಚುಗೆಯುನ್ನು ಹಾಗೂ ಗು.ನೀ.ನಿ.ಸಂ.ನೆ ಬಗ್ಗೆ ಸಂಪೂರ್ಣ ಅರಿವನ್ನು ಹೊಂದಿರಬೇಕು. ಇವುಗಳನ್ನು ತಮ್ಮ ಕಾರ್ಯಗಳಲ್ಲಿ ಅಳವಡಿಸಿಕೊಳ್ಳಲು ಸಮರ್ಥರಾಗಿರಬೇಕು.

(v) ಅವರು ಬಾಲಕಿಯರಲ್ಲಿ ವಿಶೇಷ ಆಸಕ್ತಿಯುಳ್ಳವರಾಗಿರಬೇಕು.

(vi) ಅವರು ರಾಷ್ಟ್ರೀಯ ಸಂಸ್ಥೆ ಗೊತ್ತುಪಡಿಸಿರುವ ತರಬೇತಿಗಳನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿಕೊಳ್ಳಬೇಕು..

5. ಗೈಡ್ ನಾಯಕಿ – ಗೈಡ್ ಸಹನಾಯಕಿ : ಸಮವಸ್ತ್ರ

ಸಮವಸ್ತ್ರವನ್ನು ಈ ಕೆಳಕಂಡಂತೆ ಧರಿಸಬೇಕು :

1. ಸಮವಸ್ತ್ರದ ಉಡುಪಿನ ಮಾದರಿಗಳು :

1.1 ಸಲ್ವಾರ್ – ಕಮೀಜ – ದುಪ್ಪಟ್ಟ :

ಅಪಾರದರ್ಶಕ ಸಾದಾ ಬಿಳಿಯ ವಸ್ತ್ರದ ಕಮೀಜ ಧರಿಸಬೇಕು. ಇದರ ಉದ್ದ ಮೊಳಕಾಲಿಗಿಂತ 4 ಸೆಂ.ಮೀ. ಕೆಳಗಿರಬೇಕು. ಇದರ ಮೇಲೆ ಎರಡು ಮುಚ್ಚಿಕೆ ಇರುವ ಜೇಬುಗಳು ಮತ್ತು ಪಾರ್ಶ್ವಜೇಬುಗಳು (ಜುಬ್ಬದ ಜೇಬಿನಂತೆ) ಇರಬೇಕು. ಮೊಳಕೈಗಿಂತ ತೋಳಿನ ಉದ್ದ 8 ಸೆಂ. ಮೀ. ಮೇಲಕ್ಕೆ ಇರಬೇಕು. ಅಂಚನ್ನು 4 ಸೆಂ.ಮೀ. ಮೇಲಕ್ಕೆ ಮಡಿಚಿ ಹೊಲಿದಿರಬೇಕು. ತೆರೆದ ಕ್ರೀಡಾ ಕತ್ತುಪಟ್ಟಿ (Open Sports Collar) ಮತ್ತು ಎರಡು ಭುಜ ಪಟ್ಟಿಗಳು ಇರಬೇಕು.

ಸೆಲ್ವಾರ್ ಬಿಳಿಯ ಬಣ್ಣದ್ದಾಗಿರಬೇಕು. ಸೆಲ್ವಾರ್ ಮತ್ತು ಕಮೀಜ್ ಬಿಗಿಯಾಗಿರಬಾರದು. ದುಪ್ಪಟ್ಟ ಕಡು (dark) ಆಕಾಶನೀಲಿ ಬಣ್ಣದ ಅಪಾರದರ್ಶಕ ವಸ್ತ್ರದಿಂದ ತಯಾರಿಸಿಕೊಳ್ಳಬೇಕು.

ಅಥವಾ

1.2 ಗಿಡ್ಡ ಲಂಗ ಮತ್ತು ರವಿಕೆ – (Midi skirt & Blouse):

ಗಿಡ್ಡಲಂಗವನ್ನು ಅಪಾರದರ್ಶಕ ಕಡು ಆಕಾಶನೀಲಿ ಬಣ್ಣದ ವಸ್ತ್ರದಿಂದ ಹೊಲಿಸಿಕೊಳ್ಳಬೇಕು. ಎರಡು ಪಾರ್ಶ್ವಜೇಬುಗಳು ಇರಬೇಕು. ಹಿಂದೆ ಸ್ವಲ್ಪ ಸೀಳಿರಬೇಕು. ಮಿಡಿಯ ಉದ್ದ ಮೊಣಕಾಲು ಮತ್ತು ಪಾದದ ಮಧ್ಯದಷ್ಟಿರಬೇಕು.

ರವಿಕೆಯನ್ನು ಅಪಾರದರ್ಶಕ ಸಾದಾ ಬಿಳಿಯ ವಸ್ತ್ರದಿಂದ ತಯಾರಿಸಿಕೊಳ್ಳಬೇಕು. ಎರಡು ಮುಚ್ಚಿಕೆಯುಳ್ಳ ಮೇಲುಜೇಬು ಇರಬೇಕು. ಇದರ ತೋಳು ಮೊಣಕೈಯಿಂದ 8 ಸೆಂ. ಮೀ. ಮೇಲಕ್ಕೆ ಇರಬೇಕು. ಅಂಚನ್ನು 4 ಸೆಂ.ಮೀ ಮೇಲಕ್ಕೆ ಮಡಿಚಿ ಹೊಲಿದಿರಬೇಕು. ತೆರೆದ ಕ್ರೀಡಾ ಕತ್ತುಪಟ್ಟಿ ಮತ್ತು ಎರಡು ಭುಜಪಟ್ಟಿ ಇರಬೇಕು. ಉದ್ದ ಸೊಂಟದಿಂದ 8 ಸೆಂ. ಮೀ. ಕೆಳಗಿರಬೇಕು. ರವಿಕೆಯ ಪಾರ್ಶ್ವಗಳು ಸೀಳಿರಬೇಕು. ಉಡುಪು ಬಿಗಿಯಾಗಿರಬಾರದು.

ಅಥವಾ

(i) 3. ಸೀರೆ ಮತ್ತು ರವಿಕೆ

ಸೀರೆ ಅಪಾರದರ್ಶಕ ಕಡು ಆಕಾಶನೀಲಿ ಬಣ್ಣದ್ದಾಗಿರಬೇಕು.

ರವಿಕೆಯನ್ನು ಅಪಾರದರ್ಶಕ ಸಾದಾ ಬಿಳಿಯ ವಸ್ತ್ರದಿಂದ ತಯಾರಿಸಿಕೊಳ್ಳಬೇಕು. ಎರಡು ಮುಚ್ಚಿಕೆಯುಳ್ಳ ಮೇಲುಜೇಬು ಇರಬೇಕು. ಇದರ ತೋಳು ಮೊಣಕೈಯಿಂದ 8. ಸೆಂ.ಮೀ. ಮೇಲಿರಬೇಕು. ಅಂಚನ್ನು 4. ಸೆಂ.ಮೀ. ಮೇಲಕ್ಕೆ ಮಡಚಿ ಹೊಲಿದಿರಬೇಕು. ತೆರೆದ ಕ್ರೀಡಾ ಕತ್ತುಪಟ್ಟಿ ಮತ್ತು ಎರಡು ಭುಜಪಟ್ಟಿ ಇರಬೇಕು. ಉದ್ದ ಸೊಂಟದಿಂದ 8. ಸೆಂ. ಮೀ. ಕೆಳಗಿರಬೇಕು. ರವಿಕೆಯ ಪಾರ್ಶ್ವಗಳು ಸೀಳಿರಬೇಕು. ಉಡುಪು ಬಿಗಿಯಾಗಿರಬಾರದು.

ಉಡುಪಿನ ಜೊತೆಗೆ ಧರಿಸಬೇಕಾದ ಕಡ್ಡಾಯ ಭಾಗಗಳು :

(ii) **ಸೊಂಟಪಟ್ಟಿ (Belt) :** ರಾಷ್ಟ್ರೀಯ ಸಂಸ್ಥೆ ಸರಬರಾಜು ಮಾಡುವ ಅಧಿಕೃತ ಹಿತ್ತಾಳೆ ಜೋಡಕ (Buckle) ಹೊಂದಿರುವ ಕಂದು ಬಣ್ಣದ ನೈಲಾನ್ ಸೊಂಟದ ಪಟ್ಟಿ ಧರಿಸುವುದು.

(iii) **ಕಂಠವಸ್ತ್ರ (Scarf) :** ಹಸಿರು, ನೇರಳೆ ಮತ್ತು ಹಳದಿ ಬಣ್ಣಗಳನ್ನು ಹೊರತುಪಡಿಸಿ ಸ್ಥಳೀಯ ಅಥವಾ ಜಿಲ್ಲಾ ಸಂಸ್ಥೆ ಅನುಮೋದಿಸಿದ ನಿಮ್ಮ ಆಯ್ಕೆಯ ಬಣ್ಣದ ಕಂಠವಸ್ತ್ರವನ್ನು ನಿಮ್ಮ ದಳಕ್ಕೆ ಮಾಡಿಸುವುದು. ಇದನ್ನು ಭುಜ ಮತ್ತು ಕತ್ತುಪಟ್ಟಿ ಸುತ್ತುವರಿಸಿ ಕಉಂಗುರದ (ಕಂಠವಸ್ತ್ರದ ಉಂಗುರ– Woggle) ಮೂಲಕ ಹಾಯಿಸಿ ಹಾಕಿಕೊಳ್ಳಬೇಕು. ಕಂಠವಸ್ತ್ರವು ಕನಿಷ್ಠ 70 ಸೆಂ.ಮೀ. ಗರಿಷ್ಠ 80 ಸೆಂ.ಮೀ. ಪಾರ್ಶ್ವವುಳ್ಳ ತ್ರಿಕೋನ ವಸ್ತ್ರವಾಗಿರಬೇಕು.

(iv) **ಕಾಲುಚೀಲ :** ಕಂದುಬಣ್ಣದ ಕಾಲು ಚೀಲ ಧರಿಸುವುದು.

(v) **ಪಾದರಕ್ಷೆ :** ಕಪ್ಪು ಚರ್ಮದ ಪಾದಮುಚ್ಚುವ ಬೂಟು ಧರಿಸುವುದು.

ಅಥವಾ

ವೈದ್ಯಕೀಯ ಸಲಹೆಯ ಮೇರೆಗೆ ಬೂಟು (Sandles) ಧರಿಸಬಹುದು.

(vi) **ಕೇಶಾಲಂಕಾರ :** ಕೇಶವನ್ನು ಅಚ್ಚುಕಟ್ಟಾಗಿ ಕಟ್ಟಿರಬೇಕು. ಕರೀ ರಿಬ್ಬನ್ ಅಥವಾ ಸಾದಾ ಕಪ್ಪು ಕೇಶ ಬಂಧಕ (hair band) ಧರಿಸುವುದು.

(vii) **ಸದಸ್ಯತ್ವದ ಪದಕ :** ಹಳದಿ ಬಣ್ಣದ ಫ್ಲೂರಡೆಲಿಸ್ ಅದರ ಮಧ್ಯೆ ತ್ರಿದಳ, ಅದರ ಮಧ್ಯೆ ಅಶೋಕ ಚಕ್ರಹೊಂದಿರುವ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಲಾಂಛನವನ್ನು ಎಡತೋಳಿನ ಮಧ್ಯೆ ಧರಿಸುವುದು.

(viii) **ಭುಜಪದಕ :** ಬಲ ಭುಜಪಟ್ಟಿಯ ಕೆಳಗೆ ಬಿಳಿಯ 8 ಸೆಂ. ಮೀ. ಉದ್ದದ ಮತ್ತು 1.5 ಸೆಂ.ಮೀ. ಅಗಲದ ಪಟ್ಟಿಯ ಮೇಲೆ ಕೆಂಪುಬಣ್ಣದಲ್ಲಿ ಗುಂಪಿನ ಸಂಖ್ಯೆ ಮತ್ತು ಹೆಸರನ್ನು ಹೊಂದಿರುವ ಪಟ್ಟಿಯನ್ನು ಧರಿಸುವುದು.

(ix) **ಉಣ್ಣೆಯ ಮೇಲಂಗಿ** (Cardigan) ಸಾದಾ ಕಪ್ಪುಬಣ್ಣದ ಸ್ವೆಟರ್ ಧರಿಸುವುದು. ಕಾಲಕ್ಕೆ ಅನುಗುಣವಾಗಿ ಅರೆ ತೋಳಿನ ಉಣ್ಣೆ ಅಂಗಿಯನ್ನೂ ಧರಿಸಬಹುದು.

(x) **ಶ್ರೇಣಿ ಪದಕ :** (Rank Badge) ಪದಕವು ಶ್ವೇತ ಲೋಹದ ವಿವಿಧ ಬಣ್ಣಗಳ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಲಾಂಛನವನ್ನು ಹೊಂದಿರುತ್ತದೆ. ಬಣ್ಣಗಳು ಈ ಕೆಳಗಿನಂತೆ ಇರುತ್ತವೆ:

ಅ) **ಗೈಡ್ ನಾಯಕಿ ಪದಕ :** ಹಸಿರು ಬಣ್ಣದ ಲಾಂಛನದ ಸುತ್ತಲೂ ಹಸಿರು ಬಣ್ಣದ ಅಂಚನ್ನು ಹೊಂದಿರುತ್ತದೆ. ಇದನ್ನು ಬಲ ಜೇಬಿನ ಮುಚ್ಚಿಕೆಯ ಅಂಚಿನ ಮೇಲೆ ಸೆರಗು ಮರೆಮಾಡದಂತೆ ಧರಿಸುವುದು.

ಆ) **ಸಹನಾಯಕಿ ಪದಕ :** ಹಸಿರು ಬಣ್ಣದ ಲಾಂಛನದ ಸುತ್ತಲೂ ಕೆಂಪು ಬಣ್ಣದ ಅಂಚನ್ನು ಹೊಂದಿರುತ್ತದೆ. ಇದನ್ನು ಬಲ

ಜೇಬಿನ ಮುಚ್ಚಿಕೆಯ ಅಂಚಿನ ಮೇಲೆ ಸೆರಗು ಮರೆಮಾಡುವಂತೆ ಧರಿಸುವುದು.

ಇ) **ವಿಶ್ವಗೈಡ್ ಪದಕ :** ವಸ್ತ್ರಪಟ್ಟಿಯ ವಿಶ್ವಗೈಡ್ ಪದಕವನ್ನು ಬಲತೋಳಿನ ಮಧ್ಯದಲ್ಲಿ ಧರಿಸುವುದು.

ಭಾರತ ಸ್ಕೌಟ್ ಮತ್ತು ಗೈಡ್ಸ್‌ನ ಹೆಸರು ಮತ್ತು ರಾಷ್ಟ್ರಧ್ವಜದ ಚಿತ್ರವಿರುವ, ರಾಷ್ಟ್ರೀಯ ಸಂಸ್ಥೆ ಸರಬರಾಜಾದ ವಸ್ತ್ರ ಪಟ್ಟಿಯ ಬಲ ಜೇಬಿನ ಮೇಲೆ ಧರಿಸತಕ್ಕದ್ದು. ಪಟ್ಟಿಯ ಅಳತೆ 11cm×2cm ಇರಬೇಕು. ರಾಷ್ಟ್ರಧ್ವಜದ ಚಿತ್ತಾರ 3cm×2cm.

ಈ) **ಶಿಬಿರದ ಸಮವಸ್ತ್ರ :** ಕಡು ಆಕಾಶ ನೀಲಿ ಬಣ್ಣದ ಅಪಾರದರ್ಶಕ ಸಲ್ವಾರ್ ಕಮೀಜ್ ಮತ್ತು ದುಪ್ಪಟ್ಟ ಧರಿಸಬೇಕು. ಮೇಲೆ ಹೇಳಿರುವ ಮಾದರಿಯನ್ನು ಅನುಸರಿಸಬೇಕು.

ಉ) **ಕೆಲಸದ ಸಮಯದ ಸಮವಸ್ತ್ರ:** ಕೆಲಸ ಮಾಡುವ ಸಮಯದಲ್ಲಿ / ಕ್ಷೇತ್ರ ಚಟುವಟಿಕೆಗಳಲ್ಲಿ ಭಾಗವಹಿಸುವಾಗ ಕಡುನೀಲಿ ಜೀನ್ಸ್ ಪ್ಯಾಂಟ್ ಮತ್ತು ಭಾರತ್ ಸ್ಕೌಟ್ ಗೈಡ್ ಚಿಹ್ನೆ ಇರುವ ಸಾದಾ ಆಕಾಶ ನೀಲಿ ಬಣ್ಣದ ಟಿ–ಷರ್ಟ್ ಧರಿಸುವುದು ಮತ್ತು ಅನುಕೂಲಕರ ಷೂಸ್ ಧರಿಸುವುದು. ತಲೆಗೆ 'ಪಿ' ಕ್ಯಾಪನ್ನು ಹೊರಸಂಚಾರಕ್ಕೆ ಹೋಗುವಾಗ ಧರಿಸಬೇಕು.

ಊ) ಕರಿ ಸಂಚಿಯನ್ನು ಧರಿಸಬಹುದು. ಆದರೆ ಧ್ವಜ ಸಮಾರಂಭ/ ದೀಕ್ಷಾ ಸಮಾರಂಭಗಳಲ್ಲಿ ಧರಿಸಬಾರದು.

ಋ) **ಲೋಹದ ಪದಕ:** ಸಮವಸ್ತ್ರದಲ್ಲಿ ಇಲ್ಲದಾಗ ಧರಿಸಬಹುದು.

ೠ) ಕತ್ತಿನ ಸುತ್ತಲೂ ಬಿಳಿಯ ದಾರದಲ್ಲಿ ಸೀಟಿಯನ್ನು ಧರಿಸಬೇಕು.

ಎ) ಆಭರಣಗಳು: ಸಾಂಪ್ರದಾಯಿಕ/ ಧಾರ್ಮಿಕ ಹಿನ್ನೆಲೆ ಇರುವ ಕಡ್ಡಾಯ ಒಡವೆಗಳನ್ನು ಧರಿಸಬಹುದು.

6. ಜಲಗೈಡ್ ನಾಯಕಿ – ಗೈಡ್ ಸಹನಾಯಕಿ : ಸಮವಸ್ತ್ರ

ಇವರೂ ಸಹ ಗೈಡ್ ನಾಯಕಿ ಮತ್ತು ಸಹನಾಯಕಿಯರ ಸಮವಸ್ತ್ರದ ಮಾದರಿಯನ್ನೇ ಧರಿಸುವುದು, ಆದರೆ ಬಲ ಜೇಬಿನ ಮೇಲೆ ಜಲಗೈಡ್ ಪದಕವನ್ನು ಧರಿಸುವುದು.

7. ವಾಯು ಗೈಡ್ ನಾಯಕಿ – ಗೈಡ್ ಸಹನಾಯಕಿ : ಸಮವಸ್ತ್ರ

ಇವರೂ ಸಹ ಗೈಡ್ ನಾಯಕಿ ಮತ್ತು ಸಹನಾಯಕಿಯರ ಸಮವಸ್ತ್ರದ ಮಾದರಿಯಂತೆ ಧರಿಸುವುದು. ಆದರೆ ಬಲಜೇಬಿನ ಮೇಲೆ ವಾಯುಗೈಡ್ ಪದಕವನ್ನು ಧರಿಸುವುದು.

8.* ಅಷ್ಟಕ ಪದ್ಧತಿ – Patrol System :

(i) ಒಂದು ದಳವನ್ನು ಅಷ್ಟಕವಾಗಿ ವಿಭಾಗಿಸುವುದು

(ii) ಪ್ರತಿ ಅಷ್ಟಕವು, ಅಷ್ಟಕದ ನಾಯಕಿ ಮತ್ತು ಉಪನಾಯಕಿ ಸೇರಿದಂತೆ 6 ರಿಂದ 8 ಗೈಡ್‌ಗಳನ್ನು ಹೊಂದಿರುವುದು.

(iii) ಪ್ರತಿ ಅಷ್ಟಕವು–ಅಷ್ಟಕದ ಅಂಕಣ, ಗೀತೆ, ಘೋಷಣೆ, ಸಂಕೇತ ಮತ್ತು ಧ್ವಜವನ್ನು ಹೊಂದಿರುವುದು. ಅಷ್ಟಕದ ಸದಸ್ಯರು ಸೇರಿ ಒಂದು ಹೂವಿನ ಹೆಸರನ್ನು ಆಯ್ಕೆ ಮಾಡುವುದು. ನಂತರ ಅಷ್ಟಕ ಸಭೆಯಲ್ಲಿ ಅನುಮೋದನೆ ಪಡೆಯುವುದು. ಪ್ರತಿ ಸದಸ್ಯರು ಅವರ ಅಷ್ಟಕದ ಹೂವಿನ ಲಾಂಛನವನ್ನು ಧರಿಸುವುದು.

(iv) ದಳ ನಾಯಕಿ – **Company Leader**:

---

* ಅಷ್ಟಕ: ಪ್ಯಾಟ್ರೋಲ್ ಎಂಬ ಪದಕ್ಕೆ ಅಷ್ಟಕ ಎಂದು ಕೊಡಲಾಗಿದೆ. ಕಾರಣ ಪ್ಯಾಟ್ರೋಲ್ ಗರಿಷ್ಠ 8 ಗೈಡ್‌ಗಳನ್ನು ಹೊಂದಿರುವುದು.

ದ್ವಿತೀಯ ಸೋಪಾನದ ಪದಕಹೊಂದಿರುವ, ಕನಿಷ್ಟ 6 ತಿಂಗಳು ಅಷ್ಟಕದ ನಾಯಕಿಯಾಗಿ ಅನುಭವ ಪಡೆದಿರುವ ಒಬ್ಬಳನ್ನು, ಗೌರವ ನ್ಯಾಯಸಭೆಯೊಡನೆ ಸಮಾಲೋಚಿಸಿ ದಳನಾಯಕಿಯಾಗಿ ನೇಮಕ ಮಾಡುವುದು. ಈ ದಳನಾಯಕಿಯು ಗೈಡ್ ಸಮವಸ್ತ್ರ ಧರಿಸುವುದರ ಜೊತೆಗೆ 1.5 ಸೆಂ. ಮೀ. ಅಗಲದ 3 ಹಸಿರು ಪಟ್ಟಿಯನ್ನು 1. ಸೆಂ.ಮೀ. ಅಂತರದಲ್ಲಿ ಎಡ ತೋಳಿನ ಅಂಚಿನ ಮೇಲ್ಭಾಗದಲ್ಲಿ ಹೊಲಿದು ಕೊಳ್ಳುವುದು.

ದಳನಾಯಕಿ ಪದಕ : 4 ಸೆಂ.ಮೀ. ತಳವುಳ್ಳ ಹಸಿರು ಆಯತಾಕಾರದ ವಸ್ತ್ರಪಟ್ಟಿ, ಅದರ ಮೇಲೆ ಹಳದಿಬಣ್ಣದ ಲಾಂಛನ, ಅದರ ಸುತ್ತಲೂ ಹಳದಿ ಬಣ್ಣದ ವೃತ್ತ ಮತ್ತು ಎಡಕ್ಕೆ 3 ನೇರ ಪಟ್ಟಿಗಳನ್ನು ಹೊಂದಿರುವುದು. ಇದನ್ನು ಬಲ ತೋಳಿನ ಮೇಲೆ ಧರಿಸುವುದು.



ಗೈಡ್ ನಾಯಕಿ ಮತ್ತು ಸಹನಾಯಕಿಗೆ ದಳನಾಯಕಿ ಕ್ರಿಯಾಶೀಲ ಸಹಾಯಕಳಾಗಿರುವಳು. ಹಿರಿಯ ನಾಯಕಿಯರ ಗೈರುಹಾಜರಿಯಲ್ಲಿ ದಳನಾಯಕಿ ದಳದ ಜವಾಬ್ದಾರಿಯನ್ನು ತೆಗೆದುಕೊಳ್ಳುವಳು.

(v) ಉಪದಳ ನಾಯಕಿ – Assistant Company Leader :

ದ್ವಿತೀಯ ಸೋಪಾನ ಪದಕಹೊಂದಿರುವ, ಕನಿಷ್ಟ 6 ತಿಂಗಳು ಅಷ್ಟಕ ನಾಯಕಿಯಾಗಿ ಅನುಭವವುಳ್ಳ. ಗೈಡನ್ನು, ಗೈಡ್ ನಾಯಕಿಯು ಗೌರವ ನ್ಯಾಯ ಸಭೆಯೊಡನೆ ಸಮಾಲೋಚಿಸಿ ಉಪದಳ ನಾಯಕಿಯನ್ನಾಗಿ ನೇಮಕ ಮಾಡಬಹುದು. ಇವಳು ಗೈಡ್



ಸಮವಸ್ತ್ರವನ್ನು ಧರಿಸುವುದರ ಜೊತೆಗೆ 1.5 ಸೆಂ. ಮೀ. ಅಗಲದ 3 ಹಸಿರು ಪಟ್ಟಿಯನ್ನು 1. ಸೆಂ.ಮೀ. ಅಂತರದಲ್ಲಿ ಎಡ ತೋಳಿನ ಅಂಚಿನ ಮೇಲ್ಭಾಗದಲ್ಲಿ ಹೊಲಿದುಕೊಳ್ಳುವುದು.

ಉಪದಳ ನಾಯಕಿಯ ಪದಕ : 4 ಸೆಂ. ಮೀ. ತಳವುಳ್ಳ ಪಟ್ಟಿಯ ಹಳದಿ ಬಣ್ಣದ ಲಾಂಛನ, ಅದರ ಸುತ್ತಲೂ ಎಡಕ್ಕೆ 3 ನೇರ ಪಟ್ಟಿಗಳನ್ನು ಹೊಂದಿರುವುದು. ಇದನ್ನು ಬಲ ತೋಳಿನ ಮೇಲೆ ಧರಿಸುವುದು.

(vi) ಅಷ್ಟಕ ನಾಯಕಿ – Patrol Leader :

ಪ್ರತಿ ಅಷ್ಟಕವು ಒಬ್ಬ ನಾಯಕಿಯನ್ನು ಹೊಂದಿರಬೇಕು. ಗೌರವ ನ್ಯಾಯ ಸಭೆಯೊಡನೆ ದಳನಾಯಕಿಯೂ ಸಮಾಲೋಚಿಸಿ ಒಬ್ಬ ಗೈಡನ್ನು ಅಷ್ಟಕದ ಮುನ್ನಡೆಗಾಗಿ, ಅಷ್ಟಕ ನಾಯಕಿಯನ್ನಾಗಿ ನೇಮಕಮಾಡುವಳು. ಇವಳು ಗೈಡ್‌ನ ಸಮವಸ್ತ್ರ ಧರಿಸುವಳು ಮತ್ತು 1.5 ಸೆಂ. ಮೀ. ಅಗಲದ 2 ಹಸಿರು ಪಟ್ಟಿಗಳನ್ನು 1. ಸೆಂ. ಮೀ. ಅಂತರದಲ್ಲಿ ಎಡತೋಳಿನ ಅಂಚಿನ ಮೇಲೆ ಹೊಲಿದುಕೊಳ್ಳುವಳು.

(vii) ಅಷ್ಟಕ ಸಹ ನಾಯಕಿ (ದ್ವಿತೀಯ–Second) :

ಪ್ರತಿ ಅಷ್ಟಕವು ಒಬ್ಬ ಸಹನಾಯಕಿಯನ್ನು ಹೊಂದಿರಬೇಕು. ಗೌರವ ನ್ಯಾಯಸಭೆಯೊಡನೆ ದಳನಾಯಕಿಯು ಸಮಾಲೋಚಿಸಿ ಒಬ್ಬ ಗೈಡನ್ನು ಅಷ್ಟಕದ ಮುನ್ನಡೆಗಾಗಿ ಅಷ್ಟಕ ಸಹನಾಯಕಿಯನ್ನು ನೇಮಕಮಾಡುವಳು ಅಷ್ಟಕ ನಾಯಕಿಯ ಗೈರು ಹಾಜರಿಯಲ್ಲಿ ಈಕೆ ದಳದ ಜವಾಬ್ದಾರಿಯನ್ನು ತೆಗೆದುಕೊಳ್ಳುವಳು ಮತ್ತು 1.5 ಸೆಂ. ಮೀ. ಅಗಲದ 1 ಹಸಿರು ಪಟ್ಟಿಯನ್ನು ಎಡತೋಳಿನ ಅಂಚಿನ ಮೇಲೆ ಹೊಲಿದುಕೊಳ್ಳುವಳು.

(viii) ಗೌರವ ನ್ಯಾಯಸಭೆ – Court of Honour (C O H) :

ಎಲ್ಲಾ ದಳಗಳೂ ಗೌರವ ನ್ಯಾಯಸಭೆಯನ್ನು ಹೊಂದಿರಬೇಕು. ಈ ಸಭೆಯು ದಳನಾಯಕಿ, ಉಪದಳನಾಯಕಿ, ಅಷ್ಟಕದ ನಾಯಕಿಯರನ್ನು ಒಳಗೊಂಡಿರುತ್ತದೆ. ಅಷ್ಟಕ ಸಹನಾಯಕಿಯು ಈ ಸಭೆಯಲ್ಲಿ ಶಿಸ್ತಿನ ವಿಚಾರ

ಕೈಗೊಳ್ಳುವಾಗ ಮಾತ್ರ ಹೊರತುಪಡಿಸಿ ಉಳಿದಂತೆ ಎಲ್ಲಾ ಸಭೆಗಳಲ್ಲಿ ಭಾಗವಹಿಸಬಹುದು. ದಳನಾಯಕಿ, ಉಪದಳನಾಯಕಿಯರಲ್ಲಿ ಮತ್ತು ಅಷ್ಟಕ ನಾಯಕಿಯರಲ್ಲಿ ಚುನಾಯಿಸಿದ ಒಬ್ಬರು ಕಾರ್ಯದರ್ಶಿಯ ಕೆಲಸವನ್ನು ನಿರ್ವಹಿಸಬಹುದು. ಗೌರವ ನ್ಯಾಯಸಭೆಯು ಚಟುವಟಿಕೆಗಳ ಯೋಜನೆ ಹಾಕಬಹುದು. ದಳದ ಆಂತರಿಕ ವಿಚಾರಗಳನ್ನು ಚರ್ಚಿಸಬಹುದು. ಹಣಕಾಸು ಮತ್ತು ಶಿಸ್ತಿನ ಬಗೆಗೂ ಚರ್ಚಿಸಬಹುದು. ಗೈಡ್ ನಾಯಕಿ ಮತ್ತು ಸಹ ನಾಯಕಿಯರು ಈ ಸಭೆಯಲ್ಲಿ ಸಲಹೆಗಾರರಾಗಿ ಕಾರ್ಯ ನಿರ್ವಹಿಸುವರು.

(ix) ಅಷ್ಟಕ ಸಭೆ – Patrol in Council :

ಎಲ್ಲಾ ಅಷ್ಟಕಗಳೂ ಅಷ್ಟಕ ಸಭೆಯನ್ನು ಹೊಂದಿರುವುದು. ಅಷ್ಟಕದ ಎಲ್ಲ ಸದಸ್ಯರೂ ಸಭೆಯ ಸದಸ್ಯರಾಗಿರುತ್ತಾರೆ. ಅಷ್ಟಕನಾಯಕಿ ಈ ಸಭೆಯ ಅಧ್ಯಕ್ಷಳಾಗಿರುತ್ತಾಳೆ. ಈ ಸಭೆ ಅಷ್ಟಕದ ಎಲ್ಲಾ ಆಗುಹೋಗುಗಳನ್ನು ಚರ್ಚಿಸುತ್ತದೆ.

9. ಗೈಡ್ :

(i) ಭಾರತದ ಪ್ರಜೆಯಾದ 10 ವರ್ಷ ತುಂಬಿದ 17 ವರ್ಷ ತುಂಬದ ಬಾಲಕಿಯು ನೂತನ ಪ್ರವೇಶಿಯಾಗಿ (recruit) ಗೈಡ್ ದಳದಲ್ಲಿ ಸೇರ್ಪಡೆಯಾಗಲು ಅರ್ಹಳಾಗಿರುತ್ತಾಳೆ.

(ii) ಗೈಡ್ ಪ್ರವೇಶಿಯು ಗೈಡಾಗಿ ದೀಕ್ಷೆ ಪಡೆಯುವ ಮುನ್ನ ಪ್ರವೇಶದ ಅವಶ್ಯಕತೆಗಳನ್ನು ಗೈಡ್ ನಾಯಕಿಗೆ ತೃಪ್ತಿಯಾಗುವಂತೆ ಮೂರು ತಿಂಗಳು ಕಾರ್ಯವನ್ನು ನಿರ್ವಹಿಸಬೇಕು.

(iii) ಪ್ರವೇಶದ ಅವಶ್ಯಕತೆಗಳು : Requirements of Pravesh

a. ಗೈಡಳು ಚಳವಳಿಯ ಬಗ್ಗೆ ಅಮೂಲ್ಯ ಜ್ಞಾನ ಹೊಂದಿರಬೇಕು.



ii. ಗೈಡಿಂಗ್ ಮೂಲದ ಸಂಕ್ಷಿಪ್ತ ಮಾಹಿತಿ. ಜೊತೆಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮೂಲ ಸಿದ್ಧಾಂತ ವಾದ, ನಿರೂಪಣೆ, ಉದ್ದೇಶ, ಮೂಲತತ್ವ ಮತ್ತು ವಿಧಾನದ ಬಗ್ಗೆ ವಿಷಯ ತಿಳಿದಿರಬೇಕು.

b. ಗೈಡ್ ಪ್ರತಿಜ್ಞೆ ಮತ್ತು ನಿಯಮ.

c. ಗೈಡ್ ಧ್ಯೇಯ, ಸಂಕೇತ, ವಂದನೆ, ಎಡಗೈ ಹಸ್ತಲಾಘವ

d ದೈನಿಕ ಸತ್ಕಾರ್ಯ ಮತ್ತು ಅದರ ಒಂದು ತಿಂಗಳ ದಿನಚರಿ.

e. ಗೈಡ್ ಸಮವಸ್ತ್ರ ಅದರ ಭಾಗಗಳು ಮತ್ತು ಧರಿಸುವ ಕ್ರಮ

f. ರಾಷ್ಟ್ರಧ್ವಜ, ವಿಶ್ವಗೈಡ್ ಧ್ವಜ, ಭಾರತ್ ಸ್ಕೌಟ್ ಮತ್ತು ಗೈಡ್. ಧ್ವಜ – ಇವುಗಳ ರಚನೆ ಮತ್ತು ಮಹತ್ವ

g. ರಾಷ್ಟ್ರಗೀತೆಯನ್ನು ಸರಿಯಾಗಿ ಹಾಡುವುದು. ಸಂಸ್ಥೆಯ ಪ್ರಾರ್ಥನೆ ಮತ್ತು ಧ್ವಜಗೀತೆಯನ್ನು ಹಾಡುವುದು.

h. ಕನಿಷ್ಠ 4 ದಳದ ಸಭೆಯಲ್ಲಿ ಭಾಗವಹಿಸುವುದು.

i. ಅವಳು ಅಷ್ಟಕ ಜೊತೆ 4 ಗಂಟೆಗಳ ಕಾಲ ಹೊರ ಸಂಚಾರ ಕೈಗೊಳ್ಳಬೇಕು.

(iv) ಪರೀಕ್ಷೆಗಳ ನಂತರ ಗೈಡ್ ನಾಯಕಿಗೆ ಭಾಷೆಕೊಡುವುದರ ಮೂಲಕ ದೀಕ್ಷೆ ಪಡೆಯುವಳು. ಸಮವಸ್ತ್ರ ಮತ್ತು ಸದಸ್ಯತ್ವ ಪದಕ ಧರಿಸಲು ಅರ್ಹಳಾಗುವಳು.

(ಅ) **ಸದಸ್ಯತ್ವ ಪದಕ (Membership Badge):** ಹಸಿರು ಪಟ್ಟಿಯ ಮೇಲೆ ಹಳದಿ ಫ್ಲೂರಡೆಲಿಸ್, ಅದರ ಮಧ್ಯೆ ತ್ರಿದಳ, ಅದರ ಮಧ್ಯೆ ಅಶೋಕ ಚಕ್ರವನ್ನು ಹೊಂದಿರುತ್ತದೆ. ಸದಸ್ಯತ್ವ ಪದಕವನ್ನು ಎಡತೋಳಿನ ಮಧ್ಯಭಾಗದಲ್ಲಿ ಧರಿಸುವುದು.

ಸದಸ್ಯತ್ವ ಪದಕವನ್ನು ಸಂಬಂಧಪಟ್ಟ ಸ್ಥಳೀಯ ಅಥವಾ ಜಿಲ್ಲಾ ಸಂಸ್ಥೆಯು ನೀಡುತ್ತದೆ.

ಸೂಚನೆ:a) ಗೈಡ್ಸ್‌ಗಳು ಪ್ರತಿದಿನ ಕನಿಷ್ಠ ಒಂದು ಒಳ್ಳೆಯ ಕೆಲಸ ಮಾಡುವ ಹವ್ಯಾಸ ಬೆಳೆಸಿಕೊಳ್ಳಲು ಪ್ರೋತ್ಸಾಹಿಸಬೇಕು.

b. ಗೈಡ್ ಪ್ರತಿಜ್ಞೆ–Guide Promise : ನಾನು ನನ್ನ ಗೌರವಸಾಕ್ಷಿಯಾಗಿ ಕೈಲಾದ ಮಟ್ಟಿಗೆ, ದೇವರಿಗೂ ಮತ್ತು ನನ್ನ ದೇಶಕ್ಕೂ ನನ್ನ ಕರ್ತವ್ಯವನ್ನು ಸಲ್ಲಿಸುತ್ತೇನೆಂದು ಇತರರಿಗೆ ಸಹಾಯ ಮಾಡುತ್ತೇನೆಂದು ಗೈಡ್ ನಿಯಮವನ್ನು ಪಾಲಿಸುತ್ತೇನೆಂದು, ಪ್ರತಿಜ್ಞೆ ಮಾಡುತ್ತೇನೆ.

"On my honour, I promise that I will do my best to do my duty to God and my country, to help other people and to obey the Guide Law."

c. ಗೈಡ್ ನಿಯಮ–Guide Law :

i)	ಗೈಡ್ ವಿಶ್ವಾಸಾರ್ಹಳು	- **A Guide is trustworthy.**
ii)	ಗೈಡ್ ನಿಷ್ಠಾವಂತಳು	- **A Guide is loyal**
iii)	ಗೈಡ್ ಎಲ್ಲರ ಮಿತ್ರಳು ಮತ್ತು ಇತರ ಗೈಡ್‌ಗಳಿಗೆ ಸೋದರಿಯಾಗಿರುವಳು.	– **A guide is friend to all and a sister to every other Guide.**
iv)	ಗೈಡ್ ವಿನಯಶೀಲಳು	– **A Guide is courteous.**
v)	ಗೈಡ್ ಪ್ರಾಣಿಮಿತ್ರಳು ಮತ್ತು ಪ್ರಕೃತಿ ಪ್ರೇಮಿಯಾಗಿರುವಳು	– **A Guide is a friend to animals and loves nature**
vi)	ಗೈಡ್ ಶಿಸ್ತುಳ್ಳವಳು ಮತ್ತು ಸಾರ್ವಜನಿಕ ಆಸ್ತಿಯನ್ನು ರಕ್ಷಿಸಲು ಸಹಾಯ ಮಾಡುವಳು.	– **A Guide is disciplined and helps to protect public property.**
vii)	ಗೈಡ್ ಧೈರ್ಯವಂತಳು	– **A Guide is Courageous.**
viii)	ಗೈಡ್ ಮಿತವ್ಯಯಿಯಾಗಿರುವಳು	– **A Guide is thrifty.**

ix) ಗೈಡ್ ಕಾಯಾ, ವಾಚಾ, ಮನಸಾ ಪರಿಶುದ್ಧಳು – **A Guide is pure in thought, word and deed.**

(d) ಗುರಿ–Motto: ಸದಾ ಸಿದ್ಧವಾಗಿರು–Be prepared

ದೃಢಕಾಯ, ಜಾಗೃತ ಮನಸ್ಸು ಮತ್ತು ನೈತಿಕ ಬಲವರ್ಧನೆಯಿಂದ ಮಾತ್ರ ಇದನ್ನು ಸಾಧಿಸಲು ಸಾಧ್ಯ.

f) **ಗೈಡ್ ಸಂಕೇತ–Guide Sign:** ಬಲಗೈಯನ್ನು ಭುಜದ ಮಟ್ಟಕ್ಕೆ ಎತ್ತಿ, ಅಂಗೈ ಮುಂದೆಮಾಡಿ ಮೂರು ಬೆರಳುಗಳನ್ನು ನೇರವಾಗಿ ಚಾಚಿ. ಕಿರುಬೆರಳಿನ ಮೇಲೆ ಹೆಬ್ಬೆರಳನ್ನಿರಿಸಿ ಗೈಡ್ ಸಂಕೇತವನ್ನು ಮಾಡುವುದು.

g) **ವಂದನೆ–Salute:** ವಂದಿಸುವಾಗ ಚುರುಕಾಗಿ ಬಲಗೈಯನ್ನು ಮೇಲಕ್ಕೆ ಎತ್ತಿ, ಸಂಕೇತ ಹಸ್ತ ಮುದ್ರೆ ಮಾಡಿ, ಅದರ ಮಧ್ಯ ಬೆರಳನ್ನು ಬಲಹುಬ್ಬಿನ ತುದಿಗೆ ತಾಗಿಸಲಾಗುವುದು. ವಂದಿಸಿದ ನಂತರ ಚುರುಕಾಗಿ ಕೈಯನ್ನು ಕೆಳಕ್ಕೆ ತರುವುದು.

10. ಗೈಡ್‌ಗಳ ಸಮವಸ್ತ್ರ–Guide Uniform :

ಕಡ್ಡಾಯ : ಉಡುಪಿನ ಮಾದರಿ :

i) **ಮೇಲಂಗಿ–Frock Overall :** ಅಪಾರದರ್ಶಕ ಸಾದಾ ಕಡು ಆಕಾಶನೀಲಿ ಬಣ್ಣದ ಮೇಲ್ಮುಚ್ಚಿಕೆ ಇರುವ ಎರಡು ಜೇಬು ಮತ್ತು ಕೆಳಗೆ ಎರಡು ಪಾರ್ಶ್ವಜೇಬು (ಜುಬ್ಬದ ಜೇಬಿನ ಮಾದರಿ) ಮತ್ತು ಮೊಣಕೈಯಿಂದ 8 ಸೆಂ.ಮೀ. ಮೇಲಕ್ಕೆ ತೋಳು, ಅದರ ಅಂಚನ್ನು 4 ಸೆಂ.ಮೀ. ಮೇಲಕ್ಕೆ ಮಡಿಚಿ ಹೊಲಿಸುವುದು. ತೆರೆದ ಕ್ರೀಡಾ ಕೊರಳುಪಟ್ಟಿ ಮತ್ತು ಎರಡು ಭುಜಪಟ್ಟಿಗಳನ್ನು ಹೊಲಿಸುವುದು. ಅರೆಲಂಗವನ್ನು ಬಿಗಿಯಾಗಿ ಹೊಲಿಸಬಾರದು.

ಅಥವಾ

ಸಲ್ವಾರ್ ಕಮೀಜ್ ದುಪ್ಪಟ್ಟ : ಸಲ್ವಾರ್ ಮತ್ತು ದುಪ್ಪಟ್ಟಗಳನ್ನು ಕಡು ಆಕಾಶನೀಲಿ ಬಣ್ಣ ಕಮೀಜ್ ಅನ್ನು ತಿಳಿ ಆಕಾಶನೀಲಿ ಬಣ್ಣದ ಅಪಾರದರ್ಶಕ ವಸ್ತ್ರದಿಂದ ತಯಾರಿಸಿಕೊಳ್ಳುವುದು. ಕಮೀಜ್ ಮೇಲೆ ಎರಡು ಮುಚ್ಚಿಕೆ ಇರುವ ಜೇಬುಗಳು ಮತ್ತು ಎರಡು ಪಾರ್ಶ್ವಜೇಬುಗಳು (ಜುಬ್ಬದ ಜೇಬುಗಳಂತೆ) ಇರಬೇಕು. ಮೊಳಕೈಗಿಂತ ತೋಳಿನ ಉದ್ದ 8 ಸೆಂ. ಮೀ. ಮೇಲಕ್ಕೆ ಇರಬೇಕು. ಅಂಚನ್ನು 4 ಸೆಂ.ಮೀ. ಮೇಲಕ್ಕೆ ಮಡಿಚಿ ಹೊಲಿದಿರಬೇಕು. ತೆರೆದ ಕ್ರೀಡಾ ಕತ್ತುಪಟ್ಟಿ (Open Sports Collar) ಮತ್ತು ಎರಡು ಭುಜಪಟ್ಟಿ ಇರಬೇಕು. ಕಮೀಜ ಮೊಳಕಾಲಿಗಿಂತ 4. ಸೆಂ.ಮೀ. ಕೆಳಗಿರಬೇಕು.

ಅಥವಾ

ಗಿಡ್ಡಲಂಗ ಮತ್ತು ರವಿಕೆ–Midi and Blouse : ಗಿಡ್ಡಲಂಗವನ್ನು ಅಪಾರದರ್ಶಕ ಕಡು ಆಕಾಶನೀಲಿ ಬಣ್ಣದ ವಸ್ತ್ರದಿಂದ ಹೊಲಿಸಬೇಕು. ಎರಡು ಪಾರ್ಶ್ವಜೇಬು ಇರಬೇಕು. ಹಿಂದೆ ಸ್ವಲ್ಪ ಸೀಳಿರಬೇಕು. ಮಿಡಿಯ ಉದ್ದ ಮೊಣಕಾಲು ಮತ್ತು ಪಾದದ ಮಧ್ಯದಷ್ಟಿರಬೇಕು.

ರವಿಕೆಯನ್ನು ಅಪಾರದರ್ಶಕ ಸಾದಾ ಬಿಳಿಯ ವಸ್ತ್ರದಿಂದ ತಯಾರಿಸಿಕೊಳ್ಳಬೇಕು. ಎರಡು ಮುಚ್ಚಿಕೆಯುಳ್ಳ ಮೇಲುಜೇಬು ಇರಬೇಕು. ಇದರ ತೋಳು ಮೊಣಕೈಯಿಂದ 8. ಸೆಂ.ಮೀ. ಮೇಲೆ ಇರಬೇಕು. ಅಂಚನ್ನು 4. ಸೆಂ. ಮೀ ಮೆಲಕ್ಕೆ ಮಡಿಚಿ ಹೊಲಿದಿರಬೇಕು. ತೆರೆದ ಕ್ರೀಡಾ ಕತ್ತುಪಟ್ಟಿ ಮತ್ತು ಎರಡು ಭುಜಪಟ್ಟಿ ಇರಬೇಕು. ಉದ್ದ ಸೊಂಟದಿಂದ 8. ಸೆಂ. ಮೀ. ಕೆಳಗಿರಬೇಕು. ಪಾರ್ಶ್ವಗಳು ಸೀಳಿರಬೇಕು. ಉಡುಪು ಬಿಗಿಯಾಗಿರಬಾರದು.

ii) **ಸೊಂಟಪಟ್ಟಿ :** ರಾಷ್ಟ್ರೀಯ ಸಂಸ್ಥೆ ಸರಬರಾಜು ಮಾಡುವ ಅಧಿಕೃತ ಹಿತ್ತಾಳೆ ಜೋಡಕ (Buckles) ಹೊಂದಿರುವ ಕಂದು ಬಣ್ಣದ ನೈಲಾನ್ ಪಟ್ಟಿ ಧರಿಸುವುದು.

(iii) **ಕಂಠವಸ್ತ್ರ :** ಹಸಿರು, ನೇರಳೆ ಮತ್ತು ಹಳದಿ ಬಣ್ಣಗಳನ್ನು ಹೊರತು ಪಡಿಸಿ ಸ್ಥಳೀಯ ಅಥವಾ ಜಿಲ್ಲಾ ಸಂಸ್ಥೆಯು ಅನುಮೋದಿಸಿದ ನಿಮ್ಮ ಆಯ್ಕೆಯ ಬಣ್ಣದ ಕಂಠವಸ್ತ್ರವನ್ನು ನಿಮ್ಮ ದಳಕ್ಕೆ ಮಾಡಿಸುವುದು. ಇದನ್ನು ಭುಜ ಮತ್ತು ಕತ್ತು ಪಟ್ಟಿ ಸುತ್ತುವರಿಸಿ ಕವುಂಗುರದ (ಕಂಠವಸ್ತ್ರದ ಉಂಗುರ–Woggle) ಮೂಲಕ ಹಾಕಿಕೊಳ್ಳಬೇಕು.

(iv) **ಕಾಲುಚೀಲ :** ಬಿಳಿಬಣ್ಣದ ಕಾಲು ಚೀಲ ಧರಿಸುವುದು.

(v) **ಪಾದರಕ್ಷೆ :** ಕಪ್ಪು ಚರ್ಮದ ಪಾದಮುಚ್ಚುವ ಬೂಟು ಧರಿಸುವುದು.

(vi) **ಕೇಶಾಲಂಕಾರ :** ಕೇಶವನ್ನು ಅಚ್ಚುಕಟ್ಟಾಗಿ ಕಟ್ಟಿರಬೇಕು. ಕರೀ ರಿಬ್ಬನ್ ಅಥವಾ ಕೇಶ ಬಂಧಕ (hair band) ಧರಿಸುವುದು.

(vii) **ಸದಸ್ಯತ್ವದ ಪದಕ :** ಹಸಿರು ಪಟ್ಟಿಯ ಮೇಲೆ ಹಳದಿ ಬಣ್ಣದ ಪ್ಲೋರಡೆಲಿಸ್ ಅದರ ಮಧ್ಯೆ ತ್ರಿದಳ, ಅದರ ಮಧ್ಯೆ ಚಕ್ರಹೊಂದಿರುವ ಲಾಂಛನವನ್ನು ಎಡತೋಳಿನ ಮಧ್ಯೆ ಧರಿಸುವುದು.

(viii) **ಭುಜಪದಕ :** ಬಲ ಭುಜಪಟ್ಟಿಯ ಕೆಳಗೆ ಬಿಳಿಯ 8 ಸೆಂ. ಮೀ. ಉದ್ದದ ಮತ್ತು 1.5 ಸೆಂ. ಮೀ. ಅಗಲದ ಪಟ್ಟಿಯ ಮೇಲೆ ಕೆಂಪು ಬಣ್ಣದಲ್ಲಿ ಗುಂಪಿನ ಸಂಖ್ಯೆ ಮತ್ತು ಗುಂಪು/ಜಿಲ್ಲೆ/ರಾಜ್ಯದ ಹೆಸರನ್ನು ಹೊಂದಿರುವ ಸ್ವಲ್ಪ ತುದಿಗಳಲ್ಲಿ ಬಾಗಿರುವ ಪಟ್ಟಿಯನ್ನು (Seam) ತೋಳಿನ ಹೊಲಿಗೆ (ಸಿಮ್) ಕೆಳಗೆ ಪಟ್ಟಿಯನ್ನು ಧರಿಸುವುದು.

(ix) **ವಿಶ್ವ ಗೈಡ್ ಪದಕ:** ಬಲ ತೋಳಿನ ಮಧ್ಯ ಭಾಗದಲ್ಲಿ ವಿಶ್ವ ಗೈಡ್ ಪದಕವನ್ನು ಧರಿಸುವುದು.

(x) **ಅಷ್ಟಕ ಸಂಕೇತ :** ಪ್ರತಿ ಸದಸ್ಯೆಯು ಅಷ್ಟಕದ ಪದಕವನ್ನು ಧರಿಸಬೇಕು. ಕಪ್ಪು ಹಿನ್ನೆಲೆಯ ಬಟ್ಟೆಯು 4 ಸೆಂ. ಮೀ. ವ್ಯಾಸದ ವೃತ್ತಕ್ಕೆ ಹಸಿರು ಕಸೂತಿ ಅಂಚು ಕಟ್ಟಿ, ಅದರಲ್ಲಿ ಹೂವನ್ನು ಕಸೂತಿ ಮಾಡುವುದು. ಅದನ್ನು ಡವಾಲಿಯ ಮೇಲಿನ ಭಾಗದಲ್ಲಿ ಧರಿಸುವುದು.

(xi) **ಭಾರತ ಸ್ಕೌಟ್ ಮತ್ತು ಗೈಡ್ ನಾಮಪಟ್ಟಿ:** ಇದನ್ನು ಬಲ ಜೇಬಿನ ಮೇಲೆ ಧರಿಸುವುದು. ಅಳತೆ 11×2 ಸೆಂ.ಮೀ. ಬಲಭಾಗದಲ್ಲಿ 3×2 ಸೆಂ.ಮೀ. ತ್ರಿವರ್ಣ ಧ್ವಜ ಚಿತ್ರವಿದೆ.

(xii) **ಉಣ್ಣೆಯ ಮೇಲಂಗಿ–Cardigan :** ಸಾದಾ ಕರಿಬಣ್ಣದ ಸ್ವೆಟರ್ ಧರಿಸುವುದು. ಕಾಲಕ್ಕೆ ಅನುಗುಣವಾಗಿ ಅರೆತೋಳಿನ ಉಣ್ಣೆ ಅಂಗಿಯನ್ನು ಧರಿಸಬಹುದು.

(xiii) **ಡವಾಲಿ–Sash:** ಕಡುನೀಲಿ ಬಣ್ಣದ 10 ಸೆಂ.ಮೀ. ಅಗಲದ ಎಡ –ತೋಳಿನ ಭುಜಪಟ್ಟಿಯ ಮೂಲಕ ಎದೆಯ ಮೇಲೆ ತಂದು ಹಿಂದಿ –ನಿಂದ ಡವಾಲಿಯ ತುದಿಗಳನ್ನು ಸೊಂಟದ ಕೆಳಗೆ ಜೋಡಿಸುವುದು.

ಗು.ನೀ.ನಿ.ಸಂ.ನಲ್ಲಿ ಕೊಟ್ಟಿರುವ ಬಾಲಕಿಯರ ಕಾರ್ಯಕ್ರಮದ ಪ್ರಕಾರ ಹಾಗು ಪ್ರಾವೀಣ್ಯತಾ ಪದಕಗಳನ್ನು ಗಳಿಸಿದಂತೆ, ಏರು ಕ್ರಮದಲ್ಲಿ ಹೊಲಿದುಕೊಳ್ಳುವುದು (ಸ್ಪಷ್ಟೀಕರಣಕ್ಕಾಗಿ 133 ಪುಟವನ್ನು ನೋಡಿ)

B. ಐಚ್ಛಿಕ – Optional :

(i) **ಶಿಬಿರದ ಸಮವಸ್ತ್ರ :** ಕಡು ಆಕಾಶನೀಲಿ ಬಣ್ಣದ ಸಲ್ವಾರ್ ಕಮೀಜ್ ಮತ್ತು ದುಪ್ಪಟ್ಟ. (ಈ ಮೊದಲು ಕೊಟ್ಟಿರುವ ಮಾದರಿ ಅನುಸರಿಸುವುದು.

(ii) **ಹೊರಸಂಚಾರ ಸಮವಸ್ತ್ರ :** ಕಡು ಆಕಾಶನೀಲಿ ಬಣ್ಣದ ಸಲ್ವಾರ್ ಕಮೀಜ್ **"T"** ಮೇಲಂಗಿಯನ್ನು ಮತ್ತು

(iii) **"P"** ಟೋಪಿಯನ್ನು ರಾಷ್ಟ್ರೀಯ ಸಂಸ್ಥೆಯಿಂದಲೇ ಕೊಂಡು ಧರಿಸಬೇಕು.

(iv) **ಕಪ್ಪು ಸಂಚಿ–Black Pouch :** ವಿಧಿಬದ್ಧ ಸಮಾರಂಭವನ್ನು ಹೊರತುಪಡಿಸಿ (Ceremonials), ಉಳಿದೆಲ್ಲಾ ಸಮಯದಲ್ಲಿ ಕಪ್ಪು ಸಂಚಿಯನ್ನು ಧರಿಸಬಹುದು.

(v) **ಲೋಹದ ಪದಕ :** ಸಮವಸ್ತ್ರ ಧರಿಸದೇ ಇದ್ದಾಗ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಲಾಂಛನ ಹೊಂದಿರುವ ಲೋಹದ ಪದಕವನ್ನು ಧರಿಸಬೇಕು.

(vi) **ಸೀಟಿ ಸೂತ್ರ – Lanyard:** ಸೀಟಿ ಸೂತ್ರಕ್ಕೆ ಸೀಟಿ ಪೋಣಿಸಿ ಕತ್ತಿನ ಸುತ್ತಲೂ ಧರಿಸಿಕೊಳ್ಳಬೇಕು.

(vii) **ಆಭರಣ :** ಸಾಂಪ್ರದಾಯಿಕ ಹಾಗೂ ಧಾರ್ಮಿಕ ಆಭರಣ ಹೊರತುಪಡಿಸಿ ಉಳಿದವುಗಳನ್ನು ಸಮವಸ್ತ್ರದ ಮೇಲೆ ಧರಿಸಬಾರದು.

11. **ಜಲಗೈಡ್ ಸಮವಸ್ತ್ರ :** ಗೈಡಿನಂತೆಯೇ ಜಲಗೈಡ್ ಸಮವಸ್ತ್ರವನ್ನು ಧರಿಸುವುದುರ ಜೊತೆಗೆ ಬಲ ಜೇಬಿನ ಮೇಲೆ ಜಲಗೈಡ್ ಪದಕವನ್ನು ಧರಿಸಬೇಕು.

12. **ವಾಯುಗೈಡ್ ಸಮವಸ್ತ್ರ :** ಗೈಡಿನಂತೆಯೇ ವಾಯುಗೈಡ್ ಸಮವಸ್ತ್ರವನ್ನು ಧರಿಸುವುದರ ಜೊತೆಗೆ ಬಲ ಜೇಬಿನ ಮೇಲೆ ವಾಯುಗೈಡ್ ಪದಕವನ್ನು ಧರಿಸಬೇಕು.

13. **ಗೈಡ್‌ಗಳ ಪ್ರಗತಿಪರ ಯೋಜನೆ - Scheme of Advancement of a Guide :**

(a) ಪ್ರವೇಶ ಅವಶ್ಯಕತೆಗಳನ್ನು 3 ತಿಂಗಳಲ್ಲಿ ಪೂರ್ಣಗೊಳಿಸಿದ ಬಾಲಕಿಗೆ ಗೈಡ್ ದೀಕ್ಷೆ ನೀಡಬಹುದು.

(b) ಪ್ರವೇಶ ಗೈಡ್ ಕನಿಷ್ಟ 6 ತಿಂಗಳು ಸೇವೆ ಸಲ್ಲಿಸಿದರೆ ಮಾತ್ರ ಪ್ರಥಮ ಸೋಪಾನಕ್ಕೆ ಅರ್ಹಳಾಗುವಳು.

(c) ಪ್ರಥಮ ಸೋಪಾನ ಗೈಡ್ ಕನಿಷ್ಟ 6 ತಿಂಗಳು ಸೇವೆ ಸಲ್ಲಿಸಿದರೆ ಮಾತ್ರ ದ್ವಿತೀಯ ಸೋಪಾನಕ್ಕೆ ಅರ್ಹಳಾಗುವಳು.

(d) ದ್ವಿತೀಯ ಸೋಪಾನದ ಗೈಡ್ ಕನಿಷ್ಠ 6 ತಿಂಗಳು ಸೇವೆ ಸಲ್ಲಿಸಿದರೆ ಮಾತ್ರ ತೃತೀಯ ಸೋಪಾನಕ್ಕೆ ಅರ್ಹಳಾಗುವಳು.

(e) ತೃತೀಯ ಸೋಪಾನದ ಗೈಡ್ ಕನಿಷ್ಠ 9 ತಿಂಗಳು ಸೇವೆ ಸಲ್ಲಿಸಿದರೆ ಮಾತ್ರ ರಾಜ್ಯ ಪುರಸ್ಕಾರಕ್ಕೆ ಅರ್ಹಳಾಗುವಳು.

(f) ರಾಜ್ಯ ಪುರಸ್ಕಾರ್ ಗೈಡ್ ಕನಿಷ್ಠ 12 ತಿಂಗಳು ಸೇವೆ ಸಲ್ಲಿಸಿದರೆ ಮಾತ್ರ ರಾಷ್ಟ್ರಪತಿ ಪುರಸ್ಕಾರಕ್ಕೆ ಅರ್ಹಳಾಗುವಳು.

ಅರ್ಹತಾ ಹುರಿಗಳು (Efficiency Cords)

(ಅ) ದ್ವಿತೀಯ ಸೋಪಾನದಲ್ಲಿ 6 ಪ್ರಾವೀಣ್ಯತಾ ಪದಕಗಳನ್ನು ಗಳಿಸಿದರೆ ಸಹಾಯಕ ಜಿಲ್ಲಾ ಆಯುಕ್ತರು (ಗೈ) ನೀಲಿ ಹುರಿಯನ್ನು (Blue Cord) ಪ್ರದಾನ ಮಾಡುವರು.

(ಆ) ತೃತೀಯ ಸೋಪಾನದಲ್ಲಿ 12 ಪ್ರಾವೀಣ್ಯತಾ ಪದಕ ಪಡೆದರೆ ಜಿಲ್ಲಾ ಆಯುಕ್ತರು ಹಸಿರು ಹುರಿಯನ್ನು (Blue Cord) ಪ್ರದಾನ ಮಾಡುವರು.

(ಇ) ರಾಜ್ಯ ಪುರಸ್ಕಾರ ಪಡೆದನಂತರ 18 ಪ್ರಾವೀಣ್ಯತಾ ಪದಕ ಪಡೆದರೆ ಬಂಗಾರದ ಹುರಿಯನ್ನು ಜಿಲ್ಲಾ ಪ್ರಧಾನ ಆಯುಕ್ತರು ಪ್ರದಾನ ಮಾಡುವರು.

(a) ರಾಷ್ಟ್ರೀಯ ಕೇಂದ್ರ ಸಂಸ್ಥೆಯುವರು ಗೈಡ್ ಅರ್ಹತಾ ಹುರಿಗಳನ್ನು ತೆಳು ದಾರದಿಂದ ವಿಶೇಷ ಮಾದರಿಯೊಂದಿಗೆ ಸಿದ್ಧಪಡಿಸಿ ಒದಗಿಸುತ್ತಾರೆ. ಅದನ್ನು ಬಲಭುಜದ ಪಟ್ಟಿಯ ಕೆಳಭಾಗದಿಂದ ಬಲಜೇಬಿನವರೆಗೆ ವಿಸ್ತರಿಸಿ ಧರಿಸುವುದು.

———*———

ಪ್ರಥಮ ಸೋಪಾನದ ಪರೀಕ್ಷೆಗಳು :

ಪ್ರಥಮ ಸೋಪಾನದ ಅವಶ್ಯಕತೆಗಳು

1. ನಿಮ್ಮನ್ನು ನೀವು ನೋಡಿಕೊಳ್ಳುವುದು.

2. ನೀವು ಮನೆಯಲ್ಲಿ ಮಾಡುವ ಕೆಲಸಗಳನ್ನು ಹೇಳಿ.

3. ನಿಮ್ಮ ಹಾಸಿಗೆಯನ್ನು ನೀವೇ ಹಾಸಿಕೊಳ್ಳುವ ಸಾಮರ್ಥ್ಯವನ್ನು ಪಡೆಯುವುದು.

4. ವೈಯಕ್ತಿಯ ಸ್ವಚ್ಛತೆ ಮತ್ತು ಆರೋಗ್ಯದ ನಿಯಮಗಳ ಬಗ್ಗೆ ತಿಳಿಯುವುದು.

5. ಬಿ.ಪಿ. ಷಟ್ಕವ್ಯಾಯಾಮ ಮತ್ತು ಯೋಗಾಸನ / ಸೂರ್ಯ ನಮಸ್ಕಾರ ಕಲಿಯಿರಿ.

6. ಗುಂಡಿ ಹೊಲಿದು ಕಾಜ ಮಾಡಿ.

7. ಕ್ಯಾನ್ವಾಸ್/ ಚರ್ಮದ ಬೂಟನ್ನು ಸ್ವಚ್ಛ ಮಾಡಿ, ಪಾಲಿಷ್ ಮಾಡಿ.

8. ಪ್ರಥಮ ಚಿಕಿತ್ಸೆ ಸಂಚಿ ವೈಯಕ್ತಿಕವಾಗಿ ತಯಾರಿಸಿಕೊಳ್ಳಿ. ಇದರಲ್ಲಿಡುವ ಸಾಮಾನುಗಳ ಪಟ್ಟಿಮಾಡಿ.

   ಪ್ರಥಮ ಚಿಕಿತ್ಸೆಯ ನಿರೂಪಣೆ ಮತ್ತು ಸುವರ್ಣ ನಿಯಮಗಳನ್ನು ತಿಳಿಸುವುದು. ಸರಳ ಕತ್ತರಿಸಿದ ಗಾಯ, ಸುಟ್ಟಗಾಯ,

ಮೂಗಿನಿಂದಾಗುವ ರಕ್ತಸ್ರಾವಕ್ಕೆ ಚಿಕಿತ್ಸೆ ನೀಡುವುದು (ಇದನ್ನು ಗು.ನಿ.ನಿ.ಸಂ. ಆಂಗ್ಲ ಪುಸ್ತಕದಲ್ಲಿದ್ದ ಸೇವಾಕಾರ್ಯದಿಂದ ತೆಗೆದು ಇಲ್ಲಿ ತರಲಾಗಿದೆ.)

ಶಿಸ್ತು

1. **ಅಷ್ಟಕ ಪದ್ಧತಿ:** ನಿಮ್ಮ ಅಷ್ಟಕ ಸಂಕೇತ, ಧ್ವಜ, ಹರ್ಷನಾದ. ಗೀತೆಗಳನ್ನು ರಚಿಸಿ. ಅಷ್ಟಕಕ್ಕೆ ಗೊತ್ತುಪಡಿಸಿದ ನಿಮ್ಮ ಸ್ಥಳವನ್ನು ಅಷ್ಟಕ ಚಟುವಟಿಕೆಗಳಿಗೆ ಸಜ್ಜುಗೊಳಿಸಿ.
2. ಹಸ್ತ ಮತ್ತು ಶಿಲ್ಪಿ ಸಂಕೇತವನ್ನು ಅಭ್ಯಸಿಸಿ ಬಳಸಿ.
3. ಸರಳ ವ್ಯಾಯಾಮಗಳು ಮತ್ತು ಕ್ರಮಬದ್ಧ ಚಲನೆ.
4. ಅಷ್ಟಕ ಮತ್ತು ದಳದ ಆಟಗಳಲ್ಲಿ ಭಾಗವಹಿಸಿ.
5. ನಿಮ್ಮ ನಡತೆ ಮನೆಯಲ್ಲಿ ಮತ್ತು ಶಾಲೆಯಲ್ಲಿ ತೃಪ್ತಿಕರವಾಗಿದೆ ಎಂದು ನಿಮ್ಮ ಗೈಡ್ ಶಿಕ್ಷಕಿಗೆ ಮನವರಿಕೆ ಮಾಡಿ.

ಹಗ್ಗ ಕೌಶಲ

1. ಹಗ್ಗದ ತುದಿಗಳಿಗೆ ಕಟ್ಟನ್ನು (ವಿಪಿಂಗ್) ಕಟ್ಟುವುದು.
2. ಕೆಳಗಿನ ಗಂಟುಗಳನ್ನು ಹಾಕುವುದನ್ನು ಮತ್ತು ಬಳಸುವುದನ್ನು ಕಲಿಯಿರಿ.

   1) ಸಮಗಂಟು (ರೀಫ್ ನಾಟ್) 2) ಮೂಲೆಗಂಟು (ಶೀಟ್ ಬೆಂಡ್) 3) ಕೊಟ್ಟಿಗೆ ಗಂಟು (ಕ್ಲೋವ್ ಹಿಚ್ ನಾಟ್) 4) ಜೀವ ರಕ್ಷಕ ಗಂಟು (ಬೋ ಲೈನ್ ನಾಟ್) 5) ಕಣಕಾಲು ಗಂಟು (ಷೀಪ್ ಷಾಂಕ್) 6) ಬೆಸ್ತರ ಗಂಟು (ಫಿಷರ್‌ಮನ್ ನಾಟ್) 7) ಒಂದು ಸುತ್ತು ಎರಡು ಅರೆಗಂಟು (ರೌಂಡ್ ಟರ್ನ್ ಟೂ ಹಾಫ್ ಹಿಚ್‌ಗಳು)

3. ಸಮಾನಾಂತರ ಕಟ್ಟು 1 ಮತ್ತು 2 / ಷಿಯರ್ ಲ್ಯಾಷಿಂಗ್ ಕಟ್ಟು ಕಟ್ಟುವುದನ್ನು ಪ್ರದರ್ಶಿಸಿ.

4. ಮನೆಗೆ ಉಪಯುಕ್ತವಾದ ಪೀಠೋಪಕರಣ / ಕರಕುಶಲ ವಸ್ತುವನ್ನು ತಯಾರಿಸಿ.

IV. ಸೇವಾ ಚಟುವಟಿಕೆಗಳು

a) ನಿಮ್ಮ ಶಾಲೆ / ಸ್ಥಳೀಯ / ಜಿಲ್ಲಾ ಕೇಂದ್ರ ಕಛೇರಿಯಲ್ಲಿ ಸೇವಾ ಕಾರ್ಯವನ್ನು ಗೈಡ್ ಶಿಕ್ಷಕಿಯ ಮಾರ್ಗದಲ್ಲಿ ಮಾಡುವುದು.
ಪ್ರಥಮ ಚಿಕಿತ್ಸೆ ವಿಷಯವನ್ನು 1ನೇ ಅಧ್ಯಾಯಕ್ಕೆ ವರ್ಗಾಯಿಸಿದೆ.

b) ಅಡಿಗೆ, ನೀರು ಸಂಗ್ರಹ ಆತಿಥ್ಯ, ಸ್ವಚ್ಛತೆ ಮುಂತಾದ ಮನೆ ಜವಾಬ್ದಾರಿಯನ್ನು ಪೋಷಕರ ಸಹಾಯದಿಂದ ನಿರ್ವಹಿಸುವುದು.

c) ಪ್ರತಿದಿನ ಕನಿಷ್ಠ ಒಂದು ಸತ್ಕಾರ್ಯವನ್ನು ಒಂದು ತಿಂಗಳು ಕಾಲ ಮಾಡಿ ದಿನಚರಿ ಬರೆಯಿರಿ.

d. ಕೆಳಗಿನ ಚಟುವಟಿಕೆಗಳಲ್ಲಿ ಭಾಗವಹಿಸಿ:

   i. ನಿಯಮದ ಯಾವುದಾದರೂ ಅಂಶಗಳನ್ನು ಒಳಗೊಂಡಂತೆ ಗೈಡ್ ಶಿಕ್ಷಕಿಯೊಡನೆ ವಿಚಾರ ಮಾಡಿ ಒಂದು ವಾರದಲ್ಲಿ ವರದಿ ಸಲ್ಲಿಸುವುದು.

   ii. ಅಷ್ಟಕ ನಾಯಕಿಯೊಡನೆ ಸಮಾಲೋಚಿಸಿ ಪ್ರಕೃತಿ ಅಧ್ಯಯನ ಯೋಜನೆಯನ್ನು ಮಾಡಿ 10 ದಿನಗಳಲ್ಲಿ ವರದಿ ನೀಡುವುದು.

ಅಥವಾ

   ಗ್ರಾಮ ಪಂಚಾಯಿತಿ/ ಕ್ಷೇತ್ರಾಭಿವೃದ್ಧಿ ಸಮಿತಿ ಪುರಸಭೆ/ ನಗರಪಾಲಿಕೆ, ಕಾರ್ಪೊರೇಷನ್ ಕಛೇರಿಗೆ ಭೇಟಿ ನೀಡಿ ಅವರು ಕೈಗೊಂಡ ಸಾರ್ವಜನಿಕ ಸೇವಾಯೋಜನೆಯ

ವರದಿಯನ್ನು ಸಂಗ್ರಹಿಸಿ ಗೈಡ್ ಶಿಕ್ಷಕಿಯವರಿಗೆ 10 ದಿನಗಳಲ್ಲಿ ಸಲ್ಲಿಸುವುದು.

V) ಹೊರಾಂಗಣ

ನಿಮಗೆ ದೊರೆತಿರುವ ಮತ್ತು ಪರಿಚಯವಾಗಿರುವ ಸಾರ್ವಜನಿಕ ಕಛೇರಿ ಮತ್ತು ಚಲಿಸುವ ದೂರವಾಣಿಯ ಉಪಯೋಗ ತಿಳಿಯುವುದು.

1. ವನವಿದ್ಯಾ ಸಂಕೇತವನ್ನು ತಿಳಿದು ಅಷ್ಟಕದೊಡನೆ ½ ಕಿ.ಮೀ.ಗೆ ಕಡಿಮೆ ಇಲ್ಲದಂತೆ ಜಾಡನ್ನು ಅನುಸರಿಸಿ ಮಾರ್ಗವನ್ನು ಕ್ರಮಿಸಿ.
2. ಪಾದಚಾರಿಗಳ ನಿಯಮವನ್ನು ತಿಳಿದು ಅನುಸರಿಸಿ.
3. ಪ್ರಕೃತಿ ಅಧ್ಯಯನದಲ್ಲಿ ಜಾಡನ್ನು ಅನುಸರಿಸುವುದು.

VII) ಪ್ರವೇಶದ ನಂತರ ಕನಿಷ್ಠ 6 ತಿಂಗಳು ಪ್ರಥಮ ಸೋಪಾನ ಗೈಡಾಗಿ ಸೇವೆ ಸಲ್ಲಿಸುವಳು.

ಜಲಗೈಡ್: ಮೇಲಿನ ಪರೀಕ್ಷೆಗಳ ಜೊತೆಗೆ ಕೆಳಗಿನ ಪರೀಕ್ಷೆಗಳಲ್ಲೂ ಅರ್ಹತೆ ಪಡೆಯಬೇಕು.

1. ಜಲಗೈಡಿಂಗ್‌ನ ಸಾಮಾನ್ಯ ತಿಳುವಳಿಕೆ ಪಡೆದಿರಬೇಕು.
2. ನೀರಿನಲ್ಲಿ ಸುರಕ್ಷತಾಕ್ರಮವನ್ನು ತಿಳಿದಿರಬೇಕು.
3. ನೀರಿನ ಭಯದಿಂದ ಮುಕ್ತರಾಗಬೇಕು.

ವಾಯುಗೈಡ್ : ಮೇಲಿನ ಪ್ರಥಮ ಸೋಪಾನ ಪರೀಕ್ಷೆಗಳ ಜೊತೆಯಲ್ಲಿ ಕೆಳಗಿನ ಪರೀಕ್ಷೆಗಳಲ್ಲೂ ಅರ್ಹತೆ ಪಡೆಯಬೇಕು.

1. ವಾಯುಗೈಡಿಂಗ್‌ನ ಸಾಮಾನ್ಯ ತಿಳುವಳಿಕೆ ಪಡೆದಿರಬೇಕು.
2. ವಾಯುಯಾನಗಳ ಕನಿಷ್ಟ ಹತ್ತು ಮಾದರಿಯ ಛಾಯಾಚಿತ್ರ ಸಂಗ್ರಹಿಸುವುದು.

3. ವಾಯುದಳದ ಶ್ರೇಣಿ, ಪದಕ ಮತ್ತು ಧ್ವಜಗಳ ಬಗೆಗೆ ಸಾಮಾನ್ಯ ತಿಳುವಳಿಕೆ ಪಡೆದಿರಬೇಕು.

4. ರಾಷ್ಟ್ರದ ವಾಯುದಳ/ನಾಗರಿಕ ವಾಯುಯಾನಗಳನ್ನು ಗುರುತಿಸಬೇಕು

5. ಗೈಡ್ ನಾಯಕಿ ನಿಗದಿಪಡಿಸಿದ ಅವಧಿಯಲ್ಲಿ ನೋಡಿದ ವಾಯು ಯಾನಗಳ ಒಂದು ಸಮಗ್ರಕೋಶ / ದಿನಚರಿ ಪುಸ್ತಕ ತಯಾರಿಸಬೇಕು.

ಸೂಚನೆ :

1) ಪ್ರಥಮ ಸೋಪಾನ್‌ನ ಪರೀಕ್ಷೆ ತೇರ್ಗಡೆಯಾದ ನಂತರ, ಪ್ರಥಮ ಸೋಪಾನ್ ಪದಕವನ್ನು ಸ್ಥಳೀಯ / ಜಿಲ್ಲಾ ಸಂಸ್ಥೆಯ ಪರೀಕ್ಷೆ ಮಾಡಿದ ಗೈಡ್ ಕ್ಯಾಪ್ಟನ್‌ನ ಶಿಫಾರಿಸಿನ ಮೇಲೆ ನೀಡಬಹುದು.

2) ಈ ಪ್ರಥಮ ಸೋಪಾನ್ ಪದಕವನ್ನು ಸದಸ್ಯತ್ವ ಪದಕದ ಕೆಳಗೆ ಹೊಲೆದುಕೊಳ್ಳಬೇಕು.

———*———

ದ್ವಿತೀಯ ಸೋಪಾನದ ಪರೀಕ್ಷೆಗಳು

1. ಅಗ್ರಾಮಿತ್ವ : ಈ ಗಂಟು ಕಟ್ಟುಗಳನ್ನು ಕಟ್ಟಿ ಬಳಸಿ.

    a) ದಿಮ್ಮಿ ಗಂಟು (Timber Hitch), ಅಷ್ಟಕ ಗಂಟು (Figure of Eight Knot), ಸುರುಳಿ ಗಂಟು (Rolling Hitch) , ಸನ್ನೆ ಗಂಟು (Marline Hitch).

    b) ಚೌಕ ಕಟ್ಟು (Square Lashing) , ಅಷ್ಟಕ ಕಟ್ಟು (Figure of Eight Lashing).

    c) ಶಿಬಿರ ಸಲಕರಣೆ ಕೈಗೊಡಲಿ ಅಥವಾ ಮಚ್ಚು ಹರಿತವಾಗಿಡುವುದು. ತುಕ್ಕು ಹಿಡಿಯದಂತೆ ಸುರಕ್ಷಿತವಾಗಿಡುವುದು.

    d) ಭರ್ಜಿ ಅಥವಾ ಚಾಕುವನ್ನು ಸ್ಕ್ರೂಡ್ರೈವರ್, ಕಟಿಂಗ್ ಪ್ಲಯರ್ ಮತ್ತು ಸುತ್ತಿಗೆಯನ್ನು ಬಳಸಿ ಹರಿತವಾಗಿ ಸುರಕ್ಷಿತವಾಗಿಡಿ.

2. ಬೆಂಕಿ:

    a) ಶಿಬಿರದಲ್ಲಿ ಅಥವಾ ಬಯಲಿನಲ್ಲಿ ಬಳಸುವ ವಿವಿಧ ರೀತಿಯ ಬೆಂಕಿ ಜೋಡಣೆಯನ್ನು ತಿಳಿಯಿರಿ.

    b) ಎರಡು ಬೆಂಕಿಕಡ್ಡಿಗಿಂತ ಹೆಚ್ಚು ಬಳಸದೆ ಬಯಲಿನಲ್ಲಿ ಬೆಂಕಿ ಹತ್ತಿಸಿ.

3. **ಅಡುಗೆ:**

a) ಸೀಮೆಎಣ್ಣೆ/ಅನಿಲ ಒಲೆಗಳ ಕಾರ್ಯರೀತಿ ತಿಳಿದು ಅದನ್ನು ಸರಿಯಾಗಿ ಇಡುವುದನ್ನು ತಿಳಿಯಿರಿ.

b) ಬಯಲಿನಲ್ಲಿ ಇಬ್ಬರಿಗೆ ಸರಳ ತಿನಿಸುಗಳನ್ನು ಮತ್ತು ಟೀ/ಕಾಫಿ ಮಾಡಿ.

c) ಅನಿಲ ಸೋರಿಕೆ ಬಗ್ಗೆ ಮುನ್ನೆಚ್ಚರಿಕೆ ಕ್ರಮ ತಿಳಿಯಿರಿ.

4. **ದಿಕ್ಸೂಚಿ ಮತ್ತು ನಕ್ಷೆ:**

a) ದಿಕ್ಸೂಚಿಯಲ್ಲಿ 16 ದಿಕ್ಕುಗಳನ್ನು ತಿಳಿಯಿರಿ.

b) ರಾತ್ರಿ ಸಮಯದಲ್ಲಿ ನಕ್ಷತ್ರ ಪುಂಜಗಳ ಸಹಾಯದಿಂದ ಉತ್ತರ ದಿಕ್ಕನ್ನು ಕಂಡುಹಿಡಿಯುವುದು.

c) ದಿಕ್ಸೂಚಿಯನ್ನು ಬಳಸಿ ನೀವು ನಿಲ್ಲುವ ಸ್ಥಾನದಿಂದ ವಿವಿಧ ವಸ್ತುಗಳ (ಗಿಡ, ಮರ, ಕಟ್ಟಡ ಇತ್ಯಾದಿ) ದಿಕ್ಕೋನವನ್ನು (ಬೇರಿಂಗ್) ಕಂಡುಹಿಡಿಯಿರಿ.

d) ಜಾಡನ್ನು ಅನುಸರಿಸುತ್ತ ದಿಕ್ಸೂಚಿಯಿಂದ ದಿಕ್ಕೋನ ಮತ್ತು ದೂರವನ್ನು ಕಂಡುಹಿಡಿಯಿರಿ.

e) ಮಾಪಕ (ಸ್ಕೇಲ್), ದಿಕ್ಕು, ಸಾಂಪ್ರದಾಯಿಕ ಚಿಹ್ನೆಗಳು, ಗ್ರಿಡ್, ಸಮಪಾತಳಿ ರೇಖೆಗಳು, ರೆಫರೆನ್ಸ್‌ಗಳನ್ನು ತಿಳಿಯಿರಿ.

f) ಪ್ರವಾಸ ನಕ್ಷೆಯ ಉಪಯೋಗ ತಿಳಿಯಿರಿ.

5. **ಪ್ರಥಮ ಚಿಕಿತ್ಸೆ:**

a) ಗಾಯಗಳ ಬಗ್ಗೆ ತಿಳಿದು ರಕ್ತಸ್ರಾವ, ಸುಟ್ಟಗಾಯ, ಬೆಂದಗಾಯ, ಉಳುಕು, ಕುಟುಕು, ಕಚ್ಚುವಿಕೆಗೆ ಪ್ರಥಮ ಚಿಕಿತ್ಸೆ ತಿಳಿಯಿರಿ.

b) ಸುರುಳಿ ಪಟ್ಟಿ (ರೋಲರ್ ಬ್ಯಾಂಡೇಜ್) ಉಪಯೋಗವನ್ನು ಪ್ರದರ್ಶಿಸಿ.

c) ತ್ರಿಕೋನ ಪಟ್ಟಿಯ ಉಪಯೋಗ ತಿಳಿದು ತಲೆ, ಕೈ, ತೋಳು, ಮೊಣಕಾಲು, ಪಾದ ಇವುಗಳ ಅಸ್ಥಿಭಂಗಕ್ಕೆ ಪಟ್ಟಿ ಕಟ್ಟಿ.

d) ತಾತ್ಕಾಲಿಕ ಡೋಲಿಯನ್ನು (Stretcher) ತಯಾರಿಸಿ.

6. **ಅಂದಾಜು ಅಳತೆ:**

a) 2 ದೂರ/ 1 ಅಗಲ 100 ಮೀಟರ್ ಮೀರದಂತೆ 30 ಮೀ. ಕಡಿಮೆ ಇರದಂತೆ ಸುಧಾರಿತ ಉಪಕರಣವನ್ನು ಮಾಡಿಕೊಂಡು ಅಳತೆ ಅಂದಾಜುಮಾಡಿ.

b) ಗೊತ್ತುಪಡಿಸಿದ ದೂರವನ್ನು ಕ್ರಮಿಸಿ ಹೆಜ್ಜೆಯ ಅಳತೆಯ ಆಧಾರದ ಮೇಲೆ ಅಂದಾಜು ಮಾಡಿ.

7. **ಹೊರಾಂಗಣ:**

a) ದಳದ ವ್ಯಾಪಕ ಆಟದಲ್ಲಿ ಭಾಗವಹಿಸಿ.

b) ಶಿಬಿರಾಗ್ನಿಯಲ್ಲಿ ಭಾಗವಹಿಸಲು ಎರಡು ದೇಶಭಕ್ತಿ ಗೀತೆ / ಜಾನಪದ ಗೀತೆ/ ಅಷ್ಟಕ ಕಿರುನಾಟಕವನ್ನು ಅಭ್ಯಾಸ ಮಾಡಿ.

c) ವಾಹನ ಸಂಚಾರ ನಿಯಮಗಳನ್ನು ತಿಳಿದು ಅಭ್ಯಾಸ ಮಾಡಿ.

d) ಸೈಕಲ್ ಸವಾರಿಯನ್ನು ಕಲಿಯಿರಿ.

e) ಹತ್ತಿರದ ಕಾರ್ಖಾನೆಗೆ ಭೇಟಿ ನೀಡಿ ಅದರ ಉತ್ಪಾದನೆಯನ್ನು, ಉತ್ಪಾದಿಸುವ ಪ್ರಕ್ರಿಯೆಯನ್ನು ತಿಳಿಯಿರಿ. ಜೊತೆಗೆ ಕಾರ್ಮಿಕತೆಯ ಗೌರವವನ್ನು ತಿಳಿಯುವುದು.

8. ಸೇವಾಕಾರ್ಯ:

ಕೆಳಗಿನವುಗಳಲ್ಲಿ ಯಾವುದಾದರೂ ಒಂದನ್ನು ಪೂರ್ಣಗೊಳಿಸಿ.

a) ಶಾಲಾ ಮುಖ್ಯಸ್ಥರೊಡನೆ ವಿಚಾರಮಾಡಿ ಶಾಲೆಗೆ ಬೇಕಾದ ಅಭಿವೃದ್ಧಿ ಸೇವಾ ಯೋಜನೆಯನ್ನು ಅಷ್ಟಕವಾರು ಮಾಡಿ.

b) ಒಂದು ತಿಂಗಳು, ಒಂದಕ್ಕಿಂತ ಹೆಚ್ಚು ಸಮಾಜ ಕಾರ್ಯದಲ್ಲಿ ಭಾಗವಹಿಸುವುದು.

c) ಸಮುದಾಯದಲ್ಲಿ ನಡೆಯುವ ಜಾತ್ರೆ ಮತ್ತು ಉತ್ಸವದ ಪೂರ್ವಸಿದ್ಧತೆ ಮತ್ತು ಜಾತ್ರೆ ಉತ್ಸವ ನಡೆಯುವಾಗ ನಿಯೋಜಿತ ಸೇವಾಕಾರ್ಯವನ್ನು ನಿರ್ವಹಿಸುವುದು.

d) ಕಸ ವಿರೋಧ ಚಟುವಟಿಕೆ ಆಂದೋಲನದಲ್ಲಿ ಭಾಗವಹಿಸಿ ನೀವು ಶಾಲೆ/ಸ್ಥಳೀಯ ಮತ್ತು ಜಿಲ್ಲಾ ಕೇಂದ್ರದ ಸುತ್ತಲೂ ಸ್ವಚ್ಛಮಾಡಿ.

e) 3 R's ಸಂರಕ್ಷಣೆಯ, ಕಡಿಮೆ ಬಳಕೆ, ಪುನರ್ ಚಾಲನೆ ಮತ್ತು ಪುನರ್ ಬಳಕೆಗಳನ್ನು ಮಾಡಿ ತೋರಿಸಿ.

f) ಸ್ವಸಹಾಯ ಸಂಘಗಳನ್ನು ಅಥವಾ ತತ್ಸಮವಾದ ಸಂಘಟನೆ –ಗಳನ್ನು ರಚಿಸಿ ಭಾಗವಹಿಸಿ ಗೈಡ್ ಕೌಶಲಗಳನ್ನು ತಿಳಿಸಿ.

9. ಜ್ಞಾನೇಂದ್ರಿಯ ತರಬೇತಿ: ಕಿಮ್ಸ್‌ನ ಜ್ಞಾನೇಂದ್ರಿಯಗಳ ಆಟ ರುಚಿ, ವಾಸನೆ, ದೃಷ್ಟಿ, ಶಬ್ದ, ಸ್ಪರ್ಶ ಸಾಮರ್ಥ್ಯ ಮತ್ತು ವೀಕ್ಷಣಾ ಸಾಮರ್ಥ್ಯಗಳಸ್ನು ಅಭಿವೃದ್ಧಿಗೊಳಿಸಿಕೊಳ್ಳಿ.

10. ಕೆಳಗಿನ ಪ್ರಾವೀಣ್ಯತಾ ಪದಕಗಳಲ್ಲಿ ಯಾವುದಾದರೂ ಎರಡನ್ನು ಪಡೆಯುವುದು

1. ಪಾಕ ಪ್ರವೀಣೆ (ಕುಕ್)
2. ಚರ್ಚಾಪಟು (ಡಿಬೇಟರ್)

3. ಪ್ರಾಣಿಮಿತ್ರೆ (ಫ್ರೆಂಡ್ ಟು ಅನಿಮಲ್)
4. ತೋಟಗಾರ್ತಿ (ಗಾರ್ಡನರ್)
5. ಗೃಹಕುಶಲಿ (ಹ್ಯಾಂಡಿ ವುಮನ್)
6. ಸೈಕಲ್ ಸವಾರಕಿ (ಸೈಕಲಿಸ್ಟ್)
7. ಮಡಿವಾಳಗಿತ್ತಿ (ಲಾಂಡ್ರೆಸ್)
8. ವಾಚಕಿ (ರೀಡರ್)
9. ಶಿಶುದಾದಿ (ಚೈಲ್ಡ್ ನರ್ಸ್)

11. ಶಿಸ್ತು

a) ವಿವಿಧ ರೀತಿಯಲ್ಲಿ ದಳ ರಚನೆ ಮಾಡಿ

b) ಚುರುಕಾಗಿ ಆಜ್ಞೆಗಳನ್ನು ಪಾಲಿಸುತ್ತಾ ಮೂರರ ಸಾಲಿನಲ್ಲಿ ಪಥಸಂಚಲನ ಮಾಡಿ

c) ನಿಮ್ಮ ದಳದ ನಾಲ್ಕು ಸರ್ವಧರ್ಮ ಪ್ರಾರ್ಥನಾ ಸಭೆಯಲ್ಲಿ ಭಾಗವಹಿಸಿ.

12. ಸಂಪರ್ಕ–ಸಂವಹನ:

a) ಕಂಪ್ಯೂಟರ್ ಬಳಸುವುದನ್ನು ಕಲಿಯಿರಿ. ಅಂತರ್ಜಾಲದ ಬಗ್ಗೆ ಮತ್ತು ಮೊಬೈಲ್ ಅನುಕೂಲತೆ ಮತ್ತು ಅನಾನುಕೂಲತೆ ತಿಳಿಯಿರಿ.

b) ಜಾಲತಾಣಗಳ ಬಳಕೆ ತಿಳಿದು ಭಾರತ ಸ್ಕೌಟ್ಸ್–ಗೈಡ್ಸ್‌ನ ಜಾಲತಾಣವನ್ನು ಸಂಪರ್ಕಿಸಿ.

13. ದೇಶಭಕ್ತಿ:

a) ನಮ್ಮ ಸಂಸ್ಕೃತಿ ಮತ್ತು ಪರಂಪರೆಯ ಬಗ್ಗೆ ಮಾಹಿತಿ ಸಂಗ್ರಹಿಸಿ ದಾಖಲೆ ಪುಸ್ತಕ (Logbook) ಪುಸ್ತಕ ತಯಾರಿಸುವುದು.

14. ಪ್ರಥಮ ಸೋಪಾನದ ನಂತರ ಕನಿಷ್ಠ 6 ತಿಂಗಳು ದ್ವಿತೀಯ ಸೋಪಾನದಲ್ಲಿ ಸೇವೆ ಸಲ್ಲಿಸುವುದು.

ಜಲ ಗೈಡ್ : ಈ ಮೇಲಿನ ದ್ವಿತೀಯ ಸೋಪಾನ್ ಪರೀಕ್ಷೆಗಳ ಜೊತೆಗೆ ಜಲ ಗೈಡ್‌ಗೆ ಈ ಕೆಳಗಿನವುಗಳಲ್ಲಿಯೂ ಅರ್ಹತೆ ಪಡೆಯಬೇಕು.

i) ಈಜುವಿಕೆ

ii) ದೋಣಿ, ತೊಲಿಸುವುದು, ಹುಟ್ಟುಗೋಲು ಮತ್ತು ಲಂಗರು ಇವುಗಳ ಬಗ್ಗೆ ಸಾಮಾನ್ಯ ಜ್ಞಾನ ಇರಬೇಕು

iii) ದೋಣಿಯನ್ನು ಉಪಯೋಗಿಸುವ ರೀತಿ ಮಾಡಬೇಕಾದ್ದು – ಮಾಡಬಾರದ್ದು ಗೊತ್ತಿರಬೇಕು.

iv) ಕೃತಕ ಉಸಿರಾಟವನ್ನು ಮಾಡುವ ಬಗ್ಗೆ ತಿಳಿದಿರಬೇಕು.

ವಾಯು ಗೈಡ್ : ಮೇಲಿನ ದ್ವಿತೀಯ ಸೋಪಾನ್ ಪರೀಕ್ಷೆಗಳ ಜೊತೆಗೆ ವಾಯು ಗೈಡ್ ಈ ಕೆಳಗಿನವುಗಳಲ್ಲಿಯೂ ಅರ್ಹತೆ ಪಡೆಯಬೇಕು.

i) ಭಾರತದ ವಾಯು ಪಡೆಯ ಇತಿಹಾಸ ತಿಳಿದಿರಬೇಕು.

ii) ವಾಯು ಪಡೆಯ ಗುರುತುಗಳನ್ನು ತಿಳಿದಿರುವುದು.

iii) ವಿಮಾನದ ಭಾಗಗಳ ಬಗ್ಗೆ ಸಾಮಾನ್ಯ ಜ್ಞಾನ ಇರಬೇಕು.

iv) ವಾಯು ನಿಲ್ದಾಣ, ವಾಯು ಪಡೆ ಕ್ಷೇತ್ರ ಮತ್ತು ಹರಿಸುವ ಪದ್ಧತಿ ಬಗ್ಗೆ ಸಾಮಾನ್ಯ ಜ್ಞಾನ.

ಸೂಚನೆ:

i) ಸ್ಥಳೀಯ / ಜಿಲ್ಲಾ ಸಂಸ್ಥೆಯ ಪದಕ ಸಮಿತಿಯಿಂದ ನೇಮಿಸಲ್ಪಟ್ಟು ಸ್ವತಂತ್ರ ಪರೀಕ್ಷಕರಿಂದ ಪರೀಕ್ಷೆ ನಡೆದ ನಂತರ ಪರೀಕ್ಷಕರು ಪ್ರಮಾಣ ಪತ್ರ ನೀಡುತ್ತಾರೆ.

ii) ದ್ವಿತೀಯ ಸೋಪಾನದ ಪದಕ ದೇವನಾಗರಿ ಲಿಪಿಯಾದ 'TAYYAR' ಎಂಬ ಪದ ಇದ್ದು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಲಾಂಛನದಿಂದ ಒಳಗೊಂಡಿರುತ್ತದೆ.

iii) ಎಡತೋಳಿನಲ್ಲಿರುವ ಪ್ರಥಮ ಸೋಪಾನದ ಪದಕ ತೆಗೆದು ಅದೇ ಸ್ಥಳದಲ್ಲಿ ದ್ವಿತೀಯ ಸೋಪಾನದ ಪದಕ ಧರಿಸಬೇಕು.

——*——

ತೃತೀಯ ಸೋಪಾನದ ಪರೀಕ್ಷೆಗಳು

1. **ಅಗ್ರಗಾಮಿತ್ವ:**

a) ಕೆಳಗಿನ ಗಂಟುಗಳನ್ನು ಕಟ್ಟುವುದನ್ನು ಮತ್ತು ಅದರ ಉಪಯೋಗವನ್ನು ತಿಳಿಯಿರಿ.

* ಅಗ್ನಿಶಾಮಕ ಆಸನಗಂಟು (ಫೈರ್‌ಮನ್ಸ್ ಚೇರ್ ನಾಟ್)
* ಏರಿಳಿವ ಗಂಟು (ಮ್ಯಾನ್ ಹಾರ್‌ನೆಸ್)
* ಬೋಲೈನ್ ಆನ್ ಎ ಬೈಟ್
* ಸೆಳೆವ ಗಂಟು (ಡ್ರಾಹಿಚ್)

b) ಕರ್ಣಕಟ್ಟನ್ನು (ಡಯಾಗನಲ್ ಲ್ಯಾಷಿಂಗ್) ಕಟ್ಟಿ ಪ್ರದರ್ಶಿಸಿ ಬಳಸಿ

c) ತುದಿಕಟ್ಟನ್ನು ಪ್ರಥಮ ಸೋಪಾನದಲ್ಲಿ ಕಟ್ಟಿದ ವಿಧವನ್ನು ಹೊರತುಪಡಿಸಿ ಮತ್ತೊಂದು ವಿಧಾನವನ್ನು ಕಲಿಯುವುದು.

d) ಅಷ್ಟಕದಲ್ಲಿ 3 ದಂಡಗಳಿಂದ ಧ್ವಜಸ್ತಂಭವನ್ನು ರಚಿಸಿ ಧ್ವಜಕಟ್ಟಿ ಹಾರಿಸಿ.

e) ತಾತ್ಕಾಲಿಕ ಗುಡಾರವನ್ನು ಸಿದ್ಧಪಡಿಸಿ ಉಪಯೋಗಿಸಿ.

f) ಯಾವುದಾದರೂ ಒಂದು ವಿಧದ ಹೆಣಿಗೆಯ ಸ್ಪ್ಲೈಸಿಂಗ್ (Splicing) ಅಭ್ಯಾಸ ಮಾಡಿ ಕಣ್ಣು ಹೆಣಿಗೆ/ಹಿಮ್ಮುಕ ಹೆಣಿಗೆ/ಗಿಡ್ಡ ಹೆಣಿಗೆ.

2. **ಈಜುಗಾರಿಕೆ**

a) 50 ಮೀಟರ್ ಈಜುವುದು

b) ಈಜುವಿಕೆಯ ಸುರಕ್ಷತಾ ನಿಯಮ ತಿಳಿಯುವುದು.

c) ಸ್ನಾಯು ಸೆಳೆತಕ್ಕೆ ಚಿಕಿತ್ಸೆ ತಿಳಿದಿರುವುದು.

ಅಥವಾ

II. **ಕೆಳಗಿನ ಪ್ರಾವೀಣ್ಯತಾ ಪದಕಗಳಲ್ಲಿ ಯಾವುದಾದರೂ ಒಂದನ್ನು ಗಳಿಸಿ**

a) ಕ್ರೀಡಾಪಟು (ಅಥ್ಲೆಟ್)

b) ಪರ್ವತಾರೋಹಿ (ಕ್ಲೈಂಬರ್)

c) ಕ್ರೀಡಾನಾಯಕಿ (ಗೇಮ್ಸ್ ಲೀಡರ್)

d) ಅಂಗಸಾಧಕಿ (ಜಿಮ್ನಾಸ್ಟ್)

e) ಹೊರಸಂಚಾರಿ (ಹೈಕರ್)

f) ಯೋಗಪಟು (ಯೋಗ)

g) ಸೈಕಲ್ ಸವಾರಕಿ (ಸೈಕ್ಲಿಸ್ಟ್)

3. **ಅಳತೆ ಅಂದಾಜು**

a) ಎತ್ತರ

b) ಆಳ, ಅಗಲ

c) ಸಂಖ್ಯೆ

d) ತೂಕ ಇವುಗಳ ಅಂದಾಜು ಅಳತೆ ಮಾಡಿ

4. **ಪ್ರಥಮ ಚಿಕಿತ್ಸೆ**

a) ಕೆಳಗಿನವುಗಳಿಗೆ ಮಾಡಬೇಕಾದ ಪ್ರಥಮ ಚಿಕಿತ್ಸೆಯನ್ನು ಅಭ್ಯಾಸ ಮಾಡಿ.

* ಮುಳುಗಿದಾಗ
* ವಿದ್ಯುತ್ ಅಪಘಾತ
* ಸಾಮಾನ್ಯ ಅಪಘಾತ
* ವಾಹನ ಅಪಘಾತ
* ಬೆಂಕಿಯಲ್ಲಿ ಸಿಕ್ಕಿಬಿದ್ದವರು

b) ಶ್ವಾಸ ಬಂಧಕ (ಚೋಕಿಂಗ್) ಚಿಕಿತ್ಸೆ ನೀಡುವುದು

c) ಕೊರಳು ಮೂಳೆ, ಮುಂಗೈ, ಪೃಷ್ಠ (ಹಿಪ್), ಮುಂಗಾಲು ಈ ಸರಳ ಅಸ್ಥಿಭಂಗಗಳಿಗೆ ಚಿಕಿತ್ಸೆ ನೀಡುವುದನ್ನು ಕಲಿಯಿರಿ.

d) ಬಿಸಿಲು ಆಘಾತ (ಸನ್ ಸ್ಟ್ರೋಕ್) ಶಾಖದಿಂದ ಆಘಾತ (ಹೀಟ್ ಸ್ಟ್ರೋಕ್)ಗಳಿಗೆ ಚಿಕಿತ್ಸೆ ಅಭ್ಯಾಸ ಮಾಡಿ

e) ಕಾರ್ಡಿಯೋಪಲ್ಮನರಿ (ರಿಸಸಿಸ್ಟೇಷನ್ – ಹೃದಯ ರಕ್ತನಾಳದ ಪುನರುಜ್ಜೀವನ (ಸಿ.ಪಿ.ಆರ್.)) ಕಲಿತು ಪ್ರದರ್ಶಿಸಿ.

f) ಜ್ಞಾನ ತಪ್ಪಿದವರನ್ನು ಸುಸ್ಥಿತಿಯಲ್ಲಿ ಮಲಗಿಸುವುದು.

g) ಗಾಯಾಳುಗಳನ್ನು ಸಾಗಿಸುವುದು. ಒಬ್ಬರು ಇದ್ದಾಗ ಮತ್ತು ಇಬ್ಬರು ಇದ್ದಾಗ.

5. ನಕ್ಷಾ ಕೌಶಲ

ಜಿ.ಪಿ.ಎಸ್. ನಕ್ಷೆ ಬಳಸಿ ಗೊತ್ತುಪಡಿಸುವ ದಾರಿಯನ್ನು ಅನುಸರಿಸಿ.

ಅಥವಾ

ಕಂಪಾಸ್ ಬಳಸಿ ತ್ರಿಕೋನ ವಿಧಾನ / ಸಾಮಾನ್ಯ ಮೇಜು ವಿಧಾನ (ಪ್ಲೇನ್ ಟೇಬಲ್ ಮೆಥೆಡ್)ದಲ್ಲಿ ಕ್ಷೇತ್ರ ನಕ್ಷೆಯನ್ನು ತಯಾರಿಸಿ.

ಅಥವಾ

ರಸ್ತೆ ಹಾಯಿ ವಿಧಾನದಲ್ಲಿ (ರೋಡ್ ಟ್ರಾವರ್ಸ್) 4 ಕಿ.ಮೀ. ದೂರದ ಮಾರ್ಗ ನಕ್ಷೆ ತಯಾರಿಸಿ.

6. **ಮಾತನಾಡುವುದು**

ನೀವು ದಳದ ಸಭೆಯಲ್ಲಿ ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆಮಾಡಿಕೊಂಡು 5 ನಿಮಿಷಗಳ ಕಾಲ ಮಾತನಾಡಿ.

a) ರಾಷ್ಟ್ರೀಯ ಭಾವೈಕ್ಯತೆ

b) ಮಗುವಿನ ನಿಂದನೆ – ಮಗುವಿನ ಸಾಮಾಜಿಕ ಸುರಕ್ಷತೆ
ಮಗುವಿನ ಶಿಕ್ಷಣ – ಬಾಲ ಕಾರ್ಮಿಕತೆ
ಮಗುವಿನ ಆರೋಗ್ಯ

c) ಮಾದಕ ವಸ್ತುಗಳು

d) ನಿಮ್ಮ ಭವಿಷ್ಯದ ಗೈಡ್ ತರಬೇತಿ

e) ಲಿಂಗ ಸಮಾನತೆ

f) ನನ್ನ ಮುಕ್ತ ಇರುವಿಕೆ (Free being me)

7. **ಹೊರಾಂಗಣ**

a) ಒಂದು ರಾತ್ರಿ ತಂಗುವ ಅಷ್ಟಕ ಶಿಬಿರದ ಯೋಜನೆ ಸಿದ್ಧಮಾಡಿ

b) 10 ಕಿ.ಮೀ. ನಡಿಗೆಯಲ್ಲಿ ಅಷ್ಟಕವಾರು/ದಳದೊಡನೆ ಹೊರ ಸಂಚಾರ ಮಾಡಿ ಊಟ ಮತ್ತು ಚಹ/ಕಾಫಿಯನ್ನು ನಿಮ್ಮ ಅಷ್ಟಕಕ್ಕೆ ಬೇಕಾಗುವಷ್ಟು ತಯಾರಿಸಿ ಒಂದು ವಾರದಲ್ಲಿ ಇದರ ವರದಿಯನ್ನು ಸಲ್ಲಿಸಿ. ಹೊರ ಸಂಚಾರ ಮಾರ್ಗವನ್ನು ಪರೀಕ್ಷಕರು ನೀಡುತ್ತಾರೆ.

c) ಕತ್ತಲೆಯಲ್ಲಿ ಆಡುವ ಆಟದಲ್ಲಿ ಭಾಗವಹಿಸಿ

8. **ಅಡುಗೆ**

ಆದಿಮಾನವರು/ಕಾಡುಜನರು (ಬ್ಯಾಕ್ ವುಡ್ಸ್‌ಮನ್ ಕುಕಿಂಗ್)

ಅನುಸರಿಸುತ್ತಿದ್ದ ವಿಧಾನದಲ್ಲಿ ಒಂದು ಅಷ್ಟಕಕ್ಕೆ ಬೇಕಾಗುವಷ್ಟು ಆಹಾರವನ್ನು ತಯಾರಿಸಿ.

9. ಮೋರ್ಸ್ ಸಂಕೇತ ಭಾಷೆ ಕಲಿತು 10 ಪದಗಳ ಸರಳ ಸಂದೇಶವನ್ನು ಕಳುಹಿಸಿ, ಸ್ವೀಕರಿಸಿ

10. ಪ್ರಾವೀಣ್ಯತಾ ಪದಕ

1) ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪ್ರಾವೀಣ್ಯತಾ ಪದಕಗಳನ್ನು ಗಳಿಸಿ ಪ್ರತಿ ಗುಂಪಿನಿಂದ ಒಂದನ್ನು ಆಯ್ಕೆಮಾಡಿ (ಮೊದಲು ಗಳಿಸದೆ ಇರುವ)

ಗುಂಪು–ಎ

i) ನಾಗರಿಕ ರಕ್ಷಣೆ (ಸಿವಿಲ್ ಡಿಫೆನ್ಸ್)
ii) ಸಮುದಾಯ ಕಾರ್ಯಕರ್ತೆ (ಕಮ್ಯುನಿಟಿ ವರ್ಕರ್)
iii) ಜೀವ ಪರಿಸರ ತಜ್ಞೆ (ಎಕಾಲಿಜಿಸ್ಟ್)
iv) ಅಗ್ರಗಾಮಿ (ಪಯನಿಯರ್)
v) ಸುರಕ್ಷತಾ ಜ್ಞಾನ (ಸೇಫ್ಟಿ ನಾಲೆಡ್ಜ್)
vi) ಸ್ವರಕ್ಷಣೆ (ಸೆಲ್ಫ್ ಡಿಫೆನ್ಸ್)
vii) ವಿಶ್ವ ಸಂರಕ್ಷಣೆ (ವರ್ಲ್ಡ್ ಕನ್ಸರ್ವೇಷನ್)

ಗುಂಪು–ಬಿ

i) ಏಡ್ಸ್ ಜಾಗೃತಿ (ಏಡ್ಸ್ ಅವೇರ್ನೆಸ್)
ii) ರಟ್ಟು ಕಟ್ಟುವವರು (ಬುಕ್ ಬೈಂಡರ್)
iii) ನಾಗರಿಕ (ಸಿಟಿಜನ್)

iv) ಕಂಪ್ಯೂಟರ್ ಅವೇರ್ನೆಸ್

v) ಮಾದಕ ವಸ್ತುಗಳ ದ್ರವ್ಯ ಜಾಗೃತಿ (ಡ್ರಗ್ ಅವೇರ್ನೆಸ್)

vi) ಆರೋಗ್ಯಕರ ಮಹಿಳೆ (ಹೆಲ್ಥಿ ವುಮೆನ್)

vii) ಆತಿಥ್ಯಕಾರಿಣಿ (ಹೋಸ್ಟಸ್)

viii) ಪ್ರಕೃತಿ ಪ್ರಜ್ಞೆ (ನ್ಯಾಚುರಲಿಸ್ಟ್)

ix) ಮಾರ್ಗಾನ್ವೇಷಕಿ (ಪಾತ್ ಫೈಂಡರ್)

11. **ಜ್ಞಾನ**

a) ಭಾರತದಲ್ಲಿ ಗೈಡಿಂಗ್ ಮತ್ತು ವಿಶ್ವ ಗೈಡಿಂಗ್ ವ್ಯಾಗ್ಸ್ ಬಗ್ಗೆ ಅರಿವು

b) ಎ.ಟಿ.ಎಂ. ಮತ್ತು ಮೊಬೈಲ್ ಬಳಕೆಯ ಬಗ್ಗೆ

ಅಥವಾ

ಮನೆಗೆ ಉಪಯುಕ್ತವಾದ ವಿದ್ಯುತ್/ ವಿದ್ಯುನ್ಮಾನ ಸಾಮಾನ್ಯ ಸಲಕರಣೆಗಳನ್ನು ತರಬೇತಿ ಹೊಂದಿದ ಹಿರಿಯರ ಮೇಲ್ವಿಚಾರಣೆಯಲ್ಲಿ ಜೋಡಿಸಿ.

12. **ಬೆಂಕಿ**

ಕೆಳಗಿನವುಗಳಲ್ಲಿ ಯಾವುದಾದರೂ ಮೂರನ್ನು ಪೂರ್ಣಗೊಳಿಸಿ

a) ಬೆಂಕಿಯ ಬಗ್ಗೆ ಎಚ್ಚರಿಕೆ

b) ಬಕೆಟ್ ಚೈನ್ ವಿಧಾನದಿಂದ ಬೆಂಕಿ ಆರಿಸುವುದನ್ನು ಪ್ರತ್ಯಕ್ಷವಾಗಿ ತೋರಿಸಿ.

c) ಒಣ ಹುಲ್ಲಿಗೆ ಬಿದ್ದ ಬೆಂಕಿಯನ್ನು ತಡೆಯುವ ಕ್ರಮ

d) ಅಗ್ನಿಶಾಮಕಗಳ ವಿಧಗಳು ಮತ್ತು ಉಪಯೋಗ

13. ಸೇವೆ

ಕ್ಷಯರೋಗದ ಕಾರಣ, ಲಕ್ಷಣ, ಚಿಕಿತ್ಸೆ ಮತ್ತು ಎಚ್ಚರಿಕೆಯ ಬಗ್ಗೆ ತಿಳಿಯಿರಿ

14. ದ್ವಿತೀಯ ಸೋಪಾನ ಮುಗಿಸಿದ ನಂತರ ತೃತೀಯ ಸೋಪಾನದ ಗೈಡಾಗಿ ಆರು ತಿಂಗಳು ಸೇವೆ ಸಲ್ಲಿಸುವುದು.

ಜಲಗೈಡ್: ಮೇಲಿನ ತೃತೀಯ ಸೋಪಾನ ಪರೀಕ್ಷೆಗಳ ಜೊತೆಗೆ ಕೆಳಗಿನ ಪರೀಕ್ಷೆಗಳಲ್ಲೂ ಅರ್ಹತೆ ಪಡೆಯಬೇಕು.

1. ಹಿಮ್ಮುಖ ಮತ್ತು ವಿವಿಧ ರೀತಿಯಲ್ಲಿ 30 ಮೀಟರ್ ಈಜುವುದು.
2. ನೀರಿಗೆ ಜಿಗಿಯುವುದನ್ನು ಕಲಿಯುವುದು.
3. ವಿವಿಧ ರೀತಿಯ ದೋಣಿ, ಪಟ ಲಂಗರಿನ ಬಗ್ಗೆ ತಿಳಿಯುವುದು.
4. ಸೆಮಫೋರ್ ವಿಧಾನದಿಂದ ಸರಳವಾದ ಸುದ್ದಿ ಕಳುಹಿಸುವುದು ಮತ್ತು ಸ್ವೀಕರಿಸುವುದು.
5. ಕನಿಷ್ಟ ನಾವಿಕರಿಗೆ ಉಪಯುಕ್ತವಾದ ಮೂರು ನಕ್ಷತ್ರಗಳ ಬಗ್ಗೆ ತಿಳಿಯುವುದು.

ವಾಯುಗೈಡ್ : ಮೇಲಿನ ತೃತೀಯ ಸೋಪಾನ ಪರೀಕ್ಷೆಗಳ ಜೊತೆಗೆ ಕೆಳಗಿನ ಪರೀಕ್ಷೆಗಳಲ್ಲೂ ಅರ್ಹತೆ ಪಡೆಯಬೇಕು.

1. ಕನಿಷ್ಟ ಎರಡು ಬೇರೆ ಬೇರೆ ವಿಧದ ವಿಮಾನಗಳ ಹಾರಾಟದ ಇತಿಹಾಸ ತಿಳಿಯುವುದು.
2. ಹಾರಾಟದ ತತ್ವದ ಬಗ್ಗೆ ತಿಳಿಯುವುದು.
3. ಹಾರಾಟದ ಸುರಕ್ಷತೆ ಬಗ್ಗೆ ತಿಳಿಯುವುದು.
4. ರಾಷ್ಟ್ರೀಯ, ಅಂತರಾಷ್ಟ್ರೀಯ ನಾಗರಿಕ ವಾಯುಯಾನದ ಬಗ್ಗೆ ತಿಳಿಯುವುದು.

ಸೂಚನೆ :

ಸಂದರ್ಭಕ್ಕೆ ತಕ್ಕಂತೆ ಸ್ಥಳೀಯ ಅಥವಾ ಜಿಲ್ಲಾ ಸಂಸ್ಥೆಯು ನೇಮಕ ಮಾಡಿದ ಪ್ರಾವೀಣ್ಯತಾ ಪದಕದ ಸಮಿತಿಯವರು, ನಿಯೋಜಿಸಿದ ಸ್ವತಂತ್ರ ಪರೀಕ್ಷಕರು ಪರೀಕ್ಷಿಸಿ ಯಶಸ್ವಿಯಾಗಿ ತೃತೀಯ ಸೋಪಾನದ ಪರೀಕ್ಷೆ ಮುಗಿಸಿದ್ದಾರೆಂದು ನೀಡಿದ ಪ್ರಮಾಣಪತ್ರದ ಆಧಾರದ ಮೇಲೆ ಪದಕವನ್ನು ನೀಡಲಾಗುವುದು. ತೃತೀಯ ಸೋಪಾನದ ಪದಕವನ್ನು ಎಡತೋಳಿನ ದ್ವಿತೀಯ ಸೋಪಾನದ ಪದಕ ತೆಗೆದು ಅದೇ ಸ್ಥಳದಲ್ಲಿ ಹಾಕುವುದು.

ತೃತೀಯ ಸೋಪಾನ ಮುಗಿಸಿದ ನಂತರ ರಾಜ್ಯ ಪುರಸ್ಕಾರ ಗೈಡಾಗಿ 9 ತಿಂಗಳ ಕಾಲ ಸೇವಾ ಕಾರ್ಯ ಮಾಡುವುದು.

———*———

ರಾಜ್ಯ ಪುರಸ್ಕಾರ ಪರೀಕ್ಷೆ

1. ತೃತೀಯ ಸೋಪಾನದವರೆಗಿನ ಪ್ರಾವೀಣ್ಯತೆ ಬಗ್ಗೆ ಖಚಿತ ಪಡಿಸಿಕೊಳ್ಳಿ.
2. ತೃತೀಯ ಸೋಪಾನ ಪದಕವನ್ನು ಪಡೆದಿರುವುದು.
3. ಆಂಬುಲೆನ್ಸ್ (ಚರಚಿಕಿತ್ಸಾ) ಪದಕ ಗಳಿಸುವುದು.
4. 10 ಕಿ.ಮೀ. ನಡಿಗೆಯಲ್ಲಿ ಅಥವಾ 25 ಕಿ.ಮೀ. ಸೈಕಲ್‌ನಲ್ಲಿ ಒಂದು ರಾತ್ರಿ ತಂಗುವ ಹೊರ ಸಂಚಾರದಲ್ಲಿ ನಿಮ್ಮ ದಳದೊಂದಿಗೆ ಭಾಗವಹಿಸಿ ಹತ್ತು ದಿನದೊಳಗೆ ವರದಿಯನ್ನು ನಿಮ್ಮ ಗೈಡ್ ಶಿಕ್ಷಕಿಗೆ ಸಲ್ಲಿಸುವುದು.
5. ಕೆಳಗಿನವುಗಳಲ್ಲಿ ಯಾವುದಾದರೂ ಒಂದು ಯೋಜನೆಯನ್ನು 6 ತಿಂಗಳು ಮಾಡಿ, ವರದಿಯನ್ನು ಸಲ್ಲಿಸುವುದು.
   * ಕೈತೋಟ (ಕಿಚನ್ ಗಾರ್ಡನ್)
   * ತಾರಸಿ ತೋಟ (ರೂಫ್ ಗಾರ್ಡನ್)
   * ತೂಗು ತೋಟ (ಹ್ಯಾಂಗಿಂಗ್ ಗಾರ್ಡನ್)
6. ನಕ್ಷಾ ಕೌಶಲ (ಮ್ಯಾಪಿಂಗ್) ಕೆಳಗಿನ ಯಾವುದಾದರೂ ಒಂದು ವಿಧಾನವನ್ನು ಅನುಸರಿಸಿ ನಕ್ಷೆಯನ್ನು ತಯಾರಿಸಿ (ಮೊದಲು ಮಾಡಿರುವುದನ್ನು ಹೊರತುಪಡಿಸಿ)
   * ಸಾಮಾನ್ಯ ಮೇಜು ವಿಧಾನ
   * ತ್ರಿಕೋನ ವಿಧಾನ   * ಮಾರ್ಗ ನಕ್ಷೆ

7. **ಶಿಬಿರ ಕೌಶಲ (ಕ್ಯಾಂಪ್ ಕ್ರಾಫ್ಟ್)**

* ಒಂದು ಅಥವಾ ಎರಡು ಭಾವಣಿಯ ಗುಡಾರವನ್ನು (ಟೆಂಟ್) ಬಿಚ್ಚಿ ಹಾಕಿ ಮಡಚಿ ಇಡುವುದನ್ನು ಮಾಡುವುದು.
* ಹೆಣಿಗೆ ಸ್ಪ್ಲೈಸಿಂಗ್ ಮೊದಲು ಮಾಡದೆ ಇರುವ ಯಾವುದಾದರೂ ಒಂದನ್ನು ಮಾಡಿ ಕಣ್ಣು/ಹಿಮ್ಮುಕ/ ಗಿಡ್ಡ ಹೆಣಿಗೆ
* ಯಾವುದಾದರೂ ಅಗ್ರಗಾಮಿ ಯೋಜನೆಯ ಮಾದರಿ ತಯಾರಿಸಿ

8. **ಹಿಂದಿನ ಪರೀಕ್ಷೆಗಳಲ್ಲಿ ಗಳಿಸದೆ ಇರುವ ಕೆಳಗಿನ ಪ್ರಾವೀಣ್ಯತಾ ಪದಕಗಳಲ್ಲಿ ಯಾವುದಾದರೂ ಮೂರನ್ನು ಗಳಿಸಿ.**

a) ಶಿಶುದಾದಿ (ಚೈಲ್ಡ್ ನರ್ಸ್)
b) ಸಮುದಾಯದ ಕಾರ್ಯಕರ್ತೆ (ಕಮ್ಯೂನೀಟಿ ಕಾರ್ಯಕರ್ತೆ)
c) ಜೀವಪರಿಸರ ಶಾಸ್ತ್ರ (ಎಕಾಲಜಿ)
d) ಸಾಕ್ಷರತೆ (ಲಿಟ್ರಸಿ)
e) ಸಮುದಾಯ ಹಾಡುಗಾರಿಕೆ (ಕಮ್ಯುನಿಟಿ ಸಿಂಗಿಂಗ್)
f) ನೈರ್ಮಲ್ಯ ವರ್ಧಕ (ಸ್ಯಾನಿಟೇಷನ್ ಪ್ರಮೋಟರ್)
g) ಸಾರ್ವಜನಿಕ ಆರೋಗ್ಯ (ಪಬ್ಲಿಕ್ ಹೆಲ್ತ್)
h) ಮಣ್ಣಿನ ಸಂರಕ್ಷಕಿ (ಸಾಯಿಲ್ ಕನ್ಸರ್‌ವೇಟರ್)
i) ಸೌರಶಕ್ತಿ ಜಾಗೃತಿ (ಸೋಲಾರ್ ಎನರ್ಜಿ ಅವೇರ್‌ನೆಸ್)
j) ಸುರಕ್ಷತಾ ಅರಿವು (ಸೇಫ್ಟಿ ನಾಲೆಡ್ಜ್)
k) ಗ್ರಾಮ ಕಾರ್ಯಕರ್ತೆ (ರೂರಲ್ ವರ್ಕರ್)
l) ರಕ್ಷಕಿ (ರೆಸ್ಕ್ಯುಯರ್)

9. ಕೆಳಗಿನವುಗಳಲ್ಲಿ ಗಳಿಸದೇ ಇರುವ ಯಾವುದಾದರೂ ಎರಡು ಪ್ರಾವೀಣ್ಯತಾ ಪದಕಗಳನ್ನು ಗಳಿಸುವುದು.

* ಶಿಬಿರವಾಸಿ
* ಅಗ್ರಗಾಮಿ (ಪಯೋನಿಯರ್)
* ನಕ್ಷತ್ರ ವೀಕ್ಷಕ (ಸ್ಟಾರ್ ಗ್ಗೇಝರ್)
* ಪ್ರಕೃತಿ ತಜ್ಞೆ (ನ್ಯಾಚುರಲಿಸ್ಟ್)
* ಜಾಡುಗಾತಿ (ಟ್ರಾಕರ್)
* ವಿದ್ಯುನ್ಮಾನ (ಎಲೆಕ್ಟ್ರಾನಿಕ್ಸ್)
* ಸಂಕೇತಗಾರ್ತಿ (ಸಿಗ್ನಲರ್)
* ಕ್ಯಾನ್ಸರ್ ಜಾಗೃತಿ (ಕ್ಯಾನ್ಸರ್ ಅವೇರ್‌ನೆಸ್)
* ಆರೋಗ್ಯ (ಹೆಲ್ತ್)
* ಪೌಷ್ಟಿಕ ಆಹಾರ ಶಿಕ್ಷಕಿ (ನ್ಯೂಟ್ರಿಷನ್ ಎಜುಕೇಟರ್)
* ಕೃಷಿಕ (ಫಾರ್‌ಮರ್)
* ಹೈನುಗಾರ್ತಿ (ಡೈರಿಮೇಡ್)
* ಬರಹಗಾರ್ತಿ (ರೈಟರ್)
* ಸೌಂದರ್ಯ ವರ್ಧಕಿ (ಬ್ಯುಟೀಷಿಯನ್)
* ನಾನು ಮುಕ್ತವಾಗಿರುವಿಕೆ (ಫ್ರೀ ಬೀಯಿಂಗ್ ಮಿ)
* ನೃತ್ಯಗಾರ್ತಿ (ಡ್ಯಾನ್ಸರ್)
* ಭಾರತ್ ಸ್ಕೌಟ್ ಮತ್ತು ಗೈಡ್ ಜಾಲತಾಣದ ಬಗ್ಗೆ ಸಾಮಾನ್ಯ ಜ್ಞಾನ ಮತ್ತು ನಿಮ್ಮ ಪ್ರಾದೇಶಿಕ ಕೇಂದ್ರ ಕಛೇರಿಯ ಬಗ್ಗೆ ಮಾಹಿತಿ

ಜಲಗೈಡ್: ಮೇಲಿನ ರಾಜ್ಯ ಪುರಸ್ಕಾರ್ ಪರೀಕ್ಷೆಗಳ ಜೊತೆಗೆ ಕೆಳಗಿನ ಪರೀಕ್ಷೆಗಳಲ್ಲೂ ಅರ್ಹತೆ ಪಡೆಯಬೇಕು.

1. ಹಿಮ್ಮುಖ ಮತ್ತು ವಿವಿಧ ರೀತಿಯಲ್ಲಿ 50 ಮೀಟರ್ ಈಜುವುದು.
2. ನೀರಿಗೆ ಜಿಗಿದು ಒಂದು ನಿಮಿಷ ನೀರಿನಲ್ಲೇ ಇರುವುದು.
3. ಮುಳುಗುತ್ತಿರುವ ವ್ಯಕ್ತಿಯನ್ನು ರಕ್ಷಿಸುವ ಕ್ರಮವನ್ನು ತಿಳಿಯುವುದು.
4. ಸೆಮಫೋರ್ ವಿಧಾನದಿಂದ ಸರಳವಾದ ಸುದ್ದಿ ಕಳುಹಿಸುವುದು ಮತ್ತು ಸ್ವೀಕರಿಸುವುದು.
5. ನೆರೆರಾಷ್ಟ್ರಗಳ ಧ್ವಜಗಳ ಬಗ್ಗೆ ತಿಳಿಯುವುದು.
6. ಕನಿಷ್ಟ ನಾವಿಕರಿಗೆ ಉಪಯುಕ್ತವಾದ ಮೂರು ನಕ್ಷತ್ರಗಳ ಬಗ್ಗೆ ತಿಳಿಯುವುದು.

ವಾಯುಗೈಡ್ : ಮೇಲಿನ ರಾಜ್ಯ ಪುರಸ್ಕಾರ ಪರೀಕ್ಷೆಗಳ ಜೊತೆಗೆ ಕೆಳಗಿನ ಪರೀಕ್ಷೆಗಳಲ್ಲೂ ಅರ್ಹತೆ ಪಡೆಯಬೇಕು.

1. ಕನಿಷ್ಟ ಎರಡು ಬೇರೆ ಬೇರೆ ವಿಧದ ವಿಮಾನಗಳ ಮಾದರಿ ಮಾಡುವುದು.
2. ವಾಯುಬಯಲು ಮತ್ತು ಅದರ ಸಂಕೇತ ವಿಧಾನ ತಿಳಿದಿರುವುದು.
3. ವಾಯುಬಯಲಿನ ಯೋಜನೆ ಹಾಕಿ ಮಾದರಿ ತಯಾರಿಸುವುದು.
4. ರಾಷ್ಟ್ರೀಯ ನಕ್ಷೆಯಲ್ಲಿ ವಿಮಾನ ನಿಲ್ದಾಣ ಮತ್ತು ವಾಯುಪಡೆಯ ಮೈದಾನವನ್ನು ಗುರುತಿಸು.

ಸೂಚನೆ: i) ರಾಜ್ಯ ಪುರಸ್ಕಾರ ಪದಕದಲ್ಲಿ ಮೇಲೆ ಅಶೋಕ ಚಕ್ರ ಕೆಳಗೆ ಭಾರತ ಸ್ಕೌಟ್ ಮತ್ತು ಗೈಡ್ ಲಾಂಛನವಿರುತ್ತದೆ. ಇವೆರಡನ್ನೂ ಎಲೆಯ ಎರಡು ಗುಚ್ಛಗಳಿಂದ (Laurel) ಸೇರಿಸಲಾಗಿರುತ್ತದೆ. ಮಧ್ಯದಲ್ಲಿ ದೇವನಾಗರಿ ಲಿಪಿಯಲ್ಲಿ **ಸೇವಾ** ಎಂದು ಬರೆದಿರುತ್ತದೆ.

ii) ಸ್ಥಳೀಯ/ಜಿಲ್ಲಾ ಸಂಸ್ಥೆಯ ಪದಕ ಸಮಿತಿ ನೇಮಕ ಮಾಡಿದ ಸ್ವತಂತ್ರ ಪರೀಕ್ಷಕರಿಂದ ಪಡೆಯುವ ಪ್ರಮಾಣ ಪತ್ರದ ಆಧಾರದ ಮೇಲೆ ಪದಕವನ್ನು ನೀಡಲಾಗುವುದು.

iii) ಅರ್ಹತಾ ಪದಕವನ್ನು ಪಡೆದ ಗೈಡ್ ರಾಜ್ಯ ಮೇಲ್ವಿಚಾರಣೆಯಲ್ಲಿ ನಡೆಯುವ ರಾಜ್ಯ ಪುರಸ್ಕಾರ ಪರೀಕ್ಷಾ ಶಿಬಿರದಲ್ಲಿ ಭಾಗವಹಿಸುವುದು. ಅಲ್ಲಿ ಗೈಡ್‌ನ ಜ್ಞಾನ ಮತ್ತು ಕೌಶಲವನ್ನು ಮರುಪರೀಕ್ಷಿಸಲಾಗುವುದು. ಈ ಶಿಬಿರದಲ್ಲಿ ಅರ್ಹತೆಯನ್ನು ಪಡೆದರೆ ಗೈಡ್ ರಾಜ್ಯ ಪುರಸ್ಕಾರ ಪದಕವನ್ನು ಮತ್ತು ಅರ್ಹತಾ ಪತ್ರವನ್ನು ಪಡೆಯಲು ಅರ್ಹಳಾಗುವಳು.

iv) ರಾಜ್ಯ ಪುರಸ್ಕಾರ ಪದಕವನ್ನು ತೃತೀಯ ಸೋಪಾನದ ಪದಕ ತೆಗೆದು ಅದೇ ಸ್ಥಳದಲ್ಲೇ ಧರಿಸುವುದು.

v) ರಾಜ್ಯ ಪ್ರಧಾನ ಆಯುಕ್ತರಿಂದ ಶಿಫಾರಸ್ಸು ಮಾಡಲ್ಪಟ್ಟ ಈ ಪದಕವನ್ನು ಅವರು ನಿರ್ದೇಶಿಸುವಂತೆ ತೃತೀಯ ಸೋಪಾನದ ಜ್ಞಾನ ಮತ್ತು ಕೌಶಲಗಳನ್ನು ಗೈಡ್ ಹೊಂದಿರುವಳೆಂದು ಖಚಿತಪಡಿಸಿಕೊಳ್ಳುವುದು.

vi) ರಾಜ್ಯ ಪುರಸ್ಕಾರ ಪ್ರಶಸ್ತಿಯನ್ನು ರಾಜ್ಯಪಾಲರು ನೀಡುತ್ತಾರೆ ಅಥವಾ ರಾಜ್ಯದ ಪ್ರಧಾನ ಆಯುಕ್ತರ ಶಿಫಾರಸ್ಸಿನ ಮೇರೆಗೆ ರಾಜ್ಯ ಸಂಸ್ಥೆಯ ಅಧ್ಯಕ್ಷರು ನೀಡುತ್ತಾರೆ.

———*———

ರಾಷ್ಟ್ರಪತಿ ಗೈಡ್ ಪುರಸ್ಕಾರ ಪರೀಕ್ಷೆಗಳು

1. ರಾಜ್ಯ ಪುರಸ್ಕಾರ ಪದಕ ಪಡೆದಿರಬೇಕು. ಅದರ ಗುಣಮಟ್ಟವನ್ನು ಕಾಪಾಡಬೇಕು.

2. **ಶಿಬಿರ ವಾಸ:**
   - a. ದಳ/ಅಷ್ಟಕದ ಜೊತೆ 3 ರಾತ್ರಿ ತಂಗುವ ಶಿಬಿರ ವಾಸವನ್ನು ಮಾಡುವುದು (ಜಾಂಬೂರಿ ರ್‍ಯಾಲಿಗಳ ಶಿಬಿರವಾಸವನ್ನು ಪರಿಗಣಿಸಲಾಗುವುದಿಲ್ಲ)
   - b. ಪ್ರಕೃತಿದತ್ತವಾದ ವಸ್ತುಗಳಿಂದ ಗುಡಾರ/ ಗುಡಿಸಲು, ಮರಕ್ಕೆ ಕಟ್ಟಿ ಇಬ್ಬರು ಮಲಗುವಷ್ಟಿರಬೇಕು.

3. a. ಪ್ರಕೃತಿ ವಿಕೋಪ ನಿರ್ವಹಣ ಪದಕವನ್ನು ಪಡೆದಿರುವುದು.
   - b. ಆಂಬುಲೆನ್ಸ್ ಪದಕವನ್ನು ಪುನಃ ಪಾಸುಮಾಡಿ.

4. **ಈ ಹಿಂದೆ ಗಳಿಸದ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪ್ರಾವೀಣ್ಯತಾ ಪದಕವನ್ನು ಗಳಿಸುವುದು.**
   - a. ಏಡ್ಸ್ ಜಾಗೃತಿ (ಏಡ್ಸ್ ಅವೇರ್‌ನೆಸ್)
   - b. ಗೃಹ ಕುಶಲಿ (ಹ್ಯಾಂಡಿ ವುಮನ್)
   - c. ಸೌಂದರ್ಯ ವರ್ಧಕಿ (ಬ್ಯುಟೀಷಿಯನ್)
   - d. ಮಾರ್ಗಾನ್ವೇಷಕಿ (ಪಾತ್ ಫೈಂಡರ್)

e. ಸಮುದ್ರ ಮೀನುಗಾರ್ತಿ

f. ಹೊರ ಸಂಚಾರಿಕ (ಹೈಕರ್)

g. ವಿಶ್ವ ಸಂರಕ್ಷಕಿ (ವರ್ಲ್ಡ್ ಕನ್ಸರ್‌ವೇಟರ್)

h. ದುಭಾಷಿ/ ಭಾಷಾಂತರಿ (ಇಂಟರ್ ಪ್ರೀಟರ್)

i. ಕೃಷಿಕ (ಫಾರ್‌ಮರ್)

j. ನಾನು ಮುಕ್ತವಾಗಿರುವಿಕೆ (ಫ್ರೀ ಬಿಯಿಂಗ್ ಮಿ)

k. ಸೌರಶಕ್ತಿ ಜಾಗೃತಿ (ಸೋಲಾರ್ ಎನರ್ಜಿ ಅವೇರ್‌ನೆಸ್)

l. ಸಮಾರಂಭ ನಿರ್ವಾಹಕಿ (ಈವೆಂಟ್ ಮ್ಯಾನೇಜರ್)

m. ಸ್ವ–ರಕ್ಷಣೆ (ಸೆಲ್ಫ್ ಡಿಫೆನ್ಸ್)

5. ವಾರಕ್ಕೆ ಎರಡು ಘಂಟೆಯಂತೆ 6 ತಿಂಗಳ ಕಾಲ ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಸೇವಾ ಯೋಜನೆಯಲ್ಲಿ ನಿರಂತರವಾಗಿ ಭಾಗವಹಿಸಿ.

* ಲಿಂಗ ಸಮಾನತೆ ಜಾಗೃತಿ ಮೂಡಿಸಿ ಮಹಿಳೆಯರನ್ನು ಸಬಲಿಕೃತರನ್ನಾಗಿ ಮಾಡಿ
* ಮಕ್ಕಳ ಸಾವನ್ನು ತಡೆಯುವುದು.
* ಬಾಣಂತಿಯರ ಆರೋಗ್ಯವನ್ನು ಸುಧಾರಿಸಿ.
* ಮಲೇರಿಯಾ, ಎಚ್.ಐ.ವಿ. ಏಡ್ಸ್ ಮುಂತಾದ ರೋಗಗಳನ್ನು ಸಮರೋಪಾದಿಯಲ್ಲಿ ತಡೆಗಟ್ಟಿ
* ಪ್ರಕೃತಿ ಸಂಪತ್ತು ನಿರಂತರತೆಯನ್ನು ಕಾಪಾಡುವುದು.

6. ಗೈಡ್ ಶಿಕ್ಷಕಿಯವರ ಮಾರ್ಗದರ್ಶನದಲ್ಲಿ ಮಕ್ಕಳಿಗೆ 15 ದಿನಗಳ ಕಾಲ ಆಟವನ್ನು ಆಡಿಸಿ

ಅಥವಾ

ಆಂತರಿಕ ಅಲಂಕರಣ ಮತ್ತು ಕಲಾತ್ಮಕ ಅಡುಗೆ ಮಾಡಿ ತೋರಿಸುವುದು.

7. ವ್ಯಾಗ್ಸ್ (WAGGGS) ವಿಶ್ವ ಕೇಂದ್ರಗಳ ಪರಿಚಯ ಮಾಡಿಕೊಡಿ. ಮಾಹಿತಿ ಟಿಪ್ಪಣಿ ಬರೆಯಿರಿ.

8. ರಾಜ್ಯ ಪುರಸ್ಕಾರ ಗೈಡ್ ಆಗಿ ಕನಿಷ್ಠ 12 ತಿಂಗಳ ಸೇವೆ ಸಲ್ಲಿಸಬೇಕು.

ಸೂಚನೆ:(i) ರಾಷ್ಟ್ರಪತಿ ಪುರಸ್ಕಾರವನ್ನು ಭಾರತದ ರಾಷ್ಟ್ರಪತಿಯವರು ಪ್ರದಾನ ಮಾಡುತ್ತಾರೆ. (ii) ಈ ಪ್ರಶಸ್ತಿಯನ್ನು ಮತ್ತು ಪದಕವನ್ನು ರಾಷ್ಟ್ರ ಸಂಸ್ಥೆಯ ಆಸ್ತಿ ಎಂದು ಪರಿಗಣಿಸಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಆದೇಶಿಸಿದಲ್ಲಿ ಪ್ರಶಸ್ತಿ ಮತ್ತು ಪದಕವನ್ನು ಹಿಂತಿರುಗಿಸತಕ್ಕದ್ದು. (iii) ಎಲ್ಲಾ ಅವಶ್ಯಕತೆ ಪೂರೈಸಿರುವ, ಅವಶ್ಯಕ ಪ್ರಾವೀಣ್ಯತಾ ಪದಕವನ್ನು ಪಡೆದಿರುವ ನಿಬಂಧನೆಗಳನ್ನು ಅನುಸರಿಸಿರುವ ರಾಜ್ಯ ಪುರಸ್ಕಾರ ಗೈಡ್ ರಾಷ್ಟ್ರೀಯ ಸಂಸ್ಥೆ ಸಹಾಯಕ ನಿರ್ದೇಶಕರ ಮೇಲ್ವಿಚಾರಣೆಯಲ್ಲಿ ಏರ್ಪಡಿಸುವ ಪರೀಕ್ಷಾ ಶಿಬಿರದಲ್ಲಿ ಭಾಗವಹಿಸುವುದು.

ಜಲಗೈಡ್: ಮೇಲಿನ ರಾಷ್ಟ್ರಪತಿ ಗೈಡ್ ಪುರಸ್ಕಾರದ ಪರೀಕ್ಷೆಗಳ ಜೊತೆ ಕೆಳಗಿನ ಪರೀಕ್ಷೆಗಳಲ್ಲೂ ಅರ್ಹತೆ ಪಡೆಯುವುದು

1. ಹಿಮ್ಮುಖ ವರಸೆಯಲ್ಲಿ ನೂರು ಮೀಟರ್ ಈಜುವುದು.
2. ವಿವಿಧ ರೀತಿಯಲ್ಲಿ ನೀರಿಗೆ ಜಿಗಿಯುವುದು.
3. ನೌಕಾಪಡೆಯ ಬಗ್ಗೆ ಮತ್ತು ಅದರಲ್ಲಿನ ಶ್ರೇಣಿಯ ಬಗ್ಗೆ ಸಾಮಾನ್ಯ ತಿಳಿವಳಿಕೆ ಪಡೆಯುವುದು.
4. ಮೋರ್ಸ್ ಸಂಕೇತಗಳನ್ನು ಉಪಯೋಗಿಸುವುದರ ಮೂಲಕ ಸಂಕೇತ ಭಾಷೆಯನ್ನು ಕಲಿಯುವುದು.
5. ಹಡಗುಗಳ ಬಗ್ಗೆ ಸಾಮಾನ್ಯ ಮಾಹಿತಿ ತಿಳಿಯುವುದು

6. ಹವಾಮಾನ, ವಾಯುಗುಣ, ಅಲೆಗಳ ಏರಿಳಿತದ ಬಗ್ಗೆ ಸಾಮಾನ್ಯ ತಿಳಿವಳಿಕೆ ಪಡೆಯುವುದು.
7. ನಕ್ಷತ್ರ ಪುಂಜಗಳ ಬಗ್ಗೆ ತಿಳಿಯುವುದು.

ವಾಯುಗೈಡ್ : ಮೇಲಿನ ರಾಷ್ಟ್ರಪತಿ ಗೈಡ್ ಪುರಸ್ಕಾರದ ಪರೀಕ್ಷೆಗಳ ಜೊತೆ ಕೆಳಗಿನ ಪರೀಕ್ಷೆಗಳಲ್ಲೂ ಅರ್ಹತೆ ಪಡೆಯುವುದು.

1. ವಿಮಾನದ Picketing and Marshallis ಗೊತ್ತಿರಬೇಕು.
2. ಕನಿಷ್ಟ 3 ವಿಮಾನ ಮಾದರಿ ಹಾರಿಸುವ ಕವಾಯಿತಿಯಲ್ಲಿ ಭಾಗವಹಿಸುವುದು; ಗೈಡ್ ನಾಯಕಿಗೆ ವರದಿ ನೀಡುವುದು.
3. ಒಂದು ಇಂಧನ ಮಿಶ್ರಣವನ್ನು (fuel mixture) ತಯಾರಿಸಿ, ಒಂದು ವಾಯು ಮಾದರಿಯನ್ನು ಮಾಡಿ ಪ್ರಯೋಗಿಸಿ ಅದನ್ನು ಕಾರ್ಯಗತ ಗೊಳಿಸುವುದು.

ಗೈಡ್ – ಪ್ರಾವೀಣ್ಯತಾ ಪದಕಗಳು

1.	ಏಡ್ಸ್ ಜಾಗೃತಿ	– Aids awareness
2.	ರಂಗವಲ್ಲಿ	– Alpona / Rangoli
3.	ಚರ ಚಿಕಿತ್ಸೆ	– Ambulance
4.	ಬಿಲ್ಲುಗಾರ್ತಿ	– Archer
5.	ಚಿತ್ರಕಲಾವಿದೆ	– Artist
6.	ಕ್ರೀಡಾಪಟು	– Athlete
7.	ಮೇದಾರಗಿತ್ತಿ	– Basket Worker
8.	ಜೇನು ತಜ್ಞೆ	– Bee Master
9.	ಸೌಂದರ್ಯ ವರ್ಧಕಿ	- Beautician
10.	ಪಕ್ಷಿ ಪಾಲಕಿ	– Bird Warden

11.	ನಾವಿಕ	–	Boatman
12.	ರಟ್ಟುಕಟ್ಟುವವರು	–	Book Binder
13.	ಅಂಧರ ಲಿಪಿ/ಸ್ಪರ್ಶಲಿಪಿ	–	Braille
14.	ಶಿಬಿರವಾಸಿ	–	Camper
15.	ಶಿಬಿರ ಪಾಲಕ	–	Camp Warden
16.	ಕ್ಯಾನ್ಸರ್ ಜಾಗೃತಿ	–	Cancer Awareness
17.	ಶಿಶುದಾದಿ	–	Child Nurse
18.	ವೃಂದ ಗಾಯಕಿ	–	Choirist
19.	ನಾಗರಿಕ	–	Citizen
20.	ನಾಗರಿಕ ರಕ್ಷಣೆ	–	Civil Defence
21.	ಆರೋಹಿ/ಪರ್ವತಾರೋಹಿ	–	Climber
22.	ಸಮುದಾಯ ಗೀತಗಾಯನ	–	Community Singing
23.	ಸಮುದಾಯ ಕಾರ್ಯಕರ್ತೆ	–	Community Worker
24.	ಗಣಕ ಯಂತ್ರ ಅರಿವು	–	Computer awareness
25.	ಗಣಕ ಯಂತ್ರ ಕೌಶಲ	–	Computer Skill
26.	ಪಾಕ ಪ್ರವೀಣೆ/ಬಾಣಸಿ	–	Cook
27.	ಸೈಕಲ್ ಸವಾರಿಣಿ	–	Cyclist
28.	ಹೈನುಗಾರ್ತಿ	–	Dairy Maid
29.	ನೃತ್ಯಗಾರ್ತಿ	–	Dancer
30.	ಚರ್ಚಾಪಟು	–	Debator
31.	ವಿಕೋಪ ನಿರ್ವಹಣೆ	-	Disaster Management
32.	ಗೃಹ ಸೇವೆ	–	Domestic Service
33.	ಮಾದಕದ್ರವ್ಯ ಜಾಗೃತಿ	–	Drug awareness

34. ಜೀವಪರಿಸರ ಶಾಸ್ತ್ರಜ್ಞೆ – Ecologist
35. ವಿದ್ಯುನ್ ಮಾನ – Electronics
36. ಕಸೂತಿ ಕುಶಲಿ – Embroidress
37. ಮನೋರಂಜಕಿ – Entertainer
38. ಸಮಾರಂಭ ನಿರ್ವಾಹಕಿ - Event Manager
39. ಬೇಸಾಯಗಾರ್ತಿ – Farmer
40. ಅಗ್ನಿಶಾಮಕಿ – Fire woman
41. ಪುಷ್ಪ ತಜ್ಞೆ – Florist
42. ಜಾನಪದ ನೃತ್ಯಗಾರ್ತಿ – Folk dancer
43. ನನ್ನ ಮುಕ್ತ ಇರುವಿಕೆ - Free being me
44. ಪ್ರಾಣಿ ಮಿತ್ರಳು – Friend to animal
45. ಕ್ರೀಡಾ ನಾಯಕಿ – Games leader
46. ತೋಟಗಾರ್ತಿ – Gardner
47. ಒಳ್ಳೆಯ ನೆರೆ – Good neighbour
48. ಅಂಗಸಾಧಕಿ – Gymnast
49. ಗೃಹ ಕುಶಲಿ – Handy Woman
50. ಆರೋಗ್ಯ – Health
51. ಸಸ್ಯತಜ್ಞೆ/ಗಿಡಮೂಲಿಕೆ ತಜ್ಞೆ – Herbalist
52. ಪರಂಪರೆ – Heritage
53. ಹೊರಸಂಚಾರ – Hiker
54. ಗೃಹಶಿಲ್ಪಿ – Home Maker
55. ಸತ್ಕಾರಕುಶಲಿ – Hostess
56. ದುಭಾಷಿ / ಭಾಷಾಂತರಿ – Interpreter

57. ಕಿವುಡರಿಗೆ ದುಭಾಷಿ – Interpreter to deaf
58. ಪತ್ರಿಕೋದ್ಯಮಿ – Journalist
59. ಹೆಣಿಗೆ ಕುಶಲಿ – Knitter
60. ಲೇಸ್ ಕುಶಲಿ – Lace maker
61. ಮಡಿವಾಳಗಿತ್ತಿ – Laundress
62. ಚರ್ಮ ಕುಶಲಿ – Leather worker
63. ಕುಷ್ಟ ನಿಯಂತ್ರಣ – Leprocy Control
64. ಸಾಕ್ಷರತೆ – Literacy
65. ಪವನಶಾಸ್ತ್ರಜ್ಞೆ – Meteorologist
66. ಸಂಗೀತಗಾರ್ತಿ – Musician
67. ಸಂಗೀತ ಪ್ರೇಮಿ – Music Lover
68. ನಿಸರ್ಗತಜ್ಞೆ – Naturalist
69. ಪೌಷ್ಠಿಕ ಆಹಾರ ಶಿಕ್ಷಕಿ – Nutrition Educator
70. ಮಾರ್ಗಾನ್ವೇಷಕಿ – Path finder
71. ಛಾಯಾಗ್ರಾಹಕಿ – Photographer
72. ಅಗ್ರಗಾಮಿನಿ – Pioneer
73. ಜನಸಂಖ್ಯಾ ಶಿಕ್ಷಕಿ – Population Educator
74. ಕುಕ್ಕುಟ ಶಿಕ್ಷಕಿ – Poultry Farmer
75. ಸಾರ್ವಜನಿಕ ಆರೋಗ್ಯ – Public Health
76. ವಾಚಕಿ – Reader
77. ಜೀವರಕ್ಷರು – Rescuer
78. ಗ್ರಾಮೀಣ ಕಾರ್ಯಕರ್ತೆ – Rural worker
79. ಸುರಕ್ಷತಾ ಅರಿವು – Safety Knowledge

80. ಮಾರಾಟಗಾರ್ತಿ – Sales woman
81. ನೈರ್ಮಲ್ಯ ಪ್ರವರ್ಧಕಿ – Sanitation promoter
82. ಪಂಡಿತೆ – Scholar
83. ಸಮುದ್ರ ಮೀನುಗಾರ್ತಿ - Sea Fisher Woman
84. ಕಾರ್ಯದರ್ಶಿ – Secretary
85. ಸ್ವರಕ್ಷಣೆ – Self defence
86. ದಾದಿ – Sick Nurse
87. ಸಂಕೇತಗಾರ್ತಿ – Signaller
88. ಗಾಯಕಿ – Singer
89. ಮಣ್ಣಿನ ಸಂರಕ್ಷಕಿ – Soil Conservation
90. ಸೌರಶಕ್ತಿ ಅರಿವು – Solar Energy awareness
91. ನಕ್ಷತ್ರ ವೀಕ್ಷಕರು – Star Gazer
92. ಈಜುಗಾರ್ತಿ – Swimmer
93. ಸಿಂಪಿಗಿತ್ತಿ – Tailor
94. ಜಾಡುಗಾಮಿ – Tracker
95. ಮಿತವ್ಯಯಿ – Thrifty
96. ಆಟಿಕೆ ತಯಾರಕಿ – Toy maker
97. ನೇಕಾರ್ತಿ – Weaver
98. ವಿಶ್ವಸಂರಕ್ಷಣೆ – World Conservation
99. ವಿಶ್ವಮಿತ್ರತ್ವ – World friendship
100. ಬರಹಗಾರ್ತಿ – Writer
101. ಯೋಗ – Yoga

(ಅ) ದೀಕ್ಷೆ ಪಡೆದ ನಂತರ ಪ್ರಾವೀಣ್ಯತಾ ಪದಕ ಕಾರ್ಯ ಪ್ರಾರಂಭಿಸ ಬಹುದು ಮತ್ತು ರಾಷ್ಟ್ರಪತಿ ಗೈಡ್ ಆದ ನಂತರವು, ಗೈಡ್ ವಂಯೋಮಿತಿ ಮುಗಿಯುವವರೆಗೂ ಪದಕಗಳನ್ನು ಪಡೆಯುತ್ತಿರಬಹುದು.

(ಆ) ಇವುಗಳ ಪರೀಕ್ಷೆಯ ಅವಶ್ಯಕತೆಗಳನ್ನು ಅಧ್ಯಾಯ 2ರಲ್ಲಿ ಕೊಡಲಾಗಿದೆ.

(ಇ) ಸ್ಥಳೀಯ/ ಜಿಲ್ಲಾ ಸಂಸ್ಥೆಯು ನೇಮಕಮಾಡಿದ ಪದಕ ಸಮಿತಿಯು ನಿಯೋಜಿಸುವ ಸ್ವತಂತ್ರ ಪರೀಕ್ಷಕರು ಪದಕ ಪರೀಕ್ಷೆ ನೀಡುವ ಪ್ರಮಾಣಪತ್ರದ ಆಧಾರದ ಮೇಲೆ, ಪ್ರಾವೀಣ್ಯತಾ ಪದಕವನ್ನು ನೀಡಲಾಗುವುದು.

(ಈ) ಎಲ್ಲಾ ಪ್ರಾವೀಣ್ಯತಾ ಪದಕವನ್ನು ಗಳಿಕೆಯ ಕ್ರಮದಲ್ಲಿ (ಏರಿಕೆ ಕ್ರಮದಲ್ಲಿ) ಡವಾಲಿಯ ಮೇಲೆ ಹೊಲಿದು ಧರಿಸುವುದು. ಚರಚಿಕಿತ್ಸೆ ಪದಕವನ್ನು ಮಾತ್ರ ಎರಡೂ ಭುಜದ ಮೇಲೆ ಧರಿಸುವುದು.

(ಉ) ಚರಚಿಕಿತ್ಸೆ, ಶಿಶುದಾದಿ, ದಾದಿ ಹೊರತುಪಡಿಸಿ ಗೈಡ್‌ಗಳ ಎಲ್ಲಾ ಪ್ರಾವೀಣ್ಯತಾ ಪದಕಗಳು ಬಿಳಿಯ ಹಿನ್ನೆಲೆಯ ಮೇಲೆ ಹಸಿರು ಸಂಕೇತ ಹೊಂದಿರುತ್ತದೆ.

ಗೈಡ್‌ಗಳ ಹೊರಸಂಚಾರ–ಚಾರಣ ಶಿಬಿರವಾಸ - Hike-Trek-Camp for Guides :

1. ಗೈಡ್ಸ್‌ಗಳಿಗೆ ಆಗಾಗ್ಗೆ ಹೊರಸಂಚಾರ, ಚಾರಣ ಮತ್ತು ಶಿಬಿರವಾಸ ಏರ್ಪಡಿಸಿ ಭಾಗವಹಿಸಲು ಪ್ರೋತ್ಸಾಹಿಸುವುದು.

2. ಹೊರಸಂಚಾರ ಮತ್ತು ಚಾರಣವನ್ನು ಜಿಲ್ಲೆಯಲ್ಲೇ ಕೈಗೊಳ್ಳ ಬಯಸಿದ್ದಲ್ಲಿ ಗೈಡ್ ನಾಯಕಿಯ ಮೂಲಕ ಜಿಲ್ಲಾ ಗೈಡ್ ಆಯುಕ್ತರ ಅನುಮತಿ ಪಡೆಯಬೇಕು.

3. ಜಿಲ್ಲೆಯ ಹೊರಗೆ ಹೊರಸಂಚಾರ ಅಥವಾ ಚಾರಣ ಮಾಡಲು ಪೋಷಕರ ಅನುಮತಿ ಜೊತೆಗೆ ತಮ್ಮ ಜಿಲ್ಲಾ ಗೈಡ್ ಆಯುಕ್ತರ ಮೂಲಕ ರಾಜ್ಯ ಗೈಡ್ ಆಯುಕ್ತರಿಂದ ಅನುಮತಿ ಪಡೆಯಬೇಕು. ಒಂದು ವೇಳೆ ರಾಜ್ಯಗೈಡ್ ಆಯುಕ್ತರ ವಿಳಾಸ ತಿಳಿಯದಿದ್ದಲ್ಲಿ ಜಿಲ್ಲಾ ಗೈಡ್ ಆಯುಕ್ತರ ಮೂಲಕ ಅನುಮತಿ ಕೋರಿಕೆ ಪತ್ರವನ್ನು ರಾಜ್ಯ ಗೈಡ್ ಆಯುಕ್ತರಿಗೆ ಕಳುಹಿಸುವಂತೆ ಕೋರಿಕೊಳ್ಳುವುದು.

4. ಗೈಡ್ಸ್‌ಗಳು ಹೊರಸಂಚಾರ ಅಥವಾ ಚಾರಣಕ್ಕೆ ಹೋಗುವ ಸಂಬಂಧಿತ ಗೈಡ್ ನಾಯಕಿ ತಮ್ಮ ಗೈಡ್‌ಗಳ ಉಡುಪಿನ ಸಮರ್ಪಕ ಸಿದ್ಧತೆಯ ಖಚಿತಪಡಿಸಿಕೊಳ್ಳಬೇಕು.

   ಜಿಲ್ಲಾ ಸಹಾಯಕ ಸಂಘಟಕರು ದಳ ನಡೆಸುತ್ತಿರುವ ಗೈಡ್ ಶಿಕ್ಷಕಿಗೆ ಅನುಮತಿ ಪತ್ರ ನೀಡುವುದು. ಇವರು ಅಷ್ಟಕ ನಾಯಕರಿಗೆ ಅನುಮತಿ ಪತ್ರ ನೀಡುವುದು.

5. ಪೋಷಕರ, ಗೈಡ್ ನಾಯಕಿಯ ಹಾಗೂ ಜಿಲ್ಲಾ ಗೈಡ್ ಆಯುಕ್ತರ ಲಿಖಿತ ಅನುಮತಿ ಪತ್ರವಿಲ್ಲದೆ ಗೈಡ್‌ಗಳು ಹೊರಸಂಚಾರ ಅಥವಾ ಚಾರಣ ಹೊರಡಬಾರದು.

6. ಜಿಲ್ಲಾ ಗೈಡ್ ಆಯುಕ್ತರ ಅನುಮತಿ ಪಡೆಯಲು ಸಾಕಷ್ಟು ಮುಂಚಿತವಾಗಿ ಗೊತ್ತುಪಡಿಸಿದ ನಮೂನೆಯಲ್ಲಿ ಕೋರಿಕೆ ಸಲ್ಲಿಸುವುದು. ಇದು ಅವರಿಗೆ ಅವಶ್ಯಕ ಲಿಖಿತ ಅನುಮತಿ ನೀಡಲು ಕಾಲಾವಕಾಶ ದೊರೆಯುತ್ತದೆ.

7. ಶಿಬಿರವಾಸ ಮಾಡಬಯಸುವ ಗೈಡ್, ಪೋಷಕರಿಂದ ಆರೋಗ್ಯ ದೃಢೀಕರಣ ಪತ್ರವನ್ನು ತರಬೇಕು.

8. ತರಬೇತಿ ಹೊಂದಿರುವ ಅರ್ಹಳಾದ ದಳ ನಾಯಕಿ ಅಥವಾ ಅಷ್ಟಕ ನಾಯಕಿಯರಿಲ್ಲದೆ ಗೈಡ್‌ಗಳಿಗೆ ಶಿಬಿರವಾಸ ಮಾಡಲು ಅನುಮತಿ ನೀಡಬಾರದು.

9. ಜಿಲ್ಲೆಯ ಹೊರಗೆ ಶಿಬಿರವಾಸ ಮಾಡಲು ಯೋಜಿಸಿದಾಗ ಜಿಲ್ಲಾ ಗೈಡ್ ಆಯುಕ್ತರಿಗೆ 14 ದಿನಗಳ ಮುನ್ನ ವಿಷಯುವನ್ನು ತಿಳಿಯಪಡಿಸಬೇಕು. ಇದರಿಂದಾಗಿ ಶಿಬಿರವಾಸ ಏರ್ಪಡಿಸಿದ ಮಾಹಿತಿಯನ್ನು ಸಕಾಲದಲ್ಲಿ ತಿಳಿದಿರುವ ಜಿಲ್ಲೆಯ ಗೈಡ್ ಆಯುಕ್ತರಿಗೆ ಅನುಕೂಲವಾಗುತ್ತದೆ.

10. ಸಮವಸ್ತ್ರ ಧರಿಸಿ ಹೊರರಾಜ್ಯದಲ್ಲಿ ಶಿಬಿರವಾಸ ಮಾಡಬಯಸುವವರು ರಾಜ್ಯಕಛೇರಿಯ ಅನುಮತಿ ಪಡೆಯಬೇಕು. ಈ ಅರ್ಜಿಯನ್ನು ಸಹಾಯಕ ರಾಜ್ಯ ಆಯುಕ್ತರು/ಜಿಲ್ಲಾ ಆಯುಕ್ತರು ಅಥವಾ ಜಿಲ್ಲಾ ಸಂಸ್ಥೆ/ಸ್ಥಳೀಯ ಸಂಸ್ಥೆ ಶಿಫಾರಸ್ಸು ಮಾಡಬೇಕು.

11. ಶಿಬಿರವಾಸಕ್ಕೆ ಹೊರಡುವ ಗೈಡ್ ಸಂಪೂರ್ಣವಾಗಿ ಸಮವಸ್ತ್ರಗಳು ಮತ್ತು ಶಿಬಿರ ಸಂಚಿಯಿಂದ (Kit) ಸಜ್ಜಾಗಿರಬೇಕು. ಜೊತೆಗೆ ಹಾಸಿಗೆ ಹೊದಿಕೆಗಳನ್ನು ತೆಗೆದುಕೊಳ್ಳಬೇಕು. ಈ ಸಿದ್ಧತೆಯು ಗೈಡ್ ನಾಯಕಿಗೆ ತೃಪ್ತಿನೀಡಬೇಕು.

———*———

ಅಧ್ಯಾಯ–2

ಗೈಡ್ಸ್‌ಗಳ ಪ್ರಾವೀಣ್ಯತಾ ಪದಕಗಳು

ಪ್ರಾವೀಣ್ಯತಾ ಪದಕ ಗಳಿಸಿದವರು ಅದರ ಬಗ್ಗೆ ಸಂಪೂರ್ಣ ಜ್ಞಾನವನ್ನು ಹೊಂದಿರಬೇಕು. ಇಲ್ಲದಿದ್ದರೆ ಸಂಬಂಧಪಟ್ಟ ಅಧಿಕಾರಿಗಳು ಪದಕವನ್ನು ಹಿಂದಕ್ಕೆ ಪಡೆಯಬಹುದು.

1. ಏಡ್ಸ್ ಜಾಗೃತಿ–Aids awareness :

1. HIV ಪ್ರಸಾರ ಮತ್ತು ಅದನ್ನು ತಡೆಗಟ್ಟುವ ವಿಧಾನವನ್ನು ತಿಳಿಯುವುದು: ಅರ್ಥಮಾಡಿ ಕೊಳ್ಳುವುದು.
2. ಈ ರೋಗದ ಸ್ವಾಭಾವಿಕ ಇತಿಹಾಸ ತಿಳಿಯುವುದು.
3. ಆರೋಗ್ಯಾಧಿಕಾರಿಗಳು ಈ ರೋಗ ಹರಡುವಿಕೆ ತಡೆಗಟ್ಟಲು ಕೈಗೊಂಡಿರುವ ಕ್ರಮಗಳನ್ನು ತಿಳಿಯುವುದು.
4. ಸಾರ್ವಜನಿಕರಲ್ಲಿ ಅರಿವು ಉಂಟುಮಾಡಲು ಯೋಜನೆ ಸಿದ್ಧಗೊಳಿಸುವುದು.
   - ಅ) ರೋಗ ಸಂಪರ್ಕದಿಂದ ಉಂಟಾಗುವ ಅಪಾಯಗಳನ್ನು ತಿಳಿಯುವುದು.
   - ಆ) HIV ರೋಗ ಪ್ರಸಾರದ ವಿಧಾನಗಳನ್ನು ತಿಳಿಯುವುದು.
   - ಇ) ಸೋಂಕು ಮತ್ತು ಏಡ್ಸ್ ಬಗ್ಗೆ ಇರುವ ದಂತಕಥೆಗಳನ್ನು ಮತ್ತು ತಪ್ಪು ಕಲ್ಪನೆಗಳನ್ನು ತೊಡೆದುಹಾಕುವುದು.

ಈ) ವೈಯಕ್ತಿಕ ಹಾಗೂ ಸಮುದಾಯದಲ್ಲಿ ರೋಗ ತಡೆಗಟ್ಟುವ ವಿಧಾನಗಳನ್ನು ತಿಳಿಯುವುದು.

2. ರಂಗವಲ್ಲಿ - Alpana :

1. ರಂಗವಲ್ಲಿ ಪುಡಿ, ಅಕ್ಕಿಹಿಟ್ಟು, ಸೀಮೆಸುಣ್ಣ, ಕೆಂಪು ಮಣ್ಣುಗಳಿಂದ ಮಣ್ಣಿನ ಮತ್ತು ಸಿಮೆಂಟ್ ನೆಲದ ಮೇಲೆ ಚಿತ್ತಾರ ಬಿಡಿಸಿ ಮನೆ ಅಲಂಕರಿಸುವುದು.
2. ಎರಡು ವಿಶೇಷ ಸಂದರ್ಭಗಳಲ್ಲಿ ಮನೆಯಲ್ಲಿ ರಂಗವಲ್ಲಿಯಿಂದ ಅಲಂಕರಿಸುವುದು.
3. ಎರಡು ರಂಗವಲ್ಲಿ ಔಚಿತ್ಯ ವಿವರಿಸಲು ಸಮರ್ಥರಾಗುವುದು.
4. ರಂಗವಲ್ಲಿ ಚಿತ್ರಗಳನ್ನು ಸಂಗ್ರಹಿಸಿ ಕೆಳಗಿನ ಯಾವುದಾದರೂ ಒಂದರ ಮೇಲೆ ಬಿಡಿಸಿ ಬಣ್ಣ ಹಾಕುವುದು.

ಅ) ಮರದ ಹಲಗೆ, ಕಂಬಗಳ ಮೇಲೆ ರಂಗವಲ್ಲಿ ಹಾಕುವುದು.

ಆ) ಮಣ್ಣಿನ ಮಡಿಕೆ ಮೇಲೆ ರಂಗವಲ್ಲಿ ಹಾಕುವುದು.

ಇ) ಕುಪ್ಪಸ ಅಥವಾ ಚೀಲದ ಮೇಲೆ ರಂಗೋಲಿ ಬಿಡಿಸಿ ಕಸೂತಿ ಹಾಕುವುದು.

3. ಚರಚಿಕಿತ್ಸೆ-Ambulance :

ಪದಕವು ನೀಲಿ ಹಿನ್ನೆಲೆಯಲ್ಲಿ ಹಸಿರು ವೃತ್ತ ಮತ್ತು ಕೆಂಪು ಕ್ರಾಸನ್ನು ಹೊಂದಿರುತ್ತದೆ. ಈ ಪದಕವನ್ನು ಎರಡು ಭುಜದ ಪದಕದ ಕೆಳಗೆ ಚರಚಿಕಿತ್ಸಾ ಪದಕ ಹೊಲಿಯಬೇಕು.

1. ದ್ವಿತೀಯ ಮತ್ತು ತೃತೀಯ ಸೋಪಾನದ ಪ್ರಥಮ ಚಿಕಿತ್ಸೆಯ ಪ್ರಶ್ನೆಗಳಿಗೆ ಉತ್ತರಿಸುವುದು.
2. ಸಣ್ಣ ಮತ್ತು ದೊಡ್ಡ ಪ್ರಮಾಣದ ರಕ್ತಸ್ರಾವಕ್ಕೆ ಪ್ರಥಮಚಿಕಿತ್ಸೆ ನೀಡುವುದು.
3. ಕಾಲಿನ ಮೂಳೆ ಮುರಿತ ಗುರುತಿಸುವುದು ಮತ್ತು ಅದಕ್ಕೆ ಕಟ್ಟು ಕಟ್ಟುವುದು.
4. ಹೆಮ್ಲಿಚ್ ಮ್ಯಾನ್ ವಿಧಾನದಿಂದ ಉಸಿರುಕಟ್ಟಿದ ಸ್ಥಿತಿಯಲ್ಲಿ ಪ್ರಥಮಚಿಕಿತ್ಸೆ ನೀಡುವುದನ್ನು ತಿಳಿದಿರುವುದು.
5. ಬಾಯಿಯಿಂದ ಬಾಯಿಗೆ ಉಸಿರು ನೀಡುವ ಕ್ರಮವನ್ನು ಪ್ರದರ್ಶಿಸುವುದು.
6. ದೊರೆಯುವ ವಸ್ತುಗಳಿಂದ ಡೋಲಿಯನ್ನು ಹೇಗೆ ಸಿದ್ಧಗೊಳಿಸಬಹುದೆಂಬುದನ್ನು ಪ್ರದರ್ಶಿಸಿ, ಗಾಯಕ್ಕೆ ಸುರುಳಿ ಪಟ್ಟಿಯನ್ನು ಕಟ್ಟುವುದನ್ನು ಪ್ರದರ್ಶಿಸುವುದು.
7. ತುರ್ತು ಸ್ಥಿತಿಯಲ್ಲಿ ಮೌಖಿಕವಾಗಿ ಬರವಣಿಗೆ ಮೂಲಕ ಮತ್ತು ದೂರವಾಣಿ ಮೂಲಕ ಸುದ್ದಿ ಕಳುಹಿಸುವ ವಿಧಾನವನ್ನು ಪ್ರದರ್ಶಿಸುವುದು.
8. ಗಾಯಗೊಂಡವರನ್ನು ಸಾಗಿಸುವ ಎರಡು ವಿಧಾನಗಳನ್ನು ಪ್ರದರ್ಶಿಸುವುದು. ಅ) ಒಬ್ಬ ಪ್ರಥಮ ಚಿಕಿತ್ಸಕರಿದ್ದಾಗ, ಆ) ಇಬ್ಬರು ಪ್ರಥಮ ಚಿಕಿತ್ಸಕರಿದ್ದಾಗ.

4. ಬಿಲ್ಲುಗಾರ್ತಿ- Archer :

1. ಬಿಲ್ಲು ಬಾಣ ತಯಾರಿಸುವುದು 45 ಮೀ. 1.20 ಮೀ ಕ್ರಮಿಸುವುದು 30 ಬಾಣಗಳಿಂದ 60 ಪಾಯಿಂಟ್ ಗುರಿ ಇಡುವುದು.

   ಅ) 1.20 ಮೀ. 30 ಬಾಣ 10 ಪಾಯಿಂಟ್ಸ್ 36.5 ಮೀ.ಗೆ ಗುರಿ ಇಡುವುದು.

2. ಬಿಲ್ಲು ವಿದ್ಯೆಯ ಇತಿಹಾಸ ತಿಳಿಯುವುದು ಪುರಾತನ ಮತ್ತು ವರ್ತಮಾನ ಕಾಲದ ಪ್ರಸಿದ್ಧ ಬಿಲ್ಲುಗಾರರ ಹೆಸರು ಮತ್ತು ಸಾಧನೆ ತಿಳಿಯುವುದು.

3. 3 ಗೈಡ್‌ಗಳಿಗೆ ಒಂದು ವಾರದಲ್ಲಿ ಅಥವಾ ಬೇಸಿಗೆ ಶಿಬಿರದಲ್ಲಿ ಬಿಲ್ವಿದ್ಯೆ ಕಲ್ಪಿಸುವುದು.

5. ಚಿತ್ರಕಲಾವಿದೆ-Artist :



1. ಕೆಳಗಿನವುಗಳಲ್ಲಿ ಯಾವುದಾದರೂ ಒಂದನ್ನು ಪರೀಕ್ಷೆಯಲ್ಲಿ ಚಿತ್ರಿಸಿ, ಮತ್ತೆರಡು ಚಿತ್ರಗಳನ್ನು ವಿಮರ್ಶೆಗಾಗಿ ಸಲ್ಲಿಸುವುದು.

   ಅ) ನೋಡಿದ ವಸ್ತುವನ್ನು ಸ್ಮರಣಶಕ್ತಿಯಿಂದ ಚಿತ್ರಿಸುವುದು.

   ಆ) ಕಾಣಿಸುವ ಕೆಲವು ವಸ್ತು, ದೃಶ್ಯ, ಸ್ಥಬ್ಧ ಮತ್ತು ಜೀವನ ಚಿತ್ರಗಳು (Scene, Life, Stills)

   ಇ) ಕಾಲ್ಪನಿಕ ಚಿತ್ರ ರಚಿಸುವುದು.

2. ಅಭ್ಯಾಸ ಮತ್ತು ಆಸಕ್ತಿಯನ್ನು ಕೆಳಗಿನ ಪ್ರಾವೀಣ್ಯತೆಯಲ್ಲಿ ಪ್ರದರ್ಶಿಸುವುದು.

ಅ) ಭಿತ್ತಿಪತ್ರ, ನೆಲಹಾಸುವಕಸೂತಿ, ಸಿವಿಕ್ ಫಲಕ ಲೋಹ ಕಲೆ, ಮರದ ಕೆತ್ತನೆ (ಯಾವುದಾದರೂ ಒಂದು)

ಆ) ಗೈಡ್ ಚಳುವಳಿಯ ಇತಿಹಾಸದಿಂದ ಒಂದು ದೃಶ್ಯವನ್ನು ಆಯ್ದು ಪೆನ್ಸಿಲ್ ಅಥವಾ ಕಪ್ಪುಬಣ್ಣದಿಂದ ಚಿತ್ರ ಬಿಡಿಸುವುದು.

ಇ) ತಟ್ಟೆಯ ಮೇಲೆ ಎನಾಮಲ್ ಬಣ್ಣದಿಂದ ಚಿತ್ರ ಬಿಡಿಸುವುದು.

ಈ) ಜೇಡಿ, ಪ್ಲಾಸ್ಟಿಕ್ ಅಥವಾ ಮೇಣದಿಂದ ಒಂದು ಸಾಹಸ ಕಾರ್ಯವನ್ನು ಸ್ಮರಣೆಗೆ ತರುವ ಮಾದರಿ ಮಾಡುವುದು.

ಉ) ಮನುಷ್ಯ ಅಥವಾ ಪ್ರಾಣಿಯ ಮಾದರಿ (ಸ್ವಂತಿಕೆ ಮತ್ತು ಪ್ರಯತ್ನವನ್ನು ಪರಿಗಣಿಸಲಾಗುವುದು) ಮಾಡುವುದು.

ಊ)ಭಿತ್ತಿಚಿತ್ರ ಅಥವಾ ಗ್ರಾಮದೃಶ್ಯ

6. ಕ್ರೀಡಾಪಟು - Althlete :

1. ಸರಿಯಾಧ ಭಂಗಿಯಲ್ಲಿ ನಿಲ್ಲುವುದು ನಡೆಯುವುದು ಮತ್ತು ಓಡುವುದು.

2. ಕೆಳಗಿನ ಯಾವುದಾದರೂ ಎರಡರಲ್ಲಿ ಪ್ರಾವೀಣ್ಯತೆ ಪ್ರದರ್ಶಿಸುವುದು ಮತ್ತು ನಿಯಮಗಳನ್ನು ತಿಳಿದಿರುವುದು : (ಪ್ರತಿ ಗುಂಪಿನಿಂದ ಒಂದನ್ನು ಆರಿಸಿ)

ಅ) ರೌಂಡರ್ಸ್, ಟೆನ್ನಿಸ್, ಕ್ರಿಕೇಟ್, ಬ್ಯಾಡ್ಮಿಂಟನ್, ಫುಟ್‌ಬಾಲ್ ಮತ್ತು ಗಾಲ್ಫ್.

ಆ) ಹಾಕಿ. Lacrosse ನೆಟ್‌ಬಾಲ್ ಅಥವಾ ಬ್ಯಾಸ್ಕೆಟ್ ಬಾಲ್, ಟಚ್ ಎಂಡ್ ಪಾಸ್

ಈಜುವುದು – 27.4 ಮೀಟರ್ ದೂರವನ್ನು 24 ಸೆಕೆಂಡ್‌ಗಳಲ್ಲಿ ಕ್ರಮಿಸುವುದು; ಎರಡು ಪೆಟ್ಟುಗಳನ್ನು ತಿಳಿದಿರುವುದು ಮತ್ತು ಜಿಗಿಯುವುದು. ಇದರ ಬದಲಾಗಿ ಅ) ಗುಂಪಿನಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಳ್ಳಬಹುದು.

3. ಕ್ರಿಕೆಟ್ ಚೆಂಡು ಅಥವಾ ರೌಂಡರ್ ಚಂಡನ್ನು 22.6 ಮೀ. ದೂರಕ್ಕೆ ಎಸೆಯುವುದು.

4. (Stalking) ಕಳ್ಳ ಹೆಜ್ಜೆ ಇಡುತ್ತಾ ಬಚ್ಚಿಟ್ಟುಕೊಳ್ಳುತ್ತಾ ನಿಧಾನವಾಗಿ ನಡೆಯುವ ಅಲೆದಾಡುವ ಆಟ ಆಡುವುದು.

5. 2.74 ಮೀ ಎತ್ತರಕ್ಕೆ ಬೊಂಬುಗಳ ಮೇಲೆ ಸರಿಯಾದ ಭಂಗಿಯಲ್ಲಿ ಹಾರುವುದು ಅಥವಾ 90.14 ಮೀ. ದೂರವನ್ನು 15 ಸೆಕೆಂಡುಗಳಲ್ಲಿ ಓಡುವುದು.

6. ಅ) ಹಗ್ಗ ಹಿಂದಕ್ಕೆ ಹಾಕುತ್ತಾ ಸತತವಾಗಿ ಒಂದು ನಿಮಿಷ ಜಿಗಿದಾಡುವುದು.

ಆ) ಒಂದು ಗಂಟೆಯಲ್ಲಿ 5 ಕಿ.ಮೀ. ನಡೆಯುವುದು

ಅಥವಾ

1 ಕಿ.ಮೀ. ದಾರಿಗುರುತನ್ನು ಗೊತ್ತುಪಡಿಸಿದ ಸಮಯದಲ್ಲಿ ಕ್ರಮಿಸುವುದು (ಮೇಲೆ ಕೊಡದೆ ಇರುವ ಆಟ). 16 ವರ್ಷ ತುಂಬಿರುವ ಗೈಡ್ಸ್‌ಗಳಿಗೆ ಈ ಪರೀಕ್ಷೆ ವ್ಯವಸ್ಥೆ ಮಾಡಬಹುದು.

ಎಸೆತದ ದೂರ – 74.67 ಮೀ.
ಎತ್ತರ – 3 ಮೀ.

ಇ) ಆಯ್ಕೆ ಮಾಡಿದವರು 6 ಹೆಚ್ಚು ಹೆಜ್ಜೆಗಳನ್ನು ತೋರಿಸುವುದು

90 ನಿಮಿಷಗಳಲ್ಲಿ 6.5 ಕಿ.ಮೀ. ನಡೆದು ತೋರಿಸುವುದು.

7. ಮೇದಾರಗಿತ್ತಿ - Basket Worker :

1) ಕೆಳಗಿನವುಗಳಲ್ಲಿ ಯಾವುದಾದರೂ ಎರಡನ್ನು ತಯಾರಿಸುವುದು.

ಅ) ಮಾರುಕಟ್ಟೆ ಬುಟ್ಟಿ (15ಸೆಂ.ಮೀ. ವ್ಯಾಸ).

ಆ) ಚಾಪೆ (15 ಚದರ ಸೆಂ.ಮೀ.).

ಇ) ಕೆಲಸದ ಬುಟ್ಟಿ (ತಳ 15 ಸೆಂ.ಮೀ.ಗಿಂತ ಕಡಿಮೆ ಇರಬಾರದು).

ಈ) ಕಸದ ಬುಟ್ಟಿ.

ಪ್ರತಿಯೊಂದನ್ನೂ ಸ್ವತಃ ಮಾಡಬೇಕು ಬೆತ್ತ. ಒಣಹುಲ್ಲು, ತಾಳೆಗರಿ, ತೆಂಗಿನಗರಿ, ಪ್ಲಾಸ್ಟಿಕ್ ಬೆತ್ತಗಳನ್ನು ಉಪಯೋಗಿಸಿ ಮಾಡಬಹುದು.

2) ಹೆಣೆಯಲು ಉಪಯೋಗಿಸುವ ಕಚ್ಚಾ ಪದಾರ್ಥಗಳ ಬಗ್ಗೆ ಸಾಮಾನ್ಯ ಜ್ಞಾನ ಪಡೆದಿರುವುದು. ಇದನ್ನು ಹೇಗೆ ಪಡೆಯವುದು ಹೆಣೆಯಲು ಪ್ರಾರಂಭಿಸುವ ಮುನ್ನ ಮಾಡಿಕೊಳ್ಳುವ ಸಿದ್ಧತೆ, ಇವುಗಳ ಬಗೆಗೆ ತಿಳಿದಿರುವುದು.

8. ಜೇನು ತಜ್ಞೆ - Bee Master :

1. ಜೇನುಗಳನ್ನು ಕೂಡಿಸುವ, ವಿಭಾಗಿಸುವ ಮತ್ತು ಒಟ್ಟುಗೂಡಿಸಿ ಕೃತಕ ಆಹಾರ ನೀಡುವುದನ್ನು ಅವುಗಳನ್ನು ನಿರ್ವಹಿಸುವುದನ್ನು ಮಾಡಿ ಅನುಭವ ಪಡೆಯುವುದು.

2. ಆರು ತಿಂಗಳ ಕಾಲ ಜೇನು ಸಾಕುವುದು. ಅದರಿಂದ 1.35 ಕಿ.ಲೀ. ಜೇನುತುಪ್ಪವನ್ನು ಸಂಗ್ರಹಿಸಿ.

3. ಜೇನುಗೂಡಿಗೆ ಪೆಟ್ಟಿಗೆ ತಯಾರಿಸುವುದು.

4. 5ರಿಂದ 6 ಗ್ರಾಮೀಣ ಅಥವಾ ಕೊಳಚೆ ಪ್ರದೇಶ ಯುವಕರನ್ನು ಜೇನು ಸಾಕಾಣಿಕೆಯಲ್ಲಿ ತೊಡಗಿಸಿಕೊಂಡು ಅವರು ತಮ್ಮದೇ ಆದ ಜೇನು ಸಾಕುವಂತೆ ಪ್ರೋತ್ಸಾಹಿಸಿ.

5. ವ್ಯವಸಾಯ ಇಲಾಖೆಯವರ ಸಂಪರ್ಕ ಹೊಂದಿದ್ದು ಮುಂದಿನ ಮಾರ್ಗದರ್ಶನ ಪಡೆಯಿರಿ.

9. ಸೌಂದರ್ಯ ವರ್ಧಕಿ- Beautician

1. ಸೌಂದರ್ಯ ವರ್ಧಕಿಯ ವೃತ್ತಿ ಜವಾಬ್ದಾರಿಯನ್ನು ತಿಳಿದಿರಬೇಕು.

2. ಹತ್ತಿರದ ಸೌಂದರ್ಯ ವರ್ಧಕ ಪಾರ್ಲರ್‌ಗೆ ಭೇಟಿ ನೀಡಿ ಅಂಗವರ್ಧ, ಮುಖ ಶೃಂಗಾರ ಮುಂತಾದ ಚಿಕಿತ್ಸೆಗಳನ್ನು ತಿಳಿಯಿರಿ.

3. ಒಣ ಚರ್ಮಕ್ಕೆ ಬೇಕಾದ ತೇವಕ (ಮಾಯಿಶ್ಚರೈಸರ್), ವಿವಿಧ ರೀತಿಯ ಚರ್ಮಗಳಿಗೆ ಸರಿ ಹೊಂದುವ ಸಾಬೂನುಗಳು ಮತ್ತು ವಿವಿಧ ರೀತಿಯ ಕೂದಲುಗಳಿಗೆ ಸರಿ ಹೊಂದುವ ಷಾಂಪುಗಳ ಬಗ್ಗೆ ತಿಳಿದಿರಬೇಕು.

4. ಒಂದು ಸಾಂಸ್ಕೃತಿಕ ಸಮಾರಂಭಕ್ಕೆ ಒಬ್ಬ ಗೈಡ್ ಅಥವಾ ಬುಲ್‌ಬುಲ್ಗೆ ಮುಖಾಲಂಕಾರ ಮಾಡಿ ಉಡುಗೆಯನ್ನು ತೊಡಿಸುವ ಸಾಮರ್ಥ್ಯ ಹೊಂದಿರಬೇಕು.

10. ಪಕ್ಷಿ ಪಾಲಕಿ - Birds Warden :

1. ತನ್ನ ಜಿಲ್ಲೆಯಲ್ಲಿನ ಪಕ್ಷಿಗಳ ಜೀವನದ ಬಗ್ಗೆ ತಿಳಿಯುವುದು. ಅವುಗಳಿಗೆ ಒದಗುವ ಆಪತ್ತಿನ ಬಗ್ಗೆ ತಿಳಿಯುವುದು (ಮೊಟ್ಟೆ ಸುರಕ್ಷತೆ ಸೇರಿದಂತೆ), ಅವುಗಳ ಉಳಿಯುವಿಕೆಗೆ ಧಕ್ಕೆ ತರುವ ಸಾಮಾಜಿಕ ಪದ್ಧತಿ, ಮೂಢನಂಬಿಕೆ ಬಗ್ಗೆ ತಿಳಿಯುವುದು. ಅವುಗಳ ಸಂರಕ್ಷಣೆಯ ಕಾನೂನಿನ ಬಗ್ಗೆ ತಿಳಿದು, ಅವುಗಳನ್ನು ರಕ್ಷಿಸಲು ಪ್ರಾತ್ಯಕ್ಷಿಕ ಕ್ರಮಗಳನ್ನು ಅನುಸರಿಸುವುದು.

2. ವಿವಿಧ ಪ್ರಭೇದದ ಪಕ್ಷಿಗಳಿಗೆ ಮೂರು ರೀತಿಯ ಪೆಟ್ಟಿಗೆ ಗೂಡನ್ನು ಮಾಡುವುದು ಮತ್ತು ಅವುಗಳನ್ನು ಉತ್ತಮವಾಗಿ ಬಳಸುವುದು.

3. ಆಹಾರದ ಗೂಡು, ಆಹಾರದ ಅಟ್ಟ, ಆಹಾರದ ಕಡ್ಡಿಗಳನ್ನು ಸಿದ್ಧಗೊಳಿಸಿ ತಮ್ಮಲ್ಲಿ ಬರುವ ಪಕ್ಷಿಗಳಿಗೆ 3 ತಿಂಗಳು ಆಹಾರ ಕೊಡುವುದು.

4. ನವಿಲು ಮತ್ತು ಕಾಣಸಿಗುವ 7 ಪಕ್ಷಿಗಳ ಕೂಗು, ಆಕಾರ, ಗಾತ್ರ, ಕುರಿತು ಟಿಪ್ಪಣಿ ಬರೆಯುವುದು.

5. ರಾಷ್ಟ್ರೀಯ ಪಕ್ಷಿ ಹೊರತುಪಡಿಸಿ ಪಕ್ಷಿಯ ಹೆಸರು, ವಾಸಸ್ಥಳ ಮೊದಲು ನೋಡಿದ ಅಥವಾ ಕೂಗು ಕೇಳಿದ ದಿನಾಂಕ, ಗೂಡು ಸಿಕ್ಕಿದ ದಿನಾಂಕ ಅದು ವಾಸಿಸುವ ಸ್ಥಳ, ನೆಲದಿಂದ ವಾಸಸ್ಥಳದ ಎತ್ತರ, ಮೊಟ್ಟೆ ಅಥವಾ ಮರಿಗಳ ಸಂಖ್ಯೆ, ಗೂಡು ಬಿಟ್ಟ ದಿನಾಂಕ ಇತ್ಯಾದಿ ವೀಕ್ಷಿಸಿದ ಇತರ ವಿಷಯಗಳ ಬಗ್ಗೆ ದಿನಚರಿ ಬರೆದಿಡುವುದು.

11. ನಾವಿಕ - Boatman:

1. ಒಬ್ಬರೇ ದೋಣಿಯನ್ನು ನಡೆಸಲು ಸಮರ್ಥರಾಗುವುದು.
2. ಎಂಟು ಗಂಟುಗಳನ್ನು ಕಣ್ಣು ಮುಚ್ಚಿ ಹಾಕುವುದನ್ನು ಕಲಿಯುವುದು ಮತ್ತು ಒಂದು ಟರ್ಕ್ಸ್‌ನ ಬುರುಡೆ ಸ್ವತಃ ಮಾಡಿ ತರುವುದು
3. ಕೆಳಗಿನ ಯಾವುದಾದರೂ ಒಂದನ್ನು ಮಾಡಿ :

   ಅ) ಬೇರೆಯವರನ್ನು ಕೂರಿಸಿಕೊಂಡು ದೋಣಿ ನಡೆಸುವುದು.

   ಆ) ಸ್ತಂಭ ಸಹಿತ ಪಟ ಸಿದ್ಧಗೊಳಿಸುವುದು.

   ಇ) ದೋಣಿಯನ್ನು ಒಬ್ಬರೇ ನಿರ್ವಹಿಸುವುದು.
4. ದೋಣಿಯನ್ನು ತಿರುಗಿಸುವುದು, ದಡಕ್ಕೆ ತರುವುದು, ವೇಗ ಹೆಚ್ಚಿಸುವುದನ್ನು ಸಮರ್ಥವಾಗಿ ಮಾಡುವುದು.
5. 45 ಮೀ. ಈಜುವುದು
6. ಸೂರ್ಯ ಮತ್ತು ನಕ್ಷತ್ರಗಳ ಸಹಾಯದಿಂದ ದಿಕ್ಕನ್ನು ಗುರುತಿಸುವುದು ಮತ್ತು ಈಜುವುದು.
7. ದಿಕ್ಸೂಚಿಯನ್ನು ಬಳಸುವುದು.
8. ದೋಣಿ ನಡೆಸುವುದಕ್ಕೆ ಅಗತ್ಯವಾದ ತಾಂತ್ರಿಕ ಪದಗಳನ್ನು ತಿಳಿಯಿರಿ. ವಿವಿಧ ಪಟ ಮತ್ತು ಹೊಸ ಅಂತಾರಾಷ್ಟ್ರೀಯ ಸಂಕೇತವನ್ನು ತಿಳಿದಿರಬೇಕು.

12. ರಟ್ಟುಕಟ್ಟುವವರು - Book Binder :

ಪುಸ್ತಕಕ್ಕೆ ರಟ್ಟುಕಟ್ಟಲು ಕೆಳಗಿನ ಕ್ರಮವನ್ನು ಅನುಸರಿಸುವುದು.

1. ಹೊಲಿಯಲು ಹಾಳೆಗಳ ಚಿಕ್ಕ ಚಿಕ್ಕ ಕಟ್ಟು ಮಾಡಿಕೊಂಡು ಪಟ್ಟಿಯ ಮೇಲಿಟ್ಟು ಹೊಲಿಯುವುದು
2. ಕಟ್ಟುಗಳನ್ನು ಜೋಡಿಸಿ ಹೊಲಿದುಕೊಳ್ಳುವುದು
3. ರಟ್ಟನ್ನು ಕತ್ತರಿಸಿ ಹಾಳೆ ಅಥವಾ ಬಟ್ಟೆಗೆ ಅಂಟಿಸುವುದು. ಹಾಳೆಗಳ ಕಟ್ಟಿನ ಮೇಲೆ ಕೆಳಗೆ ರಟ್ಟು ಇಟ್ಟು ಕಟ್ಟಿನ ಮೇಲಿನ ಮತ್ತು ಕೆಳಗಿನ ಹಾಳೆಯನ್ನು ಎರಡೂ ರಟ್ಟಿಗೂ ಅಂಟಿಸುವುದು. ಹಿಂದೆ ಪಟ್ಟಿ ಅಂಟಿಸುವುದು; ಭಾರದಡಿ ಇಡುವುದು.

13. ಅಂಧರಲಿಪಿ /ಸ್ಪರ್ಶಲಿಪಿ - Braille :

3 ಪುಟದಷ್ಟು ಕುರುಡರ ಲಿಪಿಯಲ್ಲಿನ ವಿಷಯವನ್ನು 10ಕ್ಕಿಂತ ಹೆಚ್ಚು ತಪ್ಪಾಗದಂತೆ ಅಕ್ಷರ ಲಿಪಿಗೆ ಅಥವಾ ಸ್ಪರ್ಶದ ಮೂಲಕ ಓದುವುದು.

14. ಶಿಬಿರವಾಸಿ - Camper :

1. ವಿವಿಧ ಸಂದರ್ಭಗಳಲ್ಲಿ ಶಿಬಿರದ ಗುಡಾರದಲ್ಲಿ ಮೂರು ರಾತ್ರಿಗಳು ನಿದ್ರಿಸುವುದು.
2. ಒಂದು ವಾರ ಶಿಬಿರವಾಸಕ್ಕೆ ಮತ್ತು ವಾರಾಂತ್ಯ ಹೊರ ಸಂಚಾರಕ್ಕೆ ಅವಶ್ಯಕವಾದ ವೈಯಕ್ತಿಕ ಸಾಮಾನಿನ ಸಂಚಿಯ ಬಗ್ಗೆ ತಿಳಿಯುವುದು.

3. ಒಂದು ಅಷ್ಟಕಕ್ಕೆ ಒಂದು ವಾರಕ್ಕೆ ಆಗುವಷ್ಟು ಪಾತ್ರೆಗಳು ಮತ್ತು ಸಾಮಾನುಗಳ ಕನಿಷ್ಟ ಅವಶ್ಯಕತೆಯನ್ನು ತಿಳಿಯುವುದು.

4. ಒಂದು ಅಷ್ಟಕಕ್ಕೆ ಅವಶ್ಯಕವಾದ ಗುಡಾರವನ್ನು ಬಿಚ್ಚುವುದು, ಹಾಕುವುದು ಮತ್ತು ಕಟ್ಟಿ ಇಡುವ ಕಾರ್ಯವನ್ನು ಪ್ರದರ್ಶಿಸುವುದು.

5. ಒಂದು ಅಷ್ಟಕಕ್ಕೆ ಶಿಬಿರದ ಕರಡು ಯೋಜನೆಯನ್ನು ಹೇಗೆ ತಯಾರಿಸಬೇಕೆಂಬುದನ್ನು ವಿವರಿಸುವುದು ಮತ್ತು ನಿವೇಶನವನ್ನು (ಜಾಗ) ಹೇಗೆ ಆಯ್ಕೆ ಮಾಡಬೇಕೆಂಬುದನ್ನು ತಿಳಿಯುವುದು.

6. ಕೊಡಲಿಯನ್ನು ಉಪಯೋಗಿಸುವ ಮತ್ತು ಸಂರಕ್ಷಿಸುವ ವಿಧಾನವನ್ನು ತಿಳಿಯುವುದು.

7. ಆಹಾರ ಸಂಗ್ರಹಣೆ, ತ್ಯಾಜ್ಯವಸ್ತು, ಸಾಗಾಣಿಕೆ, ಶಿಬಿರದಲ್ಲಿ ಅಡಿಗೆ ನೀರಿನ ಶುದ್ಧೀಕರಣ ಮಾಡುವ ಸರಿಯಾದ ವಿಧಾನಗಳನ್ನು ತಿಳಿಯುವುದು.

15. ಶಿಬಿರಪಾಲಕಿ - Camp Warden :

1. 4 ಸಂದರ್ಭಗಳಲ್ಲಿ 10 ರಾತ್ರಿ ಗುಡಾರದಲ್ಲಿ ತಂಗುವುದು

2. ಪೂರ್ಣಾವಧಿ ಉಸ್ತುವಾರಿ ಅಧಿಕಾರಿಯಾಗಿ (Quarter Master) ಗೈಡ್‌ಗಳ ಬೇಸಿಗೆ ಶಿಬಿರದಲ್ಲಿ ಸಹಾಯಮಾಡುವುದು.

3. ಖಾಯಂ ಶಿಬಿರ ಪಾಲಕರಿಗೆ ಸಹಾಯಕರಾಗಿ 3 ದಿನ ಕಾರ್ಯ ನಿರ್ವಹಿಸುವುದು.

4. ಗುಡಾರ ಕೌಶಲವನ್ನು ಮತ್ತು ಶಿಬಿರ ಹಾಗೂ ತರಬೇತಿ ಸಲಕರಣೆಗಳನ್ನು ಸುರಕ್ಷಿತವಾಗಿಡುವುದನ್ನು ತಿಳಿದಿರುವುದು.

5. ಶಿಬಿರ ಗ್ರಂಥಾಲಯದ ನಿರ್ವಹಣೆಯನ್ನು ತಿಳಿಯವುದು.

6. ಶಿಬಿರದಲ್ಲಿ ಒದಗಬಹುದಾದ ಸಂದರ್ಭಗಳನ್ನು ತಿಳಿಯುವುದು.

7. ಪ್ರಥಮ ಚಿಕಿತ್ಸೆಯ ಜ್ಞಾನವನ್ನು ಸಾಕಷ್ಟು ಪಡೆದಿರುವುದು ಮತ್ತು ತುರ್ತುಸ್ಥಿತಿಯಲ್ಲಿ ಸಹಾಯ ಪಡೆಯುವ ರೀತಿಯನ್ನು ತಿಳಿಯುವುದು.

8. ಅಡಿಗೆ ಪದಾರ್ಥಗಳ ಅಳತೆಯ ಅಂದಾಜು, ಕೊಳ್ಳುವುದು, ವಿತರಿಸುವುದು ಮತ್ತು ಮೇಲ್ವಿಚಾರಣೆ ಮಾಡುವುದು ಹಾಗೂ ಉಟೋಪಚಾರ ವಿತರಣೆಯ ಮೇಲ್ವಿಚಾರಣೆ ಮಾಡುವುದನ್ನು ತಿಳಿದಿರುವುದು.

16. ಕ್ಯಾನ್ಸರ್ ಜಾಗೃತಿ - Cancer Awareness :

1. ಕ್ಯಾನ್ಸರ್‌ಕಾರಕಗಳನ್ನು ನಿತ್ಯ ಜೀವನದಲ್ಲಿ ಗುರುತಿಸುವುದು.

2. ಕ್ಯಾನ್ಸರ್ ರೋಗಿಗಳ ಚಿಕಿತ್ಸೆ ಮತ್ತು ಅವುಗಳ ಕಾರಕಗಳನ್ನು ತೆಗೆಯಲಾಗದೆ ರೋಗದ ಅಪಾಯವನ್ನು ಕಡಿಮೆ ಮಾಡುವುದು; ಚಿಕಿತ್ಸೆಯ ವಿಧಾನ ತಿಳಿಯುವುದು.

3. ಕೆಳಗಿನವುಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ಯೋಜನೆ ತಯಾರಿಸುವುದು.

   (ಅ) ಕ್ಯಾನ್ಸರ್‌ನ 7 ಚಿಹ್ನೆ ಮತ್ತು ಲಕ್ಷಣಗಳನ್ನು ತಿಳಿಯುವುದು

   (ಆ) ಕ್ಯಾನ್ಸರನ್ನು ಪ್ರಾರಂಭದಲ್ಲೇ ಗುರುತಿಸಿದರೆ ಗುಣಪಡಿಸಬಹುದು.

(ಇ) ಕ್ಯಾನ್ಸರ್ ಉಂಟುಮಾಡುವ ಹಾನಿಕಾರಕ ಅಭ್ಯಾಸಗಳನ್ನು ತ್ಯಜಿಸುವುದು.

(ಈ) ಕ್ಯಾನ್ಸರ್‌ಗೆ ಸಂಬಂಧಿಸಿದ ದಂತ ಕಥೆಗಳನ್ನು ಗಮನಿಸುವುದು.

16. ಶಿಶುದಾದಿ - Child Nurse :

ಪದಕವು ನೀಲಿ ಹಿನ್ನೆಲೆಯ ಮೇಲೆ ಹಸಿರು ವೃತ್ತದಲ್ಲಿ ಹಸಿರು ಶಿಲುಬೆಯನ್ನು ಹೊಂದಿರುತ್ತದೆ. ಶಿಶು ಎಂದರೆ ಹುಟ್ಟಿನಿಂದ 5 ವರ್ಷದ ವರೆಗಿನ ಮಗು.

1. ಈ ವಯಸ್ಸಿನಲ್ಲಿ ಮಕ್ಕಳು ಹೇಗಿರುತ್ತಾರೆಂಬುದನ್ನು ಗೈಡಳು ತಿಳಿದಿರಬೇಕು.

   a) ಅವಳ ಜಿಲ್ಲೆಯ ಎಲ್ಲಾ ಋತುಗಳಲ್ಲೂ ಹಗಲೂ ರಾತ್ರಿಯಲ್ಲಿ ಮಕ್ಕಳಿಗೆ ಹಾಕುವ ಉಡುಪಿನ ಬಗ್ಗೆ ತಿಳಿಯುವುದು.

   b) ಮಕ್ಕಳ ಆಹಾರ ತಯಾರಿಸುವುದು; ಉಣಿಸುವುದು.

   c) ದೇಹ ಮತ್ತು ಬಟ್ಟೆಯ ಶುಚಿತ್ವವನ್ನು ನೋಡಿಕೊಳ್ಳುವುದು.

   d) ಆರೋಗ್ಯಕರ ವಾತಾವರಣ ನಿರ್ಮಿಸುವುದು.

   e) ವ್ಯಾಯಾಮ ಮತ್ತು ವಿಶ್ರಾಂತಿ ನೀಡುವುದು.

   (ಅ) ಮಗುವಿಗೆ ಚಟುವಟಿಕೆ ನೀಡುವುದರ ಮೂಲಕ ಸಂತೋಷಕರವಾಗಿಡುವುದು ಮತ್ತು ವೈಯಕ್ತಿಕ ದೈಹಿಕ ಚಟುವಟಿಕೆಗಳ ಅಭ್ಯಾಸದ ಸ್ವಯಂನಿಯಂತ್ರಣ ಕಲಿಸುವುದು.

2. ಪ್ರಾಥಮಿಕ ಹೊಲಿಗೆ ಹೊಲಿಯುವುದನ್ನು ಗೈಡ್ ತಿಳಿದಿರಬೇಕು.

18. ವೃಂದ ಗಾಯಕಿ -Choirister :

1. ಒಂದು ಜನಪದ ಗೀತೆ ಮತ್ತು ಒಂದು ಶೃತಿಬದ್ಧಗೀತೆ (ಸಂಗೀತ) ಹಾಡುವುದು.
2. ಸುತ್ತು ಗಾನ ಅಥವಾ ಶೃತಿಬದ್ಧ ಗೀತೆ ಹಾಡುವುದು.
3. 6 ತಿಂಗಳಲ್ಲಿ ಕಲಿತ ಹಾಡುಗಳ ಪಟ್ಟಿಯನ್ನು ಪರೀಕ್ಷಕರಿಗೆ ಸಲ್ಲಿಸುವುದು.

ಸೂಚನೆ: ಎಲ್ಲಾ ಹಾಡುಗಳನ್ನೂ ಸ್ಮರಣೆಯಿಂದ ಹಾಡಬೇಕು. ವೈವಿಧ್ಯತೆ ಮತ್ತು ಶ್ರೇಷ್ಠಮಟ್ಟದ ಹಾಡುಗಾರಿಕೆಯನ್ನು ಪರಿಗಣಿಸಲಾಗುವುದು. (ಅಷ್ಟಕದಲ್ಲಿ 4–6 ಗೈಡುಗಳ ಒಂದೆ ಪದಕ ಪಡೆದಿದ್ದರೆ, ಆ ಪದಕವನ್ನು ಅಷ್ಟಕ ಧ್ವಜದ ಮೇಲಿ ಹೊಲಿದುಕೊಳ್ಳಬಹುದು.)

19. ನಾಗರಿಕ - Citizen :

1. ಮತದಾರರ ಕನಿಷ್ಟ ಅರ್ಹತೆ ಮತ್ತು ಹೇಗೆ ಮತ ಚಲಾಯಿಸುವುದು ಎಂಬುದನ್ನು ತಿಳಿದಿರಬೇಕು.
2. ಕೆಳಗಿನ ಮಾಹಿತಿಗಳನ್ನು ತಿಳಿಯವುದು:

   (ಅ) ರಾಷ್ಟ್ರದಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹಾಗೂ ರಾಜ್ಯದಲ್ಲಿ ರಾಜ್ಯಪಾಲರ ಕಾರ್ಯ ಮತ್ತು ಅಧಿಕಾರ ವ್ಯಾಪ್ತಿ.

   (ಆ) ಲೋಕಸಭೆ ಮತ್ತು ರಾಜ್ಯ ಸಭೆ, ವಿಧಾನಸಭೆ, ವಿಧಾನ ಪರಿಷತ್ತಿನ ಕಾರ್ಯಗಳು

   (ಇ) ತನ್ನ ಬಡಾವಣೆಯಲ್ಲಿ ಕಾರ್ಯನಿರ್ವಹಿಸುವ ಸ್ಥಳೀಯ ಸಂಸ್ಥೆಯ (ಪುರಸಭೆ, ಗ್ರಾಮ ಪಂಚಾಯತ್, ಜಿಲ್ಲಾ ಪರಿಷತ್, ನಗರ ಪಾಲಿಕೆ) ಕಾರ್ಯಾಚರಣೆ.

3. ರಾಜ್ಯ ಹಾಗೂ ಸ್ಥಳೀಯ ಆಡಳಿತ ಸಂಸ್ಥೆಗಳ ಕರ್ತವ್ಯ ಮತ್ತು ಕಾರ್ಯಗಳನ್ನು ತಿಳಿಯವುದು.

4. ರಾಷ್ಟ್ರದ ನ್ಯಾಯಾಂಗದ ಕಾರ್ಯಗಳ ಬಗ್ಗೆ ಸಾಮಾನ್ಯ ಜ್ಞಾನ ಹೊಂದಿರುವುದು.

20. ನಾಗರಿಕ ರಕ್ಷಣೆ - Civil Defence :

1. ನಿಮ್ಮ ಮನೆ, ಶಾಲೆ ಹಾಗೂ ಕಾರ್ಯಸ್ಥಾನದ ಒಂದು ಕಿ.ಮೀ. ಸುತ್ತಿನಲ್ಲಿರುವ ನಾಗರೀಕ ರಕ್ಷಣಾ ಸಂಸ್ಥೆಗಳ ಕಾರ್ಯಸ್ಥಾನ ತಿಳಿಯುವುದು. ಅದರ ಪಾಲಕ (Warden), ಸ್ಥಳ, ಪ್ರಥಮ ಚಿಕಿತ್ಸೆ, ಚಿಕಿತ್ಸಾಲಯ, ಆಸ್ಪತ್ರೆ ಹಾಗೂ ಇತರ ಸಾರ್ವಜನಿಕ ಸೇವಾ ಕೇಂದ್ರಗಳ ಬಗ್ಗೆ ತಿಳಿದಿರುವುದು.

2. ನಾಗರಿಕ ರಕ್ಷಣಾ ಸಂಸ್ಥೆಯ ಮುದ್ರಿತ ವರದಿಯ ನಮೂನೆಯನ್ನು ತುರ್ತುಪರಿಸ್ಥಿತಿಯಲ್ಲಿ ಭರ್ತಿಮಾಡಿ ಸಂಬಂಧಿತ ಪಾಲಕರಿಗೆ ಕಳುಹಿಸುವುದುನ್ನು ತಿಳಿಯುವುದು.

3. ವಾಯುದಾಳಿ, ಅಪಘಾತಗಳಲ್ಲಿ, ತುರ್ತುಸಂಧರ್ಭಗಳಲ್ಲಿ ಗಾಯಗೊಂಡವರು/ಬಳಲಿದವರನ್ನು ರಕ್ಷಿಸುವ ಮತ್ತು ಪ್ರಥಮ ಚಿಕಿತ್ಸೆ ನೀಡುವ ವಿಧಾನವನ್ನು ತಿಳಿದಿರುವುದು.

4. ಅಗ್ನಿಶಾಮಕ ವಿಧಾನಗಳನ್ನು ತಿಳಿದಿರುವುದು.

5. ತನ್ನ ಬಡಾವಣೆಯ ನಾಗರಿಕ ರಕ್ಷಣಾ ಸಂಸ್ಥೆಯಲ್ಲಿ ಹೆಸರನ್ನು ನೋಂದಾಯಿಸಿ, ಪ್ರಮಾಣಪತ್ರ ಪಡೆದು, ದಳಕ್ಕೆ ಸಲ್ಲಿಸುವುದು ಮತ್ತು ಕೆಳಗಿನ ಯಾವುದಾದರೂ ಒಂದರಲ್ಲಿ ದಳಕ್ಕೆ ನಾಗರಿಕ ರಕ್ಷಣಾ ಸೇವೆಯಲ್ಲಿ ತರಬೇತಿ ಪಡೆಯುವುದು.

1. ಅಗ್ನಿಶಾಮಕ ದಳ
2. ಪ್ರಥಮ ಚಿಕಿತ್ಸಾ ತಂಡ
3. ರಕ್ಷಣಾ ತಂಡ
4. ದೂತ ಸೇವೆ
5. ದೂರವಾಣಿ ಸಂಪರ್ಕ

21. ಆರೋಹಣ/ಪರ್ವತಾರೋಹಿ - Climber :

1. 14 ವರ್ಷ ತುಂಬಿರಬೇಕು.

2. ಕನಿಷ್ಟ 2 ಕಿ.ಮೀ. ವಿಸ್ತಾರದ ಪರ್ವತ ಪ್ರದೇಶದ ಪರಿಚಯವಿರಬೇಕು. ಪರ್ವತದ ತುದಿಗೆ ಏರಲು ದಾರಿ ತಿಳಿದಿರಬೇಕು. ತುರ್ತುಸ್ಥಿತಿಯನ್ನು ನಿರ್ವಹಿಸಲು ಹತ್ತಿರದ ವೈದ್ಯರ ದೂರವಾಣಿ ಸಂಖ್ಯೆ ಹೊಂದಿರಬೇಕು.
3. ಪರ್ವತದಲ್ಲಿ ಗೊತ್ತುಪಡಿಸಿದ ಗುರಿಸ್ಥಾನಕ್ಕೆ ದಿಕ್ಸೂಚಿ ಮತ್ತು ಭಾರತೀಯ ಸರ್ವೇಕ್ಷಣಾ ನಕ್ಷೆ ಅಥವಾ ಸ್ಥಳೀಯ ನಕ್ಷೆಯ ಮೂಲಕ ಆರೋಹಣ (ಹತ್ತುವ) ಸಾಮರ್ಥ್ಯವನ್ನು ಪ್ರದರ್ಶಿಸುವುದು.
4. ಮೂಳೆ ಮುರಿತ, ಮೂಳೆಗಳ ಪಲ್ಲಟ, ಬಿಚ್ಚುಗಾಯ, ಆಘಾತಗಳಿಗೆ ಪ್ರಥಮಚಿಕಿತ್ಸೆ ನೀಡುವುದು ಮತ್ತು ಗಾಯಗೊಂಡವರನ್ನು, ಸಾಗಿಸುವ ವಿಧಾನಗಳನ್ನು ತಿಳಿದಿರುವುದು.
5. ಪರ್ವತ ಪ್ರದೇಶದಲ್ಲಿ ಕನಿಷ್ಟ 1.200 ಮೀ ಎತ್ತರಕ್ಕೆ 5 ದಿನಗಳಲ್ಲಿ ಹತ್ತಬೇಕು.
6. ಮಾನ್ಯತೆ ಪಡೆದ ಪರಿಣಿತ ತರಬೇತಿದಾರರಿಂದ ಪರ್ವತಾರೋಹಣ ಪ್ರಮಾಣಪತ್ರವನ್ನು ಪಡೆದಿರಬೇಕು.

22. ಸಮುದಾಯ ಗೀತಗಾಯಕಿ - Community Singing :

1. ಮಾತೃಭಾಷೆಯ ಅಥವಾ ಸ್ಥಳೀಯ ಭಾಷೆಯಲ್ಲಿ ಎರಡು ಹಾಡುಗಳನ್ನು ಹಾಡುವುದು.
2. ಮೇಲಿನ ಹಾಡುಗಳ ಅರ್ಥ ವಿವರಿಸುವುದು.
3. ಮಾತೃಭಾಷೆ ಅಥವಾ ಸ್ಥಳೀಯ ಭಾಷೆಯಲ್ಲದೆ ಬೇರೊಂದು ಭಾಷೆಯ ಹಾಡನ್ನು ಸರಿಯಾದ ಉಚ್ಚಾರ ಮತ್ತು ರಾಗದೊಂದಿಗೆ ಹಾಡುವುದು.
4. ಅಷ್ಟಕ/ದಳ/ಗುಂಪಿಗೆ ಒಂದು ಹಾಡನ್ನು ಕಲಿಸಿ ಶಿಬಿರಾಗ್ನಿ/ಮೇಳದಲ್ಲಿ ಗುಂಪಿನ ಜೊತೆ ಹಾಡುವುದು.

23. ಸಮುದಾಯ ಕಾರ್ಯಕರ್ತೆ - Community Worker:

1. ಸಮುದಾಯ ಅಭಿವೃದ್ಧಿ ಕಾರ್ಯವಿಧಾನ ತಿಳಿಯುವುದು.
2. ಕನಿಷ್ಟ 12 ಮಹಿಳೆಯರನ್ನು/ಬಾಲಕಿಯರನ್ನು ಈ ಸಂಸ್ಥೆಗೆ ಸೇರುವಂತೆ ಮನವೊಲಿಸುವುದು.
3. ಸಮುದಾಯ ಮತ್ತು ಸಂಪನ್ಮೂಲ ಅಭಿವೃದ್ಧಿ ಕೇಂದ್ರಗಳಾದ ಬ್ಯಾಂಕ್, ಆಸ್ಪತ್ರೆ ಮುಂತಾದವು ಗಳ ಮಧ್ಯೆ ಸಂಪರ್ಕ ವ್ಯಕ್ತಿಯಾಗುವುದು.
4. ಶುದ್ಧ ನೀರು, ಶಾಲಾಕಟ್ಟಡ, ತರಕಾರಿ ಮಾರುಕಟ್ಟೆ, ಮುಂತಾದ 2 ಮುಖ್ಯ ಸೌಲಭ್ಯಗಳ ಸಮಸ್ಯೆಗಳನ್ನು ಕನಿಷ್ಟ ಇಬ್ಬರಿಗಾದರೂ ಪರಿಹಾರ ನೀಡುವ ಯೋಜನೆ ಸಿದ್ಧಗೊಳಿಸವುದು.

5. ಸೋಂಕು ನಿರೋಧ ಶಿಬಿರದಲ್ಲಿ (Immunisation camp) ಸಹಾಯ ಮಾಡುವುದು.

24. ಗಣಕ ಯಂತ್ರ ಅರಿವು - Computer awareness :

1. ಗಣಕ ಯಂತ್ರದ ಸಂಕ್ಷಿಪ್ತ ಇತಿಹಾಸ ಹಾಗೂ ಇತ್ತೀಚಿನ ಬೆಳವಣಿಗೆಯ ಬಗ್ಗೆ ಅರಿವು.
2. ಗಣಕಯಂತ್ರದ ಘಟಕಗಳು ಮತ್ತು ಅವುಗಳ ಸಾಧನ ಸಲಕರಣೆಗಳ ಬಗ್ಗೆ ಪರಿಚಯ.
3. ಸ್ಕೌಟ್ / ಗೈಡ್ ಚಟುವಟಿಕೆಯಲ್ಲಿ ಅದರ ಉತ್ತಮ ಅರಿವು.
4. ಸಾಮಾನ್ಯ ಅಡಕಗಳ (Packages) ಬಗೆಗೆ ಅರಿವು
5. ಕೆಳಗಿನವುಗಳನ್ನು ಮಾಡಿ

   (ಅ) ಗಣಕಯಂತ್ರದಲ್ಲಿ ಫ್ಲಾಪಿ ಮತ್ತು ಗಡಸುಬಿಲ್ಲೆ (ಹಾರ್ಡ್ ಡಿಸ್ಕ್) ಬಳಸಿ.

   (ಆ) ಬೂಟಿಂಗ್ ಮತ್ತು ಗಣಕಯಂತ್ರವನ್ನು ಸ್ಥಗಿತಗೊಳಿಸುವುದು.

25. ಗಣಕಯಂತ್ರ ಕೌಶಲ - Computer Skill :

1. ಗಣಕಯಂತ್ರದ ಮೂಲ ಮತ್ತು ಇತಿಹಾಸ ತಿಳಿಯುವುದು.
2. M.S. Office, M.S. Word, M.S. Excell, M.S. Power Point
3. ನಿಮ್ಮ ಅಷ್ಟಕ/ದಳ/ಜಿಲ್ಲೆಗಳ ವರದಿಯನ್ನು ಗೌರವ ನ್ಯಾಯ ಸಭೆಯಲ್ಲಿ ನೀವೇ ಮಾಡಿ ಗಣಕಯಂತ್ರದಲ್ಲಿ ಪ್ರಸ್ತುತಪಡಿಸಿ.

4. ಅಂತರ್ಜಾಲದ ವಿವರ ತಿಳಿಯುವುದು.

5. 10 ಜಾಲತಾಣದ ಉಪಯೋಗ ತಿಳಿದು ಅದರ ವರದಿಯನ್ನು ಸಲ್ಲಿಸುವುದು.

26. ಪಾಕ ಪ್ರವೀಣೆ – Cook :

1. ಸಮತೂಕ ಆಹಾರದ ಅಂಶಗಳನ್ನು ತಿಳಿಯವುದು.

2. ಒಂದು ಅಷ್ಟಕಕ್ಕೆ ಒಂದು ವಾರದ ಶಿಬಿರದ ವಾಸಕ್ಕೆ ಅವಶ್ಯಕವಾದ ಆಹಾರ ಪದಾರ್ಥಗಳನ್ನು ಖರೀದಿಸಿ ಸಮತೋಲನ ಆಹಾರದ ತಿನಿಸುಪಟ್ಟಿ ತಯಾರಿಸುವುದು.

3. ಆಹಾರ ತಯಾರಿಸಲು ಸರಿಯಾದ ಸ್ಥಳ ಗೊತ್ತುಪಡಿಸಿ ಒಲೆಹಾಕಿ ಸೌದೆ ಜೋಡಿಸಿ ಹತ್ತಿಸಿ, ಪರೀಕ್ಷಕರು ನಿಗದಿಪಡಿಸುವ 5 ತಿನಿಸು ತಯಾರಿಸಬೇಕು. ಅದರಲ್ಲಿ ಎರಡು ಪಾನೀಯಗಳು ಪರೀಕ್ಷಕರು ಸೂಚಿಸಿದ್ದಾಗಿರಬೇಕು.

4. ತಿನಿಸುಗಳನ್ನು ಸರಿಯಾದ ರೀತಿಯಲ್ಲಿ ಉಣಬಡಿಸುವುದು.

5. ಪದಾರ್ಥಗಳನ್ನು ಆರೋಗ್ಯಕರವಾಗಿ ಸಂಗ್ರಹಿಸುವ ವಿಧಾನ ತಿಳಿಯುವುದು.

27. ಸೈಕಲ್ ಸವಾರಕಿ – Cyclist :

1. ಸೈಕಲ್ ಹೊಂದಿರಬೇಕು. ಅದು ಸುಸ್ಥಿತಿಯ ಲ್ಲಿರುವ ಬಗ್ಗೆ ಪ್ರಮಾಣಪತ್ರ ಹೊಂದಿರಬೇಕು. ತುರ್ತುಸ್ಥಿತಿಯಲ್ಲಿ ಯಾವಾಗ ಕರೆಬಂದರೂ ಅದನ್ನು ಇಚ್ಛಾಪೂರ್ವಕವಾಗಿ ಉಪಯೋಗಿಸಲು ಸಿದ್ಧವಿರಬೇಕು.



2. ಸೈಕಲ್ಲನ್ನು ಸವಾರಿಗೆ ಯೋಗ್ಯವಾಗಿಟ್ಟುಕೊಂಡು ಸವಾರಿ ಮಾಡಬೇಕು.
3. ಸೈಕಲ್ ಚಕ್ರದಲ್ಲಿ ರಂಧ್ರವಾದಾಗ (Puncture) ದುರಸ್ತಿ ಮಾಡುವುದು.
4. ಮಾರ್ಗನಕ್ಷೆಯನ್ನು ಓದುವುದು ಮತ್ತು ಅದರ ಅರ್ಥವನ್ನು ಸರಿಯಾಗಿ ಹೇಳುವುದು.
5. ಸೈಕಲ್ಲನ್ನು ಎರಡೂ ಕಡೆಯಿಂದ ಹತ್ತಬೇಕು ಸವಾರಿ ಮಾಡುತ್ತಾ ಮಾರ್ಗದರ್ಶನ ಮಾಡಬೇಕು.

28. ಹೈನುಗಾರ್ತಿ - Dairy Maid :



1. ಹಸು, ಎಮ್ಮೆ ಅಥವಾ ಕುರಿ ಸಾಕಿರುವುದಕ್ಕೆ ಪೋಷಕರಿಂದ ಪ್ರಮಾಣಪತ್ರ ಪಡೆದು ಸಲ್ಲಿಸುವುದು ಅಥವಾ ಹೈನುಗಾರರಲ್ಲಿ ಕನಿಷ್ಟ ಮೂರುತಿಂಗಳು ಕೆಲಸಮಾಡಿ ಪ್ರಮಾಣಪತ್ರ ಪಡೆಯುವುದು.
2. ಹೈನುಮನೆಯಲ್ಲಿ ಉಪಯೋಗಿಸುವ ಸಲಕರಣೆ ಮತ್ತು ಪಾತ್ರೆಗಳ ಬಗೆಗಿನ ಎಚ್ಚರಿಕೆಯ ಕ್ರಮವನ್ನು ಪ್ರದರ್ಶಿಸುವುದು.
3. ಹಾಲು ಕರೆಯುವುದು, ಹಾಲಿನ ಶುದ್ಧಿಸಂಸ್ಕರಣ (Pasteurisation) ಕ್ರಮವನ್ನು ತಿಳಿದಿರುವುದು.
4. ಹಾಲಿನಿಂದ ಚೀಸ್, ಬೆಣ್ಣೆ ಮತ್ತು ತುಪ್ಪ ಮಾಡುವ ವಿಧಾನ ತಿಳಿದಿರುವುದು.
5. ಶೀತಲ ಪಾನೀಯವಾದ ಲಸ್ಸಿ ಮತ್ತು ಮಜ್ಜಿಗೆ ಮಾಡುವುದನ್ನು ತಿಳಿದಿರುವುದು.

29. ನೃತ್ಯಗಾರ್ತಿ - Dancer :

1. ಎರಡು ವಿಧದ ನಮ್ಮ ರಾಷ್ಟ್ರೀಯ ನೃತ್ಯವನ್ನು ಪ್ರದರ್ಶಿಸಲು ಸಮರ್ಥವಾಗುವುದು ಅಥವಾ ಪರೀಕ್ಷಕರು ಆಯ್ಕೆ ಮಾಡಿದ ಹಾಡಿಗೆ ನೃತ್ಯ ಭಂಗಿ ಮತ್ತು ಮುದ್ರೆಯನ್ನು ಅಳವಡಿಸುವುದು.
2. ನೃತ್ಯಭಂಗಿಯಲ್ಲಿ ಸಂತಸ, ದುಃಖ, ಕೋಪ, ಹೆದರಿಕೆ ಮುಂತಾದ ಭಾವಗಳನ್ನು ಪ್ರದರ್ಶಿಸುವುದು.

   ನೃತ್ಯದಲ್ಲಿ ತಾಳ, ಲಯ, ಭಾವ, ಭಂಗಿ, ಸ್ಪಷ್ಟತೆಯನ್ನು ವಿಶೇಷವಾಗಿ ಪರಿಗಣಿಸಲಾಗುವುದು.

30. ಚರ್ಚಾಪಟು - Debater :

1. ಚರ್ಚಾಕೂಟದಲ್ಲಿ ಎರಡು ವಿಷಯಗಳ ಪರ ಮತ್ತು ವಿರೋಧ ಚರ್ಚೆ ಮಂಡಿಸುವುದು.
2. ಚರ್ಚೆಯ ವಿಷಯ ಕುರಿತು ಸಂಕ್ಷಿಪ್ತವಾದ ಸಕ್ರಿಯವಾದ ಭಾಷಣದ ಪ್ರತಿ ತಯಾರಿಸಿ, 5 ನಿಮಿಷ ಪರೀಕ್ಷಕರ ಮುಂದೆ ಮಾತನಾಡುವುದು ಮತ್ತು ಬರಹವನ್ನು ಸಲ್ಲಿಸುವುದು.
3. ಚರ್ಚಾಕೂಟದ ಸಾಮಾನ್ಯ ನಿಯಮಗಳನ್ನು ಅಧ್ಯಕ್ಷರ ಕರ್ತವ್ಯ ಮತ್ತು ಅಧಿಕಾರ ವ್ಯಾಪ್ತಿಯನ್ನು ತಿಳಿದಿರುವುದು.

31. ವಿಕೋಪ ನಿರ್ವಹಣೆ

1. ವಿಕೋಪ ಮತ್ತು ಅನಾಹುತಗಳ ವಿವರಣೆ ತಿಳಿಯುವುದು.
2. ಆಯಾ ಸ್ಥಳಗಳಲ್ಲಿ ನಿರೀಕ್ಷಿಸಬಹುದಾದ ಪ್ರಾಕೃತಿಕ ಮತ್ತು ಮಾನವ ನಿರ್ಮಿತ ವಿವಿಧ ವಿಕೋಪಗಳನ್ನು ಅರಿಯುವುದು.
3. ವಿಕೋಪ ನಿರ್ವಹಣಾ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ವಿವಿಧ ಸಂಸ್ಥೆಗಳನ್ನು ತಿಳಿಯುವುದು.
4. ನಾಗರಿಕ ರಕ್ಷಣೆ ಮತ್ತು ಅಗ್ನಿಶಾಮಕದಳದ ಸಾಮಾನ್ಯ ಜ್ಞಾನವನ್ನು ಹೊಂದಿರುವುದು.
5. ವಿಕೋಪಗಳನ್ನು ಎದುರಿಸಲು ಸಿದ್ಧತೆಗಳೇನೇನು ಮತ್ತು ವಿವಿಧ ಬಗೆಯ ಸಿದ್ಧತೆಗಳ ಪಟ್ಟಿಮಾಡಿ, ವಿವರಿಸಲು ಸಿದ್ಧರಾಗಿರುವುದು.
6. ಸುರಕ್ಷತಾ ಅರಿವನ್ನು ಹೊಂದಿರುವುದು–ಮನೆಯಲ್ಲಿ, ಕೈಗಾರಿಕೆಗಳಲ್ಲಿ, ರಸ್ತೆಗಳಲ್ಲಿ.
7. ನಿಮ್ಮ ಸ್ಥಳೀಯ ಪ್ರದೇಶಗಳಲ್ಲಿ ಅಪಘಾತಕ್ಕೊಳಪಡುವ ರಸ್ತೆಗಳು, ಸ್ನಾನಘಟ್ಟಗಳು, ಸಾಮೂಹಿಕ ಕೂಟಸ್ಥಳಗಳು ಮುಂತಾದವುಗಳ ಬಗ್ಗೆ ವಿವರಣೆ ನೀಡುವುದು.
8. ಸ್ಥಳೀಯ ವಿಕೋಪದ ವರದಿಯನ್ನು ದೂತ ಸೇವೆಗಳನ್ನೊಳಗೊಂಡಿರುವ ಫ್ಯಾಕ್ಸ್/ ದೂರವಾಣಿ / ಟೆಲೆಕ್ಸ್ / ಎಸ್‌ಎಂಎಸ್/ ಇ–ಮೇಲ್ / ಯುಟ್ಯೂಬ್ / ಫೇಸ್‌ಬುಕ್ ಮೂಲಕ ಸ್ಥಿರಕಾರ್ಯ ಕೈಗೊಳ್ಳಬೇಕು.

9. ವಿಕೋಪ ನಿರ್ವಹಣೆಯಲ್ಲಿ ಮಾಧ್ಯಮಗಳ ಪಾತ್ರವನ್ನು ತಿಳಿಯುವುದು.

10. ಪುನರ್ವಸತಿ ಕಾರ್ಯ ವಿಧಾನವನ್ನು ಕೈಗೊಳ್ಳುವಲ್ಲಿ ಸರ್ಕಾರಿ ಸಂಸ್ಥೆಗಳು ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳ (NGO) ಬೆಂಬಲವನ್ನು ತಿಳಿಸಲು ಸಮರ್ಥರಾಗಿರುವುದು.

32. ಗೃಹ ಸೇವೆ - Domestic Service :



1. ಮನೆಯನ್ನು ಗುಡಿಸುವುದು, ಧೂಳು ಝಾಡಿಸುವುದು, ಒರೆಸುವುದು, ಅಡುಗೆ ಮನೆ ತೊಳೆಯುವುದು, ಪಾತ್ರೆ ತೊಳೆಯುವುದನ್ನು ಪ್ರದರ್ಶಿಸುವುದು, ನೆಲ ಮತ್ತು ಮನೆಯ ಗೋಡೆಗಳನ್ನು ಸ್ವಚ್ಛವಾಗಿ ಸುಸ್ಥಿತಿಯಲ್ಲಿಡುವುದು.

2. ಬಾಗಿಲು, ಕಿಟಕಿ, ಗವಾಕ್ಷಿ ಪೀಠೋಪಕರಣಗಳನ್ನು ಸ್ವಚ್ಛವಾಗಿಡುವುದು.

3. ಹಿತ್ತಾಳೆ, ಬೆಳ್ಳಿ ಮತ್ತು ಅಲ್ಯೂಮಿನಿಯಂ ಪಾತ್ರೆಗಳನ್ನು ಸ್ವಚ್ಛವಾಗಿಡುವುದು, ಹೊಳಪು (Shinning) ಕೊಡುವುದು.

4. ಗ್ರೀಸ್, ಟಾರ್, ಮಸಿ ಕಲೆಗಳನ್ನು ತೆಗೆಯುವ ವಿಧಾನವನ್ನು ಪ್ರದರ್ಶಿಸುವುದು.

5. ಇಬ್ಬರಿಗೆ ವೈಯಕ್ತಿಕ ಸಂಪ್ರದಾಯದ ಪ್ರಕಾರ ಊಟ ಬಡಿಸುವುದು.

6. ಸೊಳ್ಳೆ, ಇರುವೆ, ಜಿರಲೆ, ಗೆದ್ದಲು, ಬೆಳ್ಳಿಮೀನು (Silver Fish) ತಿಗಣೆ ಮುಂತಾದ ಅಪತ್ಕಾರಿ ಕೀಟಗಳನ್ನು ತಡೆಗಟ್ಟುವ ಕ್ರಮಗಳನ್ನು ತಿಳಿದಿರುವುದು.

7. ಹೂವನ್ನು ಅಂದವಾಗಿ ಹೂದಾನಿಯಲ್ಲಿ ಜೋಡಿಸುವುದು.

8. ಹಣವನ್ನು ಅಂಚೆಮೂಲಕ ಕಳುಹಿಸುವ, ಸ್ವೀಕರಿಸುವ ವಿಧಾನವನ್ನು ತಿಳಿದಿರಬೇಕು **ಅಥವಾ**

ಸರಿಯಾಗಿ ದೂರವಾಣಿಯ ಕರೆಯನ್ನು ಸ್ವೀಕರಿಸುವುದು ಮತ್ತು ಕರೆಮಾಡುವುದನ್ನು ತಿಳಿದಿರಬೇಕು.

33. ಮಾದಕದ್ರವ್ಯ ಜಾಗೃತಿ - Drug awareness :

1. ವಿವಿಧ ಮಾದಕದ್ರವ್ಯಗಳ ಬಗ್ಗೆ ಎಚ್ಚರಿಕೆ ವಹಿಸುವುದು. ಅವುಗಳ ರಹಸ್ಯಗಳ (Secrets) ಬಗ್ಗೆ ತಿಳಿಯುವುದು.

2. ಮಾದಕದ್ರವ್ಯ ಬಳಕೆ ಕುರಿತ ವ್ಯಸನಿ, ಅವಲಂಬನೆ, ಹಿಂತೆಗೆಯುವದು, ಸಹಿಸುವುದು (tolerence) ಪದಗಳ ಅರ್ಥ ತಿಳಿಯುವುದು.

3. ಮಾದಕದ್ರವ್ಯ ಬಳಕೆಯಿಂದ ಆರೋಗ್ಯಕ್ಕೆ ಉಂಟಾಗುವ ಆಪತ್ತನ್ನು ತಿಳಿಯವುದು.

4. ಮಾದಕ ದ್ರವ್ಯಗಳಿಗೆ ಹೇಗೆ ಮತ್ತು ಏಕೆ ಜನರು ಸಂಪೂರ್ಣ ಶರಣು ಹೋಗುತ್ತಾರೆ ಎಂಬುದನ್ನು ತಿಳಿಯುವುದು.

5. ಮಾದಕದ್ರವ್ಯದ ಜಾಗೃತಿ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಯೋಜಿಸುವುದು.

6. ಮಾದಕದ್ರವ್ಯ ವ್ಯಸನಿಗಳಿಗೆ ಸಹಾಯಮಾಡಲು ಇರುವ ವಿವಿಧ ವಿಧಾನಗಳನ್ನು ತಿಳಿಯವುದು.

34. ಜೀವ ಪರಿಸರ ಶಾಸ್ತ್ರಜ್ಞೆ - Ecologist :

1. ಜೀವಪರಿಸರ ಸಮತೋಲನದ ಬಗ್ಗೆ ಕೆಲಸ ಮಾಡುವ, ಇತರೆ ಮಧ್ಯವರ್ತಿಗಳ ಬಗ್ಗೆ ತಿಳಿಯುವುದು.

2. ವಿಚಾರ ವಿನಿಮಯ, ಶ್ರವಣ – ದೃಶ್ಯ ಸಾಧನಗಳ ಮೂಲಕ ಜನರಿಗೆ ಜಾಗೃತಿ ಮೂಡಿಸುವುದು ಈ ಕಾರ್ಯದಲ್ಲಿ ಸುತ್ತಲಿನಲ್ಲಿರುವ ತಜ್ಞರ ಪಟ್ಟಿ ಮಾಡುವುದು.

3. ಮರ ಕಡಿಯುವ ವಿರುದ್ಧ ಪ್ರಚಾರ ಮಾಡುವುದು.

4. ಮುಂಗಾರು ಮಳೆಯ ಸಮಯದಲ್ಲಿ ವನಮಹೋತ್ಸವ ಏರ್ಪಡಿಸುವುದು.

5. ಬಡಾವಣೆಯಲ್ಲಿರುವ ಪರಿಸರ ಮಾಲಿನ್ಯ ಸಮಸ್ಯೆಗಳನ್ನು ಅಲ್ಲಿನ ನಿವಾಸಿಗಳಿಗೆ ತಿಳಿಯಪಡಿಸುವುದು.

6. ಕೆಳಗಿನ ಯಾವುದಾದರೂ ಪರಿಸರ ಮಾಲಿನ್ಯ ಸಮಸ್ಯೆಗಳನ್ನು ಪರಿಹರಿಸಲು ಕಾರ್ಯೋನ್ಮುಖರಾಗುವುದು.

(ಅ) ವಾಯುಮಾಲಿನ್ಯ (ಉ) ಮರ ಕಡಿಯುವುದು

(ಆ) ಪ್ರಾಣಿಹತ್ಯೆ (ಊ) ನೀರಿನ ಅಪವ್ಯಯ

(ಇ) ಕಸ ಎಸೆಯುವುದು (ಋ) ಜಲಮಾಲಿನ್ಯ

(ಈ) ಮಣ್ಣಿನ ಸವಕಳಿ

35. ವಿದ್ಯುನ್ಮಾನ - Electronics :

1. ಶಾಖ ಕವಾಟ (thermionic valve) ಬಗ್ಗೆ ಸಾಮಾನ್ಯ ತಿಳುವಳಿಕೆ ಹೊಂದಿರುವುದು.

   (ಅ) ಅಶ್ವಶಕ್ತಿ ವರ್ಧಕ - HP Amplifier

   (ಆ) ಶೋಧಕ - (detector).

   (ಇ) LF ವರ್ಧಕ Crestector ಕಾರ್ಯನಿರ್ವಹಿಸುವ ರೀತಿ.

2. ಸಂಚಿತಕೋಶ (condenser), ನಿರೋಧಕ (resistance), ವಿದ್ಯುತ್ ಚೋದ್ಯ (Inductance), ಪ್ರತಿಕ್ರಿಯೆ (reaction) ಮತ್ತು ಪ್ರಧಾನ ದೋಷಾಹಾರಿ (main rectifier), ಪ್ರಸಾರಕ (transformer)

3. ಅಗ್ಗದ ಪ್ರಧಾನ ರೇಚಕ (main eliminator) ತಯಾರಿಸುವುದನ್ನು ತಿಳಿದಿರುವುದು.

4. ತಂತಿರಹಿತ ಸಾಧನದಲ್ಲಿ (wireless set) ಕಂಡುಬರುವ ಸರಳ ತೊಡಕನ್ನು ಗುರುತಿಸುವುದು ಮತ್ತು ಸರಿಪಡಿಸುವುದು.

5. ಚಲಿಸುವ ಸುರಳಿ (Moving Coil) ಧ್ವನಿವರ್ಧಕ, ಶಾಶ್ವತ ಆಯಸ್ಕಾಂತ ಪ್ರಾಧಾನ್ಯತೆ (Main) ಮತ್ತು ಚೇತನದಾಯಕಗಳ (energiser) ಕಾರ್ಯ ವಿಧಾನದ ಅರಿವು ಹೊಂದಿರುವುದು.

6. Draw a simple diagram showing the way to connect P.A. State of "resistance coupled" L.F. amplification and another to illustrate the connections of "L.F. Transformer" and show knowledge of the principles involved.

7. ತಾಂತ್ರಿಕ ನಕ್ಷೆ ಓದಿ ಅದರಲ್ಲಿನ ಸಾಮಾನ್ಯ ಬಳಕೆಯಲ್ಲಿರುವ ಸಂಕೇತದ ಅರ್ಥ ತಿಳಿಸುವುದು.

8. ಎಲ್ಲಾ ಅಪಾಯ ಸಂಕೇತಗಳನ್ನು ತೃಪ್ತಿಕರವಾಗಿ ಸೂಚಿಸುವ ಸರಳ ತಂತಿರಹಿತ (wireless) ಗ್ರಾಹಕವನ್ನು ಜೋಡಿಸಿ, ಎಲ್ಲಾ ಅಪಾಯ ಸೂಚಕಗಳ ಅರ್ಥವನ್ನು ತಿಳಿಯವುದು.

9. ಸಂಚಿತಕೋಶಕ್ಕೆ ವಿದ್ಯುತ್ ಪೂರೈಸುವ ಮತ್ತು ಅದನ್ನು ಕಾಪಾಡಿಕೊಳ್ಳುವ ವಿಧಾನವನ್ನು ತಿಳಿಯುವುದು.

36. ಕಸೂತಿ ಕುಶಲಿ - Embroidrers :

1. ಎರಡು ರೀತಿಯ ಅಲಂಕಾರಿಕ ಹೊಲಿಗೆ ಯಿಂದ ಅಂಚನ್ನು ಹೊಲಿಯುವುದು.

2. ಕೆಳಗಿನ ಹೊಲಿಗೆ ಮೂಲಕ ಅಂಚು ಕಟ್ಟುವುದು.

   ಕೌದಿ (Blanket Stich), ಸರಪಣಿ ಹೊಲಿಗೆ (Chain stich), ಕತ್ತರಿ ಹೊಲಿಗೆ (Cross stich), ಸರಪಣಿ ಹೊಲಿಗೆ (Darning), ಗರಿಹೊಲಿಗೆ (feather stich), ಫ್ರೆಂಚ್ ಗಂಟು, ಎಲುಬು ಹೊಲಿಗೆ (Hernip Cone stich) ಮತ್ತು ಕಾಂಡದ ಹೊಲಿಗೆ ಉಪಯೋಗಿಸಿ ವೈವಿಧ್ಯಮಯವಾಗಿ ಅಂಚು ಹೊಲಿಯುವದು.

3. ಕೆಳಗಿನ ಹೊಲಿಗೆ ಮೂಲಕ ಅಂಚುಕಟ್ಟುವುದು. ಮೂರರಲ್ಲಿ ಯಾವುದಾದರೂ ಎರಡನ್ನು ಮಾಡಿ.

   (ಅ) ಸರಿಯಾದ ವಸ್ತ್ರ ಬಳಸಿ, ಚಿತ್ರ ಬಿಡಿಸಿ ಕಸೂತಿ ಮಾಡಿ.

   (ಆ) ಸೀರೆ ಅಂಚು ಅಥವಾ ಕುಪ್ಪಸ ಅಥವಾ ಲಂಗದ ಮೇಲೆ ಚಿತ್ರ ಬಿಡಿಸಿ, ಕಸೂತಿ ಮಾಡಿ

   (ಇ) ಒಂದು ಉಡುಪಿಗೆ ಎರಡು ವಿಧದ ಹೊಲಿಗೆಯಿಂದ ಎರಡು ರೀತಿಯ ವೈವಿಧ್ಯನೆರಿಗೆ (smock) ಮಾಡಿ

ಅಥವಾ

ತೇಪೆ ಕಸೂತಿಯನ್ನು (Applica work) ಮನೆಗೆ ಉಪಯೋಗ ವಾಗುವ ವಸ್ತುಗಳ ಮೇಲೆ ಮಾಡಿ.

37. ಮನರಂಜಕಿ - Entertainer :

1. 2 ನಿಮಿಷ ಸಾರ್ವಜನಿಕರಿಗೆ ಮನರಂಜನೆ ನೀಡುವ ಉತ್ತಮ ಮಟ್ಟದ ಎರಡು ಕಾರ್ಯಕ್ರಮಗಳನ್ನು ಸಿದ್ಧಗೊಳಿಸುವುದು. ನೃತ್ಯ, ಹಾಡು, ವಾದ್ಯವಾದನ, ಕಂಠಪಾಠ ಇವುಗಳಲ್ಲಿ ಯಾವುದಾದರೂ ಆಗಿರಬಹುದು.

2. ಕೆಳಗಿನ ವಿಷಯ ಕುರಿತು ಕನಿಷ್ಟ ಹತ್ತು ನಿಮಿಷಗಳ ಕಾಲ ಗೈಡುಗಳಿಗೆ ಮನರಂಜನೆ ನೀಡಬೇಕು.

   ಯಾವುದಾದರೂ ಕೈಚಳಕ ತೋರಿಸುವುದು, ವಾದ್ಯ ನುಡಿಸುವುದು ವ್ಯಕ್ತಿ ಚಿತ್ರಣ, ಹಾಡು, ಸಮೂಹಗಾನ (ಭಾಗ ಒಂದರಲ್ಲಿ ಮಾಡಿದ್ದನ್ನು ಪುನರಾವರ್ತಿಸಬಾರದು).

ಸೂಚನೆ: ಇದು ಶಿಬಿರಾಗ್ನಿಯ ಮನರಂಜನೆಯೂ ಆಗಿರಬಹುದು.

38. ಸಮಾರಂಭ ನಿರ್ವಾಹಕಿ - Event Manager

1. ಸಮಾರಂಭವನ್ನು ಸಂಘಟಿಸುವ ಪ್ರಕ್ರಿಯೆಯನ್ನು ತಿಳಿಯುವುದು.

2. ಅಷ್ಟಕ/ ದಳದ ಎರಡು ಸಮಾರಂಭಗಳನ್ನು ಏರ್ಪಡಿಸಿ, ವರದಿಯನ್ನು ನೀಡಿ.

3. ಜಿಲ್ಲೆ/ರಾಜ್ಯ ಮಟ್ಟದ ಸಮಾವೇಶದಲ್ಲಿ ಕನಿಷ್ಠ ಎರಡು ದಿನ ಸಹಾಯ ಮಾಡಿ.

4. ನಿಮ್ಮ ತಂಡವನ್ನು ಗೊತ್ತುಪಡಿಸಿಕೊಂಡು ನಿಮ್ಮ ಸಮುದಾಯದಲ್ಲಿ ಸಾಂಸ್ಕೃತಿಕ/ಕ್ರೀಡಾ ಸಮಾರಂಭವನ್ನು ಏರ್ಪಡಿಸಿ ವರದಿ ಸಲ್ಲಿಸಿ.

39. ಬೇಸಾಯಗಾರ್ತಿ - Farmer :



1. ಹೊಲ, ಗದ್ದೆ ಅಥವಾ ತೋಟದಲ್ಲಿ ಕನಿಷ್ಟ 2 ತಿಂಗಳು ಕೆಲಸ ಮಾಡುವುದು.
2. ಆಧುನಿಕ ಕೃಷಿಯಂತ್ರ ಮತ್ತು ಸಲಕರಣೆಗಳ ಬಗ್ಗೆ ಬಳಕೆಯ ಪ್ರಾತ್ಯಕ್ಷಿಕ ಅರಿವು ಇರಬೇಕು.
3. ಪರಿಷ್ಕರಣ ಮಾಡಿದ ಬೀಜ, ರಸಗೊಬ್ಬರ, ಹಸಿರು ಕೊಟ್ಟಿಗೆ ಗೊಬ್ಬರ, ಕ್ರಿಮಿನಾಶಕ, ಬಿತ್ತನೆ ಮತ್ತು ಕುಯಿಲಿನ ಅರಿವಿರಬೇಕು.
4. ಕೃಷಿ ಭೂಮಿಯ ಮೇಲೆ ಋತುಗಳ ಪರಿಣಾಮ, ದನಕರುಗಳು, ಕುದುರೆ, ಕುರಿ, ಅಥವಾ ಕೋಳಿ ಸಾಕಾಣಿಕೆ ಬಗ್ಗೆ ನಿರ್ವಹಿಸಬೇಕಾದ ಕಾಳಜಿ ಇತ್ಯಾದಿ ಸಾಮಾನ್ಯ ಕರ್ತವ್ಯಗಳ ಅರಿವಿರಬೇಕು.

40. ಅಗ್ನಿಶಾಮಕಿ - Fire woman :

1. ಚರಚಿಕಿತ್ಸೆ ಪದಕವನ್ನು ಹೊಂದಿರಬೇಕು.
2. ಈ ಕೆಳಗಿನ ಸಂದರ್ಭಗಳಲ್ಲಿ ಅನಾಹುತವನ್ನು ತಡೆಗಟ್ಟುವ ಅರಿವನ್ನು ಹೊಂದಿರುವುದು. ಬಿಸಿ ಬೂದಿ, ಕುದಿಯುವ ಎಣ್ಣೆ, ಪಟಾಕಿ ಸಿಡಿತ, ಅನಿಲಬಲೆ, ಅನಿಲದೀಪ, ಅನಿಲಬೆಂಕಿ, ಕಾರಿನಲ್ಲಿ ಬೆಂಕಿ, ಪ್ಲಾಸ್ಟಿಕ್‌ಗೆ ಬೆಂಕಿ, ಕಬ್ಬಿಣ ಕೆಂಪಾದಾಗ, ಚಿಮಣಿಯಿಂದ ಬೆಂಕಿ, ಕಾಡಿನ ಬೆಂಕಿ, ಶಿಬಿರಕ್ಕೆ ಬೆಂಕಿ ವಿದ್ಯುತ್‌ನಿಂದ ಬೆಂಕಿ.

3. ಬೆಂಕಿ ಆರಿಸಲು ತೆಗೆದುಕೊಳ್ಳಬೇಕಾದ ಕ್ರಮಗಳು

(ಅ) ಅಗ್ನಿಶಾಮಕ ಕಛೇರಿಯ ಸ್ಥಳ ಮತ್ತು ದೂರವಾಣಿಯ ಸಂಖ್ಯೆ ತಿಳಿದಿರುವುದು ಮತ್ತು ತಕ್ಷಣ ಸಂಪರ್ಕಿಸುವುದು.

(ಆ) ಅಗ್ನಿಶಾಮಕ ದಳ ಬರುವವರೆಗೂ ತೆಗೆದುಕೊಳ್ಳುವ ಕ್ರಮ ತಿಳಿದಿರುವುದು.

(ಇ) ಸರಪಣಿ ವಿಧಾನ ಅಥವಾ; ವಿವಿಧ ರೀತಿಯ ಶಮನಕಗಳನ್ನು ಉಪಯೋಗಿಸುವುದು.

(ಈ) ದಪ್ಪನಾದ ಉದ್ದನೆಯ ಪಂಪ್‌ಗೆ ಜೋಡಿಸಿದ ನೀರಿನ ಕೊಳವೆಯನ್ನು ಬೆಂಕಿ ಆರಿಸಲು ಉಪಯೋಗಿಸುವುದು.

4. **ರಕ್ಷಣಾ ಕಾರ್ಯ**

ತಪ್ಪಿಸಿಕೊಳ್ಳುವ ವಿಧಾನಗಳು.

(ಅ) ಹಗ್ಗದಿಂದ ಅಗ್ನಿಶಾಮಕ ಗಂಟನ್ನು ಹಾಕಿ ಕೆಳಗೆ ಇಳಿಸುವುದು.

(ಆ) ಅಗ್ನಿಶಾಮಕ ಗಂಟನ್ನು ಹಾಕಿ ಗಾಯಾಳನ್ನು ಎತ್ತುವುದು.

(ಇ) ಎತ್ತರದಲ್ಲಿನ ಬೆಂಕಿಯಿಂದ ತಪ್ಪಿಸಿಕೊಳ್ಳಲು ಹಾರುವ (Jumping sheet) ಮತ್ತು ಹೊಗೆಯಿಂದ ತೆವಳುತ್ತಾ ತಪ್ಪಿಸಿ ಕೊಳ್ಳುವುದು.

(ಈ) ಪ್ರಜ್ಞೆ ತಪ್ಪಿದ ವ್ಯಕ್ತಿಯನ್ನು ಹೊರಗೆ ಸಾಗಿಸುವುದು.

(ಉ) ಇಳಿಜಾರಿನಲ್ಲಿ ಇಳಿಯುತ್ತಾ ತಪ್ಪಿಸಿಕೊಳ್ಳುವುದು.

(ಊ) ಒಳಗೆ ಸಿಕ್ಕಿಹಾಕಿಕೊಂಡವರಿಗೆ ಎಚ್ಚರಿಕೆ ನೀಡುವುದು.

(ಋ) ಮನರಂಜನೆ ಗೃಹಗಳಲ್ಲಿ (Theater) ಬೆಂಕಿ ಅಪಘಾತದ ಬಗ್ಗೆ ಮುನ್ನೆಚ್ಚರಿಕೆ ನೀಡುವುದು.

(ಋ)ಕುದುರೆಗಳನ್ನು ರಕ್ಷಿಸುವುದು.

(ಎ) ಚರಚಿಕಿತ್ಸಾ ವಾಹನವನ್ನು ಕರೆಯುವುದು.

41. ಪುಷ್ಪ ತಜ್ಞೆ - Florist :

1. ಆಯ್ಕೆ ಮಾಡಿದ ವಾಸಿಸುವ ಸ್ಥಳದ ಸುತ್ತಲೂ ಇರುವ ಹೂಗಳು, ಬಳ್ಳಿಗಳು, ಅವುಗಳ ಸ್ವಭಾವಗಳನ್ನು ಅರಿಯುವುದು.
2. ಬೀಜ ಪ್ರಸಾರದ ವಿವಿಧ ರೀತಿಯನ್ನು ತಿಳಿಯುವುದು.
3. ಹನ್ನೆರಡು ಹೂಗಿಡಗಳ ಸ್ಥಳೀಯ ಹೆಸರು, ಅವುಗಳ ಲಕ್ಷಣಗಳು ಮತ್ತು ಉಪಯೋಗಗಳನ್ನು ತಿಳಿಯುವುದು.
4. ಪರೀಕ್ಷಕರ ಉಪಸ್ಥಿತಿಯಲ್ಲಿ, ಹೂ, ಎಲೆ ಮತ್ತು ಅಲಂಕಾರಿಕ ಎಲೆಗಳನ್ನು ಹೂದಾನಿಯಲ್ಲಿ ವಿವಿಧ ಮಾದರಿಯಲ್ಲಿ ಜೋಡಿಸುವುದು.
5. ಹೂವನ್ನು ಸಂರಕ್ಷಿಸಿ, ಸಾಗಿಸುವ ವಿಧಾನವನ್ನು ತಿಳಿಯುವುದು.

42. ಜಾನಪದ ನೃತ್ಯಗಾರ್ತಿ - Folk dancer :

1. ಕನಿಷ್ಠ 18 ತಿಂಗಳು ಜನಪದ ನೃತ್ಯದಲ್ಲಿ ತರಬೇತಿ.
2. ಜಿಲ್ಲಾ ಗೈಡ್ ಆಯುಕ್ತರು ಮಾನ್ಯ ಮಾಡಿದ ಆರು ಸ್ಥಳೀಯ ನೃತ್ಯಗಳು ಅಥವಾ ಅಧಿಕೃತ ಜಾನಪದ ತಜ್ಞರು ಗುರುತಿಸುವ 12 ನೃತ್ಯಗಳನ್ನು ಮಾಡುವುದು.

43. ನನ್ನ ಮುಕ್ತ ಇರುವಿಕೆ - Free Being Me

ಈ ಕೆಳಗಿನ ಚಟುವಟಿಕೆಗಳನ್ನು ಪೂರ್ಣಗೊಳಿಸಿ

1. ನನ್ನ ಮುಕ್ತ ಇರುವಿಕೆಯ ಬಗ್ಗೆ ತಿಳಿಯುವುದು ಮತ್ತು ಪ್ರತಿಜ್ಞೆ ತೆಗೆದುಕೊಳ್ಳುವುದು ಮತ್ತು ಈ ಚಟುವಟಿಕೆಯನ್ನು ಮನಃಪೂರ್ವಕವಾಗಿ ಒಪ್ಪಿ ಮುನ್ನಡೆಯುವುದು ಹಾಗೂ ನನ್ನನ್ನೇ ನಾನು ಅದ್ವಿತೀಯಳೆಂದು ಕಂಡುಕೊಳ್ಳುವುದು.
2. ನನ್ನ ಮುಕ್ತ ಇರುವಿಕೆ (FBM) ಚಟುವಟಿಕೆಗಳಲ್ಲಿ ಯಶಸ್ವಿಯಾಗಿ ಭಾಗವಹಿಸುವುದು ಮತ್ತು ವಿಶ್ವಸಂಸ್ಥೆ ಗರ್ಲ್ ಗೈಡ್ ಗರ್ಲ್ ಸ್ಕೌಟ್ ನಿಂದ (WAGGGS)ನ ನನ್ನ ಮುಕ್ತ ಇರುವಿಕೆಯ ಪದಕವನ್ನು ಗಳಿಸುವುದು.
3. ಕನಿಷ್ಠ 50 ಗೈಡ್ಸ್‌ಗಳಿಗೆ/ ನಿಮ್ಮ ಶಾಲೆಯ ವಿದ್ಯಾರ್ಥಿಗಳಿಗೆ / ನೆರೆಹೊರೆಯವರಿಗೆ ನನ್ನ ಮುಕ್ತ ಇರುವಿಕೆಯ ಬಗ್ಗೆ ಕಲಿಸಿರಿ ಮತ್ತು ಗೈಡ್ಸ್‌ಗಳ / ವಿದ್ಯಾರ್ಥಿಗಳ ಪಟ್ಟಿ ಮತ್ತು ವಿಳಾಸವನ್ನು ನಿಮ್ಮ ಗೈಡ್ ನಾಯಕಿಗೆ ನೀಡಿರಿ.

44. ಪ್ರಾಣಿಮಿತ್ರಳು - Friend to animal :

1. ಕೆಳಗಿನ ಪ್ರಾಣಿಗಳ ಆರೋಗ್ಯವನ್ನು ಕಾಪಾಡಲು ಅವುಗಳ ಸ್ವಭಾವ ಹಾಗು ಆಹಾರದ ಬಗ್ಗೆ ತಿಳಿದಿರುವುದು.



ಕುದುರೆ ಮತ್ತು ಕತ್ತೆ, ಕುರಿ ಮತ್ತು ಮೇಕೆ, ಬೆಕ್ಕು ಮತ್ತು ನಾಯಿ, ಕೋಣ ಮತ್ತು ಒಂಟೆ, ಹಸು ಮತ್ತು ಎಮ್ಮೆ ಮತ್ತು ಅವುಗಳನ್ನು ಪೋಷಿಸುವ ಮತ್ತು ಸಾಕುವ ಬಗ್ಗೆ ತಿಳಿಯುವುದು.

2. ಮೇಲಿನ ಪ್ರಾಣಿಗಳಲ್ಲಿ ಕಂಡುಬರುವ ಸಾಮಾನ್ಯ ಸಣ್ಣ ಪುಟ್ಟ ರೋಗಗಳ ಬಗ್ಗೆ ಮತ್ತು ಅವುಗಳಿಗೆ ನೀಡುವ ಸರಳ ಚಿಕಿತ್ಸೆಯನ್ನು ತಿಳಿಯುವುದು.

3. ಒಂದು ಸಾಕುಪ್ರಾಣಿಯನ್ನು ಆರೋಗ್ಯವಾಗಿ ಸುಖಕರವಾಗಿ ಇಡುವುದು.

4. ಪ್ರಾಣಿಗಳ ಅಪಘಾತದಲ್ಲಿ ತೆಗೆದುಕೊಳ್ಳುವ ಕ್ರಮಗಳ ಪ್ರಾಥಮಿಕ ಅರಿವನ್ನು ಪಡೆದಿರುವುದು.

5. ಹತ್ತಿರದ ಪ್ರಾಣಿ ಸಂರಕ್ಷಣಾ ಸಂಘಗಳ, ಪ್ರಾಣಿದಯಾ ಸಂಘಗಳ ವಿಳಾಸ ಮತ್ತು ದೂರವಾಣಿ ಸಂಖ್ಯೆ ತಿಳಿದಿರುವುದು. ಉದಾ. ಪ್ರಾಣಿ ಕ್ರೌರ್ಯ ತಡೆಗಟ್ಟುವ ಸಂಘ ಅಥವಾ ಬ್ಲೂ ಕ್ರಾಸ್ ಅಥವಾ ಪ್ರಾಣಿದಯಾ ಸಂಘ.

45. ಕ್ರೀಡಾ ನಾಯಕಿ - Games Leader :

1. ಕೆಳಗಿನ ನಾಲ್ಕು ಆಟಗಳ ನಿಯಮದ ಅರಿವು ಹೊಂದಿರುವುದು ಮತ್ತು ಸ್ವತಃ ಆಡುವುದು.

   ಭಾರತೀಯ ಹೊರಾಂಗಣ ಆಟ, ಹಗ್ಗದ ಆಟಗಳು, ವರ್ಗಾವಣೆ ಆಟ, ಜ್ಞಾನೇಂದ್ರಿಯ ತರಬೇತಿ ಆಟ, ಚೆಂಡಿನ ಆಟಗಳು, ವೈಯಕ್ತಿಕ ಆಟೋಟಗಳು.

2. ತಂಡ ಆಟದ ಸ್ಪರ್ಧೆಯನ್ನು ಆಡಿಸುವ ವಿಧಾನ, ವ್ಯವಸ್ಥೆ ಮತ್ತು ನಿಯಮಗಳನ್ನು ತಿಳಿದಿರುವುದು.

3. ಆಟದಲ್ಲಿ ಶಿಸ್ತು ಮತ್ತು ಕ್ರೀಡಾ ಸ್ಫೂರ್ತಿಯ (Sportline Spirit) ಮೌಲ್ಯವನ್ನು ತಿಳಿಯುವುದು.

46. ತೋಟಗಾರ್ತಿ - Gardener :



1. ಆರು ಚದುರ ಮೀಟರ್ ನೆಲದ ಅಳತೆ ಮಾಡಿ, ಆರು ವಿಧದ ತರಕಾರಿ ಅಥವಾ ಹೂವಿನ ಗಿಡಗಳನ್ನು ಬೀಜ ಅಥವಾ ಕಾಂಡದ ತುಂಡಿನ ಸಹಾಯದಿಂದ ಬೆಳೆಯುವುದು. ನಗರ ಪ್ರದೇಶಗಳಲ್ಲಿ ಕುಂಡ, ಮರದ ಪೆಟ್ಟಿಗೆ, ಪ್ಲಾಸ್ಟಿಕ್ ಬಕೆಟ್, ಪ್ಲಾಸ್ಟಿಕ್ ಚೀಲಗಳಲ್ಲಿ ಬೆಳೆಯುವುದು.
2. ಸಾಮಾನ್ಯ ತೋಟದಲ್ಲಿ ಬೆಳೆಯುವ ಹನ್ನೆರಡು ಗಿಡಗಳನ್ನು ಗುರುತಿಸಿ, ಕತ್ತರಿಸುವುದು, ಮೊಗ್ಗುವಿಕೆ ಮತ್ತು ಗೊಬ್ಬರ ಹಾಕುವ ಬಗ್ಗೆ ತಿಳಿಯುವುದು.
3. ಕೆಳಗಿನ ಯಾವುದಾದರೂ ಒಂದನ್ನು ಪ್ರದರ್ಶಿಸಿ ಕತ್ತರಿಸುವುದು, ಮೊಗ್ಗು ಮಾಡುವುದು ಮತ್ತು ಕಸಿ ಮಾಡುವುದು.
4. ಸಾರ್ವಜನಿಕ ಉದ್ಯಾನ ಅಥವಾ ನೆರೆಹೊರೆಯವರ ತೋಟವನ್ನು ದತ್ತು ತೆಗೆದುಕೊಂಡು ಕನಿಷ್ಟ ಎರಡು ತಿಂಗಳ ಕಾಲ ಬೆಳೆಸುವುದು.

ಸೂಚನೆ: ನಗರಗಳಲ್ಲಿ ತಾರಸಿ (Terrace Garden) ತೋಟಗಾರಿಕೆಯನ್ನು ಮಾಡುವುದು.

47. ಒಳ್ಳೆಯ ನೆರೆ - Good neighbourhood :

1. ತನ್ನ ರಾಜ್ಯ ಹೊರತುಪಡಿಸಿ ಕನಿಷ್ಟ ಮೂರು ನೆರೆಯ ರಾಜ್ಯಗಳ ಭೂಗೋಳ ಮತ್ತು ಇತಿಹಾಸ ಮೂಲದ ಸಾಮಾನ್ಯ ಜ್ಞಾನ ಪಡೆಯುವುದು.

2. ನೆರೆ ರಾಜ್ಯದ ಗೈಡ್‌ಗಳೊಡನೆ ಹಿಂದಿನ ಹನ್ನೆರಡು ತಿಂಗಳು ಸತತವಾಗಿ ಸಂಪರ್ಕ ಹೊಂದಿರುವುದು. ಮೂರು ದಿನಗಳ ಕಾಲ ಸತತವಾಗಿ ತನ್ನ ರಾಜ್ಯದಲ್ಲಿ, ನೆರೆ ರಾಜ್ಯದಲ್ಲಿ, ನೆರೆ ರಾಜ್ಯದ ಗೈಡುಗಳೊಂದಿಗೆ ಶಿಬಿರವಾಸ ಮಾಡುವುದು.

3. ಮೂರು ನೆರೆ ರಾಜ್ಯಗಳ–ಜನ, ಭಾಷೆ, ಸಂಸ್ಕೃತಿ, ಸಂಪ್ರದಾಯ ಮುಂತಾದವುಗಳನ್ನು ಚೆನ್ನಾಗಿ ತಿಳಿದುಕೊಂಡು ಮಾಹಿತಿ ಕೋಶವನ್ನು (Log Book) ಪರೀಕ್ಷಕರಿಗೆ ತೃಪ್ತಿಯಾಗುವಂತೆ ಸಿದ್ಧಪಡಿಸುವುದು.

48. ಅಂಗಸಾಧಕಿ - Gymnast :

(ಅಂಗಸಾಧನ ತರಬೇತಿಯನ್ನು ಪಡೆಯದೆ ಈ ಪದಕ ಕಾರ್ಯವನ್ನು ಮಾಡಬಾರದು)

(A) ಹದಿನಾರು ವರ್ಷ ಕೆಳಪಟ್ಟವರಿಗೆ :

1. ಒಳ್ಳೆಯ ಭಂಗಿಯಲ್ಲಿ ನಿಲ್ಲುವುದು, ನಡೆಯುವುದು ಮತ್ತು ಓಡುವುದು.

2. ಮುಕ್ತವಾಗಿ ನಿಂತುಮಾಡುವ ವ್ಯಾಯಾಮದ (Standing Exercise) ಸರಣಿ ಮಾಡಲು ಆಜ್ಞೆ ನೀಡುವುದು.

3. ಒಳ್ಳೆಯ ಭಂಗಿಯಲ್ಲಿ ಎತ್ತರಕ್ಕೆ ಒಂದು ಮೀಟರ್ ಜಿಗಿಯುವುದು..

4. ಒಳ್ಳೆಯ ಭಂಗಿಯಲ್ಲಿ ಸಮತೋಲನ ಅಡ್ಡಪಟ್ಟಿಯ ಮೇಲೆ ಮುಂದಕ್ಕೂ ಹಿಂದಕ್ಕೂ ಪಟ್ಟಿಯ ಕಿರಿದಾದ ತುದಿಯ ಕಡೆಗೆ ನಡೆಯುವ ಸಾಮರ್ಥ್ಯ ಹೊಂದಿರುವುದು.

5. ಒಳ್ಳೆಯ ಭಂಗಿಯಲ್ಲಿ ಕೆಳಗಿನ ಯಾವುದಾದರೂ ಮೂರನ್ನು ಮಾಡುವುದು.

(ಅ) ಕನಿಷ್ಟ ನಾಲ್ಕು ಮೀಟರ್ ಹಗ್ಗವನ್ನು ಹತ್ತುವುದು.

(ಆ) ಎರಡು ಹಗ್ಗ ಮತ್ತು ಒಂದು ಹಗ್ಗದ ಮೇಲೆ ಲಾಗ ಹಾಕುವುದು.

(ಇ) ಕೈಯನ್ನು ಗೋಡೆಗೆ ಆನಿಸಿ ನಿಲ್ಲುವುದು.

(ಈ) ಗೋಡೆಯ ಮೇಲಿನ ಪಟ್ಟಿ ಅಥವಾ ಯಾವುದಾದರೂ ಸುಧಾರಿತ ಸಲಕರಣೆಗಳಿಗೆ ತಲೆಕೆಳಗಾಗಿ ನೇತು ಬೀಳುವುದು.

6. ಒಳ್ಳೆಯ ಭಂಗಿಯಲ್ಲಿ ಕೆಳಗಿನ ಯಾವುದಾದರೂ ಮೂರನ್ನು ಮಾಡುವುದು:

(ಅ) ಎಡ ಮತ್ತು ಬಲಗೈಯ ಮೇಲೆ ಬಂಡಿ ಚಕ್ರ.

(ಆ) ಜಿಗಿದು ಪದ್ಮಾಸನಕ್ಕೆ ಬರುವುದು.

(ಇ) ಎತ್ತರದ ಬೆನ್ನು ಭಾಗದ ಮೇಲೆ ಕಪ್ಪೆ ಜಿಗಿತ.

(ಈ) ಪೆಟ್ಟಿಗೆಯಲ್ಲಿ ತೋಳ

(ಉ) ಎರಡು ಬಗೆ ಅಥವಾ ಪಟ್ಟಿಯ ಮೇಲೆ ಮೊಲ.

(B) ಹದಿನಾರು ವರ್ಷ ಮೇಲ್ಪಟ್ಟವರಿಗೆ

1. ಒಳ್ಳೆಯ ಭಂಗಿಯಲ್ಲಿ ನಿಲ್ಲುವುದು. ನಡೆಯುವುದು ಮತ್ತು ಓಡುವುದು.

2. ಶಾಲೆಯಲ್ಲಿ ಅಂಗಸಾಧನ ತರಗತಿ ಅಥವಾ ಮಾನ್ಯತೆ ಪಡೆದ ಅಂಗಸಾಧನ ಶಾಲೆಯಲ್ಲಿ ವಾರಕ್ಕೆ ಒಂದು ಬಾರಿಯಾದರೂ ಹಾಜರಾಗಿರುವುದು.

3. ಪರೀಕ್ಷಕರಿಂದ ಅನುಮೋದಿಸಲ್ಪಟ್ಟ, ಮುಕ್ತವಾಗಿ ನಿಂತು ಮಾಡುವ ವ್ಯಾಯಾಮಗಳ (Standing Exerxise) ಒಂದು ಆವೃತಿಯನ್ನು ಮಾಡುವುದು.

4. ಕೆಳಗಿನ ವ್ಯಾಯಾಮ ಆವೃತಿಯನ್ನು ಒಳ್ಳೆಯ ಭಂಗಿಯಲ್ಲಿ ಸಮತೋಲನ ಪಟ್ಟಿಯ ಕಿರಿದಾದ ಭಾಗದಲ್ಲಿ ಮಾಡುವುದು.

   (ಅ) ಪ್ರತಿ ಹೆಜ್ಜೆಗೂ ಚೆಂಡನ್ನು ಎಸೆದು ಜಿಗಿಯುತ್ತಾ ಮುಂದಕ್ಕೆ ನಡೆಯುವುದು.

   (ಆ) ಆಧಾರವಿಲ್ಲದೆ ಅಡ್ಡಡ್ಡಲಾಗಿ ನಡೆಯುವುದು.

   (ಇ) ತೋಳುಗಳನ್ನು ಎತ್ತಿ ಬಲಗಾಲನ್ನು ಪಕ್ಕಕ್ಕೆ ಚಾಚಿ ನಿಲ್ಲುವುದು; ನಂತರ ಒಂದು ಹೆಜ್ಜೆ ಮುಂದಿಟ್ಟು ತೋಳುಗಳನ್ನು ಎತ್ತಿ ಎಡಗಾಲನ್ನು ಚಾಚಿ ಸುಸ್ಥಿತಿಯಲ್ಲಿ ನಿಲ್ಲುವುದು.

   (ಈ) ಮೊಣಕಾಲನ್ನು ಪೂರ್ಣವಾಗಿ ಬಗ್ಗಿಸಿ ಪ್ರತಿ ಮೂರನೆ ಹೆಜ್ಜೆಗೆ.

5. ಕೆಳಗಿನ ಯಾವುದಾದರು ಒಂದನ್ನು ಮಾಡುವುದು:

   (ಅ) ಒಂದು ಹಗ್ಗದ ಮೇಲೆ ಐದು ಮೀಟರ್ ಹತ್ತುವುದು **ಅಥವಾ** ಪಟ್ಟಿಯ ಮೇಲೆ ಮೇಲಕ್ಕೆ ಕೆಳಕ್ಕೆ ನಡೆಯುವುದು **ಅಥವಾ** ಹಿಮ್ಮುಖವಾಗಿ ನಡೆಯುವುದು.

   (ಆ) ಹಸ್ತ ಆನಿಸಿ ಆಧಾರವಿಲ್ಲದೆ ನಿಲ್ಲುವುದು **ಅಥವಾ** ಪಟ್ಟಿ **ಅಥವಾ** ಸುಧಾರಿತ ಸಲಕರಣೆಯ ಮೇಲೆ **ಅಥವಾ** ಕೆಳಗೆ ಲಾಗಹಾಕಿ ನಿಲ್ಲುವುದು **ಅಥವಾ** ಎರಡು ಹಗ್ಗಗಳ ಮಧ್ಯೆ ತಲೆಕೆಳಗಾಗಿ ತೂಗು ಬೀಳುವುದು

49. ಗೃಹ ಕುಶಲಿ - Handy Woman :

1. ಹೊಲಿಗೆ ಯಂತ್ರವನ್ನು ಶುಚಿ ಮಾಡುವುದು ಅದಕ್ಕೆ ಎಣ್ಣೆ ಹಾಕುವುದು.
2. ಅನಿಲ ಬದಲಾಯಿಸುವುದು ಅಥವಾ ಅನಿಲ ದೀಪದ ಬತ್ತಿ ಬದಲಾಯಿಸುವುದು ಅಥವಾ ಸೀಮೆ ಎಣ್ಣೆ ಲಾಂದ್ರವನ್ನು ಶುಚಿಗೊಳಿಸಿ ಎಣ್ಣೆ ಹಾಕುವುದು.
3. ಅನಿಲ ಬೇಕಾದಾಗ, ನೀರು ನಿಂತುಹೋದಾಗ, ವಿದ್ಯುತ್ ನಂದಿದಾಗ ಮನೆಯಲ್ಲಿ ಅಥವಾ ಶಾಲೆಯಲ್ಲಿ ಅವುಗಳನ್ನು ಪುನಃ ಚಾಲನೆ ಮಾಡುವ ಬಿಂದು (Point) ತಿಳಿದಿರಬೇಕು.
4. ಕಿಟಕಿ, ಬಾಗಿಲು, ಮೇಜು ಮುಂತಾದ ಮರದ ವಸ್ತುಗಳನ್ನು ಶುಚಿಮಾಡಿ ಎರಡು ಪದರ ಬಣ್ಣ ಹಚ್ಚುವುದು.
5. ಗೋಡೆ ಅಥವಾ ನೆಲಕ್ಕೆ ಬಣ್ಣ ಹಚ್ಚುವುದು.
6. ಸಣ್ಣ ಮೇಜನ್ನು ದುರಸ್ತಿಗೊಳಿಸುವುದು ಮತ್ತು ಹಾಸಿಗೆಯ ಮೇಲೆ ಮೇಲುಹಾಸನ್ನು ಹಾಸುವುದು.
7. ಕೆಳಗಿನವುಗಳನ್ನು ದುರಸ್ತಿ ಮಾಡುವುದು.

   (ಅ) ಸೊಳ್ಳೆ ಪರದೆ.

   (ಆ) ಹಿಡಿಯನ್ನು ಹೆಣೆಯುವುದು ಮುರಿದ ಕಂಬವನ್ನು ಅಂಟಿಸುವುದು ಅಥವಾ ತುದಿಕ್ಕಟ್ಟನ್ನು ಕಟ್ಟುವುದು.

   (ಇ) ಹಗ್ಗವನ್ನು ಹೆಣೆಯುವುದು.

   (ಈ) ಮುರಿದ ಮರದ ಸಾಮಾನನ್ನು ಅಂಟಿಸುವುದು.

8. ಪರೀಕ್ಷಾ ಸಮಯದಲ್ಲಿ ಸಾಮಾನನ್ನು ಸಾಗಿಸಲು. ಕಟ್ಟನ್ನು ಅಂದವಾಗಿ ಕಟ್ಟುವುದು ಮತ್ತು ಸಾಣೆಕಲ್ಲಿನ ಮೇಲೆ ಅಥವಾ ತೇವದ ಕಲ್ಲಿನ ಮೆಲೆ ಕತ್ತಿಯನ್ನು ಚೂಪು ಮಾಡುವುದು.

9. ಕೆಳಗಿನವುಗಳಲ್ಲಿ ಯಾವುದಾದರೂ ನಾಲ್ಕನ್ನು ಮಾಡುವುದು.

(ಅ) ಸೊಳ್ಳೆ ಪರದೆ ಹಾಕಲು ಮಂಚಕ್ಕೆ ಚೌಕಟ್ಟನ್ನು ಮಾಡುವುದು.

(ಆ) ದುರಸ್ತಿ ಮಾಡಿ ಒಂದು ವಾರ ಕಾಲ ಉಪಯೋಗಿಸಿ ಪರೀಕ್ಷೆಗೆ ತರುವುದು.

(ಇ) ನೆಲಹಾಸು ಅಥವಾ ಚಾಪೆಯನ್ನು ಒಂದು ಗೋಡೆಯಿಂದ ಮತ್ತೊಂದು ಗೋಡೆಯವರೆಗೂ ಹಾಸುವುದು.

(ಈ) ಮುರಿದ ಮರದ ಸಾಮಾನನ್ನು ಅಂಟಿಸುವುದು.

(ಉ) ಬಾಗಿಲು ಅಥವಾ ಕೌದಿಯನ್ನು ದುರಸ್ತಿ ಮಾಡುವುದು. (Stoppers) ತಯಾರಿಸುವುದು ಅಥವಾ ಬದಲಾಯಿಸುವುದು.

(ಊ) ಒಂದು ಚಿತ್ರಪಟ ಚೌಕಟ್ಟು ಹಾಕುವುದು. (ಸಿದ್ಧಕಟ್ಟನ್ನು ಉಪಯೋಗಿಸಬಹುದು.)

(ಋ) ಮರದ ಸಾಮಾನಿನ ಕಲೆ ತೆಗೆದು ಹೊಳಪು ಕೊಡುವುದು.

(ೠ) ಸಾಮಾನು ತುಂಬುವ (Packing case) ಪೆಟ್ಟಿಗೆಗಳಿಂದ ಸಾಮಾನು ಇಡುವ ಗೂಡುಗಳನ್ನು (Cupboards) ಮಾಡುವುದು

(ಎ) ಫ್ಯೂಸ್ ತಂತಿ ಹಾಕಿ ದುರಸ್ತಿ ಮಾಡುವುದು; ಗೋಡೆಯ ಪ್ಲಗ್‌ಗೆ ಸೀಸದ ತಂತಿ ಜೋಡಿಸುವುದು.

(ಏ) ಹಳೆಯ ಕುರ್ಚಿಗೆ ಬೆತ್ತ ಹೆಣೆಯವುದು.

(ಐ) ಕಿಟಕಿಗೆ ಮುಚ್ಚಿಕೆ ಜೋಡಿಸುವುದು.

(ಒ) ಕುರ್ಚಿ ಅಥವಾ ಮೇಜಿನ ಮೇಲಿನ ಹಲಗೆ ದುರಸ್ತಿ ಮಾಡುವುದು.

(ಓ) ಬ್ಯಾಡ್‌ಮಿಂಟನ್ ಬಲೆ ಅಥವಾ ಬಲೆಯ ಉಯ್ಯಾಲೆ ಹೆಣೆಯುವುದು.

(ಔ) ಛಾವಣಿಗೆ ಸುಣ್ಣ ಹಚ್ಚುವುದು.

(ಅಂ) ಮೊಳೆ ಮತ್ತು ಸುತ್ತು ಮೊಳೆ ಉಪಯೋಗಿಸಿ ಮನೆಗೆ ಉಪಯುಕ್ತವಾದ ವಸ್ತುವನ್ನು ತಯಾರಿಸುವುದು.

(ಅಃ)ಒಂದು ಸೀಮೆಎಣ್ಣೆ ಒಲೆಯನ್ನು ಒಳ್ಳೆಯ ಸ್ಥಿತಿಯಲ್ಲಿ ಇಡುವುದು.

ಈ ಪದಕದ ಕೆಲಸಕ್ಕೆ ದೀರ್ಘ ಕಾಲಾವಕಾಶವನ್ನು ನೀಡಬಹುದು. ವಸ್ತುಗಳನ್ನು ಪರೀಕ್ಷೆಗಾಗಿ ಪ್ರದರ್ಶಿಸುವುದಕ್ಕಿಂತಲೂ ಮನೆಗೆ ಬೇಕಾಗುವುದನ್ನು ತಯಾರಿಸಿಕೊಳ್ಳುವುದು ಮತ್ತು ದುರಸ್ತಿ ಮಾಡಿಕೊಳ್ಳುವುದು ಈ ಪದಕದ ಉದ್ದೇಶವಾಗಿದೆ.

50. ಆರೋಗ್ಯ - Health :

1. ಕಣ್ಣು, ಕಿವಿ, ಮೂಗು ಇವುಗಳ ಆರೋಗ್ಯದ ಬಗ್ಗೆ ಮತ್ತು ತಿನ್ನುವ, ಕುಡಿಯುವ, ಉಸಿರಾಡುವ ನಿಯಮಗಳ ಬಗ್ಗೆ ತಿಳಿದು ಕೊಳ್ಳುವುದು.

2. ಶ್ವಾಸಕೋಶಗಳನ್ನು ಚರ್ಮವನ್ನು ಹಲ್ಲು ಗಳನ್ನು ಜೀರ್ಣಾಂಗಗಳನ್ನು ಸುಸ್ಥಿತಿಯಲ್ಲಿಡಬೇಕಾದ ಅವಶ್ಯಕತೆ ಮತ್ತು ಮಹತ್ವವನ್ನು ತಿಳಿದುಕೊಳ್ಳುವುದು.

3. ಅನಾರೋಗ್ಯಕರ ಊಟ, ತಂಬಾಕು, ಸೇವನೆ, ಮದ್ಯಪಾನದಿಂದ ಉಂಟಾಗುವ ಮಾರಕ ಅಪಾಯಗಳನ್ನು ತಿಳಿದುಕೊಳ್ಳುವುದು.

4. ಹಸನಾದ ಗಾಳಿ ಮತ್ತು ಮನೆಯುನ್ನು ಗಾಳಿ ಸಂಚಾರಕ್ಕೆ ಅನುಕೂಲವಾಗುವಂತೆ ಇಟ್ಟುಕೊಳ್ಳುವುದರ ಮೌಲ್ಯವನ್ನು ತಿಳಿದುಕೊಳ್ಳುವುದು.

51. ಸಸ್ಯತಜ್ಞ/ ಗಿಡಮೂಲಿಕೆ - Herbalist :

1. ಹನ್ನೆರಡು ಅಡಿಗೆಗೆ ಬಳಸುವ ಸಸ್ಯಗಳು, ಹನ್ನೆರಡು ಔಷಧಿಗೆ ಬಳಸುವ ಗಿಡಮೂಲಿಕೆ ಗಳನ್ನು ಸಂಗ್ರಹಿಸಿ ಅವುಗಳನ್ನು ಅಥವಾ ಅವುಗಳ ಭಾಗಗಳನ್ನು ಅಂಟಿಸಿ ಹೆಸರು ಗಳನ್ನು ಬರೆಯುಬೇಕು. ಅವುಗಳನ್ನು ಗುರುತಿಸಬೇಕು ಮತ್ತು ಅವುಗಳ ನಿರ್ದಿಷ್ಟ ಬಳಕೆಯನ್ನು ತಿಳಿದಿರಬೇಕು. ಬಳಸುವ ಎಲೆ, ಬೇರು ಮತ್ತು ತೊಗಟೆಗಳನ್ನು ಸಂಗ್ರಹಿಸಬೇಕು.

2. ಕನಿಷ್ಟ ಆರು ಗಿಡಗಳ ಔಷಧಿಯ ಮಹತ್ವವನ್ನು ತಿಳಿಯುವುದು.

52. ಪರಂಪರೆ - Heritage :

ಈ ಹಂತದಲ್ಲಿ ಗೈಡ್ ತಾನು ವಾಸಿಸುವ ರಾಜ್ಯದ ಬಗ್ಗೆ ಅಧ್ಯಯನ ಮಾಡಬೇಕು. ಇದರ ಮೂಲಕ ಭಾರತದ ಪರಂಪರೆಯ ವೈವಿಧ್ಯತೆಯ ಶ್ರೀಮಂತಿಕೆಯುನ್ನು ಕಾಣಬೇಕು. ಈ ಕುರಿತು ಚಿತ್ರ ಮತ್ತು ದೃಷ್ಟಾಂತಗಳ ಸಹಿತ ಮಾಹಿತಿಗಳನ್ನು ಹೊಂದಿರುವ ಪುಸ್ತಕಗಳನ್ನು ರಚಿಸಬೇಕು.

(i) ನಿಮ್ಮ ರಾಜ್ಯದ ನಿಸರ್ಗ ಪರಂಪರೆ, ಸಂಸ್ಕೃತಿ ಕುರಿತು ಹಾಡು ಪದ್ಯ, ಒಗಟು, ಗಾದೆ, ರಾಜ್ಯದ ಕಥೆಗಳನ್ನು ಸಂಗ್ರಹಿಸುವುದು, ಇದರ ಮೂಲಕ ರಾಜ್ಯ ಸಂಸ್ಕೃತಿಯು ರಾಷ್ಟ್ರದ ಸಂಸ್ಕೃತಿಗೆ ನೀಡಿರುವ ಕೊಡುಗೆಯನ್ನು ತಿಳಿಯುವುದು:

- ಋತುಗಳು ಮತ್ತು ಹಬ್ಬಗಳು, ಅರ್ಥ ಮತ್ತು ಸಂಕೇತ.
- ರಾಜ್ಯದ ವಿವಿಧ ಸಂಪ್ರದಾಯಗಳು, ವಿವಿಧ ಸಮುದಾಯ ಮತ್ತು ಗುಡ್ಡಗಾಡಿನ ಜನಾಂಗ.
- ನಿಮ್ಮ ಸ್ಥಳೀಯ ಭೌಗೋಳಿಕ ಪರಿಸರ, ಪ್ರಸಿದ್ಧ ಗುಡ್ಡ ಬೆಟ್ಟಗಳು ಕಾಡುಗಳು, ನದಿಗಳು.
- ಸಾಮಾನ್ಯ ಮರಗಳು.
- ಸಾಮಾನ್ಯ ಸಸ್ಯಗಳು ಮತ್ತು ಅದರ ಉಪಯೋಗಗಳು.
- ಸಾಮಾನ್ಯ ಪಕ್ಷಿಗಳು.
- ನಿಮ್ಮ ಪ್ರದೇಶದ ಪ್ರಾಣಿಗಳು.

(ii) ಭಾರತದ ಕಲೆ, ಸಾಹಿತ್ಯ ಐತಿಹಾಸಿಕ ಕಟ್ಟಡಗಳು, ಧಾರ್ಮಿಕ ಕೇಂದ್ರಗಳು, ಮನರಂಜನಾ ಕೇಂದ್ರಗಳು, ಮುಖ್ಯ ಸಾಹಿತಿಗಳು, ಆಹಾರ ಉಡುಪು – ಆಗ ಮತ್ತು ಈಗ.

(iii) ಪ್ರಾತ್ಯಕ್ಷಿಕ ಚಟುವಟಿಕೆಗಳು:

(ಅ) ನಿಮ್ಮ ಪ್ರದೇಶದಲ್ಲಿರುವ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿ, ಟಿಪ್ಪಣಿ ಬರೆಯುವುದು.

(ಆ) ನಿಮ್ಮ ಗ್ರಾಮ ಅಥವಾ ನಗರದ ಬಗೆಗೆ ದೃಷ್ಟಾಂತ ಸಹಿತ ಐತಿಹಾಸಿಕ ಮಾಹಿತಿಗಳ ಟಿಪ್ಪಣಿ ಬರೆಯುವುದು.

(ಇ) ನಿಮ್ಮ ಜಿಲ್ಲೆ / ನಗರ ವಸ್ತು ಸಂಗ್ರಹಾಲಯ, ಕಲಾಕೇಂದ್ರ, ಸಾಂಸ್ಕೃತಿಕ ಕೇಂದ್ರಗಳ ಪಟ್ಟಿಮಾಡುವುದು.

(ಈ) ನಿಮ್ಮ ನೆರೆಹೊರೆಯಲ್ಲಿರುವ ಸ್ಮಾರಕಗಳು ಮತ್ತು ಐತಿಹಾಸಿಕ ಸ್ಥಳಗಳಿಗೆ ಭೇಟಿನೀಡಿ ಅಲ್ಲಿನ ಸಮಸ್ಯೆಗಳು ಮತ್ತು ಅವುಗಳ ಸಂರಕ್ಷಣೆಯ ಪ್ರಕರಣಗಳನ್ನು ತಿಳಿಯುವುದು.

(ಉ) ನಿಮ್ಮ ಊರಿನಲ್ಲಿರುವ ಸ್ಮಾರಕ, ಧಾರ್ಮಿಕ ಕೇಂದ್ರ ಕೆರೆ, ದೇವಸ್ಥಾನ ಹಾಗೂ ವಿಶಿಷ್ಟ ಸ್ಥಳಗಳನ್ನು ದತ್ತು ತೆಗೆದುಕೊಂಡು ಒಂದು ತಿಂಗಳ ಕಾಲ ಅದರ ಸ್ವಚ್ಛತೆಯನ್ನು ಕಾಪಾಡುವುದು.

(ಊ) ಗೈಡಾಗಿ ಸಮುದಾಯ ಮತ್ತು ಸ್ಥಳೀಯ ಶಾಲೆಗಳಿಗೆ ಸೇವೆ ಸಲ್ಲಿಸುವುದು.

(ಋ) ಭಾರತೀಯ ಸಂಸ್ಕೃತಿಯ, ಕಲೆ ಮತ್ತು ಸ್ಮಾರಕಗಳ ಸಂರಕ್ಷಣೆಗಾಗಿ ಶ್ರಮಿಸುತ್ತಿರುವ ಸರಕಾರಿ ಮತ್ತು ಸರಕಾರೇತರ ಸಂಘ ಸಂಸ್ಥೆಗಳ ಪರಿಚಯಮಾಡಿಕೊಳ್ಳುವುದು.

53. ಹೊರ ಸಂಚಾರಕಿ – Hiker :

1. ಬಯಲಿನಲ್ಲಿ ಮೂರು ರೀತಿಯಲ್ಲಿ ಒಲೆಮಾಡಿ ಸೌದೆ ಜೋಡಿಸಿ ಬಳಸುವುದು. ವಿವಿಧ ರೀತಿಯ ಸೌದೆಗಳನ್ನು ಗುರುತಿಸುವುದು. ಅವುಗಳ ಉರಿಯುವ ಸಾಮರ್ಥ್ಯವನ್ನು ತಿಳಿಯುವುದು. ಉರಿಯುವ ಸಾಮರ್ಥ್ಯದ ತುಲನೆ ಮಾಡುವುದು.

2. ಎರಡು ತಿನಿಸುಗಳನ್ನು ಬಯಲಿನಲ್ಲಿ ಪಾತ್ರೆಗಳಿಲ್ಲದೆ ಮಾಡುವ ಪ್ರಾವೀಣ್ಯತೆಯನ್ನು ಪ್ರದರ್ಶಿಸುವುದು.

3. ಹೊರಸಂಚಾರಕ್ಕಾಗಿ ಪ್ರಥಮ ಚಿಕಿತ್ಸೆಯ ಸಂಚಿಯನ್ನು ತಯಾರಿಸಿ ಪರೀಕ್ಷೆಗೆ ತರುವುದು. ಅದರಲ್ಲಿನ ವಸ್ತುಗಳ ಆಯ್ಕೆಗೆ ಸಮರ್ಥನೆ ನೀಡುವುದು.

4. ಪರೀಕ್ಷೆಗೆ ಹಿಂದೆ ಮಾಡಿದ ಹೊರ ಸಂಚಾರದ ದಿನಚರಿಯ ವಿವರವನ್ನು, ಚಿತ್ರ, ನಕ್ಷೆ, ಟಿಪ್ಪಣಿಗಳ ಸಹಿತ ಬರೆದು ತರುವುದು.

5. ಬಯಲಿನಲ್ಲಿ ಬೆಂಕಿ ಹಚ್ಚುವಾಗ ವಹಿಸಬೇಕಾದ ಎಚ್ಚರಿಕೆ, ಅತಿಕ್ರಮ ಪ್ರವೇಶವನ್ನು ಮಾಡುವಾಗ ಪ್ರಯೋಗಿಸುವಾಗ ಹಾಗೂ ಬೆಳೆಗಳ ಮೂಲಕ ಹಾದು ಹೋಗುವಾಗ ನಿರ್ವಹಿಸಬೇಕಾದ ಜವಾಬ್ದಾರಿಯ ಬಗ್ಗೆ ತಿಳಿದುಕೊಳ್ಳುವುದು.

6. ದಾರಿಯಲ್ಲಿ ಹೋಗುವಾಗ ಆಗಂತುಕ, ಕಳೆದುಹೋದ ಮಗು, ಹಸಿದು ಆಪತ್ತಿಗೆ ಸಿಕ್ಕಿದ ಪ್ರಾಣಿ – ಇವುಗಳನ್ನು ನೋಡಿದಾಗ ಏನು ಮಾಡುವಿರಿ ಎಂದು ಪರೀಕ್ಷಕರಿಗೆ ಹೇಳುವ ಸಾಮರ್ಥ್ಯವನ್ನು ಹೊಂದಿರುವುದು.

7. ಈ ಕೆಳಗಿನ ಸನ್ನಿವೇಶಗಳನ್ನು ಹೇಗೆ ಎದುರಿಸುವಿರಿ?

(ಅ) ಮಂಜಿನಲ್ಲಿ ಸಿಕ್ಕಿದಾಗ

(ಆ) ಆನೆಕಲ್ಲು ಮಳೆಯಲ್ಲಿ ಸಿಕ್ಕಿದಾಗ.

(ಇ) ನೆರೆಯ ಕಾಡಿನಲ್ಲಿ ದಾರಿ ತಪ್ಪಿದಾಗ.

(ಈ) ಕಾಡಿನ ಬೆಂಕಿಯಲ್ಲಿ ಸಿಕ್ಕಿಬಿದ್ದಾಗ.

8. ನಡಿಗೆಯಲ್ಲಿ 20 ಕಿ.ಮೀ. ಅಥವಾ ಸೈಕಲ್‌ನಲ್ಲಿ 50 ಕಿ.ಮೀ. ದೂರದ ಹೊರಸಂಚಾರ ಮಾಡಿ ವರದಿಯನ್ನು ಸಲ್ಲಿಸುವುದು.

ಸೂಚನೆ: ಗೈಡಳ ಸಾಮಾನಿನ ಸಂಚಿ ಮತ್ತು ಅದರಲ್ಲಿನ ಸಾಮಾನಿನ ಜೋಡಣೆಗಳನ್ನು ಪರಿಗಣಿಸಲಾಗುವುದು. ಪರೀಕ್ಷೆಗೆ ಒಳಪಡುವ ಗೈಡು ಒಂದು ಅಷ್ಟಕದಲ್ಲಿ ಮಾತ್ರ ಹೊರಸಂಚಾರ ಕೈಗೊಳ್ಳುವುದು. ಪರೀಕ್ಷಕರು ಜಿಲ್ಲಾ ಆಯುಕ್ತರಿಂದ ನೇಮಕವಾಗಿರುತ್ತಾರೆ.

54. ಗೃಹಶಿಲ್ಪಿ - Home Maker :

1. ಬೇಗ ಏಳುವುದು, ಹಾಸಿಗೆ ಸರಿ ಮಾಡುವುದು, ಒಲೆ ಹತ್ತಿಸುವುದು, ಉಪಹಾರ ಸಿದ್ಧ ಮಾಡಿ ಮನೆಯವರೆಲ್ಲರಿಗೂ ಕೊಡುವುದು. ತನ್ನ ಬೂಟನ್ನು ಮತ್ತು ಮನೆಯನ್ನು ಶುಚಿಗೊಳಿಸುವುದು.
2. ಒಲೆಯ ಅಂಕಣ ಅಥವಾ ಅನಿಲ ಒಲೆಯನ್ನು ಶುಚಿಮಾಡುವುದು.
3. ಅಡಿಗೆ ಪಾತ್ರೆಗಳನ್ನು ಸ್ವಚ್ಛಗೊಳಿಸುವುದು ಮತ್ತು ಹಾಲಿನ ಪಾತ್ರೆಯ ಸ್ವಚ್ಛತೆಗೆ ವಿಶೇಷಗಮನ ನೀಡುವುದು. ಅಡಿಗೆ ಮನೆಯನ್ನು ಸ್ವಚ್ಛ ಮಾಡುವುದು.
4. ಸ್ವಂತವಾಗಿ ತಯಾರು ಮಾಡಿರುವ ಜಾಮ್ ಅಥವಾ ಉಪ್ಪಿನಕಾಯಿ ಅಥವಾ ಚಟ್ನಿಪುಡಿಯನ್ನು ಪರೀಕ್ಷೆಗಾಗಿ ತರುವುದು.
5. ಮನೆಗೆ ಅವಶ್ಯಕವಾದ ವಸ್ತುಗಳನ್ನು ತೃಪ್ತಿಕರವಾಗಿ ಖರೀದಿಸುವುದು.
6. ಸಾಮಾನಿನ ಪೆಟ್ಟಿಗೆಯನ್ನು ತೆಗೆಯುವುದು, ಪರದೆಗಳನ್ನು ಹಾಕುವುದು, ಹೂಗಳನ್ನು ಅಲಂಕಾರಿಕವಾಗಿ ಜೋಡಿಸುವುದು.
7. ಪೋಷಕರಿಂದ ಗೈಡ್ ತಾನು ಮನೆಯಲ್ಲಿ ಅಚ್ಚುಕಟ್ಟಾಗಿದ್ದೇನೆಂದೂ ವಿಧೇಯಳಾಗಿದ್ದೇನೆಂದೂ ಮತ್ತು ಸಹಾಯಕಳಾಗಿದ್ದೇನೆ ಎಂದು ಪ್ರಮಾಣ ಪತ್ರ ತರುವುದು.

55. ಸತ್ಕಾರಕುಶಲಿ - Hostess :

1. ಅತಿಥಿಯನ್ನು ಸ್ವಾಗತಿಸುವುದು ಪರಿಚಯಿಸುವುದು ಮತ್ತು ವಿದಾಯ ಹೇಳುವುದು.
2. ಆಹ್ವಾನ ಪತ್ರಿಕೆ ಬರೆಯುವುದು.

   (ಅ) ಅತಿಥಿಯನ್ನು ತಂಗಲು ಆಹ್ವಾನಿಸುವುದು.

   (ಆ) ಭೋಜನಕೂಟಕ್ಕೆ ಆಹ್ವಾನಿಸುವುದು.

   (ಇ) ಆಹ್ವಾನಿತ ಕಾರ್ಯಕ್ರಮಕ್ಕೆ ಬರಲು ಸಾಧ್ಯವಿಲ್ಲವೆಂದು ಪತ್ರ ಬರೆಯುವುದು.

   (ಈ) ಆಹ್ವಾನವನ್ನು ಸ್ವೀಕರಿಸಿ ಪತ್ರ ಬರೆಯುವುದು.

   (ಉ) ಆಹ್ವಾನಿಸಿದ್ದಕ್ಕಾಗಿ ವಂದನಾ ಪತ್ರ ಬರೆಯುವದು.
3. ಅತಿಥಿಗಳಿಗೆ ಮನರಂಜನೆ ನೀಡುವಾಗ ಮುಖ್ಯ ಅಂಶಗಳನ್ನು ತಿಳಿಸುವುದು.
4. ಅತಿಥಿಗಳಿಗೆ ಆಗಮನವನ್ನು ಪ್ರಕಟಿಸುವುದು ಮತ್ತು ಸಾಂಪ್ರದಾಯಿಕವಾಗಿ ಉಣಬಡಿಸುವುದು.

   ಒಂದು ಅಷ್ಟಕ ಕೂಟದ ಯೋಜನೆ ಹಾಕಿ, ಆಹ್ವಾನ ಪತ್ರಿಕೆಯನ್ನು ಸಿದ್ಧಗೊಳಿಸಿ, ಸ್ಥಳವನ್ನು ವ್ಯವಸ್ಥೆಮಾಡಿ, ತಿನಿಸನ್ನು ಸಿದ್ಧಗೊಳಿಸಿ, ಮನರಂಜನೆ ನೀಡುವುದು ಮತ್ತು ಉಪಯೋಗಿಸಿದ ಕಾಗದ ಕಸಗಳನ್ನು ಹಾಕಲು ಸ್ಥಳವ್ಯವಸ್ಥೆ ಮಾಡುವುದು.

56. ದುಭಾಷಿ - Interpreter :

1. ಗೈಡ್ ಒಂದಕ್ಕಿಂತ ಹೆಚ್ಚು ಭಾಷೆ ಬಲ್ಲವಳಾಗಿರಬೇಕು ಭಾಷೆ ಗೊತ್ತಿಲ್ಲದವರಿಗೆ ತನಗೆ ಗೊತ್ತಿರುವ ಭಾಷಾಂತರವನ್ನು ಮಾಡಿ ತಿಳಿಸಬೇಕು. ಪರೀಕ್ಷಕರಿಗೆ ಸರಳ ವಿಷಯದ ಮೇಲೆ ಪತ್ರವನ್ನು ಬರೆದುಕೊಡಬೇಕು. ವೃತ್ತಪತ್ರಿಕೆ ಅಥವಾ ಪುಸ್ತಕದಿಂದ ಒಂದು ಪರಿಚ್ಛೇದವನ್ನು ತನ್ನ ಭಾಷೆಯಲ್ಲದ, ತನಗೆ ತಿಳಿದಿರುವ ಬೇರೆ ಭಾಷೆಗೆ ಅಥವಾ ಎಸ್‌ಪರಾಂಟೊಗೆ (ವಿಶ್ವಭಾಷೆ) ಭಾಷಾಂತರಿಸುವುದು.
2. ನಾಲ್ಕು ಹೊರ ರಾಷ್ಟ್ರದ ಗರ್ಲ್‌ಗೈಡ್ ಮತ್ತು ಗರ್ಲ್ ಸ್ಕೌಟ್ ಸಮವಸ್ತ್ರಗಳ ಬಗ್ಗೆ ತಿಳಿದುಕೊಳ್ಳುವುದು.

57. ಕಿವುಡರಿಗೆ ದುಬಾಷಿ- Interpreter to deaf :

1. ಒಂದು ನಿಮಿಷಕ್ಕೆ 20 ಅಕ್ಷರಗಳ ಬೆರಳ ಭಾಷೆಯ ಅಕ್ಷರಗಳನ್ನು ಓದುವುದು.
2. ಒಂದು ನಿಮಿಷಕ್ಕೆ 30 ಅಕ್ಷರದಂತೆ ಬೆರಳ ಅಕ್ಷರಗಳನ್ನು ಮಾಡಿ ತೋರಿಸುವುದು.

58. ಪತ್ರಿಕೋದ್ಯಮಿ - Journalist :

1. ದಳ ಅಥವಾ ಗುಂಪಿನ ಚಟುವಟಿಕೆಗಳ ಲಿಖಿತ ವರದಿಯನ್ನು ಸಿದ್ಧಗೊಳಿಸುವುದು.
2. ಕೆಳಗಿನ ಘಟನೆಗಳಲ್ಲಿ ಯಾವುದಾದರೂ ಒಂದರ ವರದಿಯನ್ನು ಸಿದ್ಧಪಡಿಸುವುದು - ಉಪನ್ಯಾಸ ಅಥವಾ ಭಾಷಣ, ಚರ್ಚೆ ಅಥವಾ ವಿಚಾರ ವಿನಿಮಯ, ಕೂಟ ಅಥವಾ ಮೇಳ.

3. ಕನಿಷ್ಟ ಆರು ಸಂದರ್ಭಗಳಲ್ಲಿ ಲೇಖಕಳಾಗಿ ಕಾರ್ಯ ನಿರ್ವಹಿಸುವುದು.

4. ಪರೀಕ್ಷಕರಿಗೆ ತೃಪ್ತಿಯಾಗುವಂತೆ ಯಾವುದಾದರೂ ಉಪನ್ಯಾಸದ ವರದಿಯನ್ನು ಸಲ್ಲಿಸುವುದು.

5. ಒಂದು ಪತ್ರಿಕೆ ಅಥವಾ ಮಾಸಿಕದ ಸಂಪಾದಕೀಯ ವರ್ಗದಲ್ಲಿ ಕನಿಷ್ಟ ಆರು ತಿಂಗಳು ಸೇವೆ ಸಲ್ಲಿಸುವುದು.

6. ಮುದ್ರಕರ ತಿದ್ದುಪಡಿ ಸಂಕೇತಗಳನ್ನು ಕಲಿಯುವುದು; ಅವಶ್ಯವಾದಾಗ ಬಳಸುವುದು.

7. ದಳ ಅಥವಾ ಒಂದು ಗುಂಪಿನ ಮುಖ್ಯ ಕಾರ್ಯಕ್ರಮ ಕುರಿತು ವರದಿ ಬರೆದು ಪತ್ರಿಕೆಯಲ್ಲಿ ಪ್ರಕಟಿಸುವುದು.

59. ಹೆಣಿಗೆ ಕುಶಲಿ - Knitter :

1. ಒಂದು ಜೊತೆ ಉಣ್ಣೆ ಕಾಲು ಚೀಲವನ್ನು ಹೆಣಿದು ತರುವುದು.



2. ಮತ್ತೊಂದು ಈ ಕೆಳಗಿನ ಉಪಯುಕ್ತ ಉಣ್ಣೆಯ ಉಡುಪನ್ನು ತಾನೇ ಹೆಣಿದು ತರುವುದು.

   ಟೋಪಿ, ಕೈಚೀಲ, ಮಗುವಿನ ಬೂಟ್ಸ್, ಮನೆ ಬಳಕೆ ಚಪ್ಪಲಿ ಸ್ವೆಟರ್, ಕುಪ್ಪಸ.

3. ಮುದ್ರಿತ ಮಾದರಿಯನ್ನು ಅನುಸರಿಸಿ ಹೆಣಿಗೆ ಹಾಕಿ ತೋರಿಸುವುದು.

60. ಲೇಸ್ ಕುಶಲಿ - Lace maker :

1. ಕೆಳಗಿನವುಗಳ ಹೆಸರನ್ನು ತಿಳಿದು ವಿವರಣೆ ನೀಡಬೇಕು. ನಾಲ್ಕು ವಿಧದ ಹೆಣಿಗೆಗಳು ಈ ರೀತಿ ಇವೆ. Torchon, Irish, Crochet Brussels point, Flet, Ground Point, Carickamacross Malines, etc.,

2. ಒಂದು ಹರಿದ ಲೇಸನ್ನು ಅಂದವಾಗಿ ಸರಿಪಡಿಸುವುದು.

3. ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಿಭಾಗದ ಲೇಸನ್ನು ಹಾಕಿ. 'ಎ' ಇಂದ 'ಎಫ್' ವರೆಗೆ ಒಂದನೆಯ ವಿಭಾಗ. 'ಜಿ' ಇಂದ 'ಐ' ವರೆಗೆ ಎರಡನೆಯ ವಿಭಾಗ. ಹೆಣೆಯಲು ಹತ್ತಿ ದಾರವನ್ನು ಬಳಸಬೇಡಿ; Flax ದಾರವನ್ನು ಬಳಸಿ.

   a) **Bobbin or pillow lace :** Be able to manage at least thirty six bobbins and make fire different stitches. and show specimen, including insertions and edging made unaided.

   b) **Needle point lace :** Be able to make eight varieties of stitches, and including bars, nicots turtle. show a piece, the work being even and beautiful.

   c) **Filet or darnednet lace :** Be able to make own net and vary design, Show insertion of several squares.

   d) **Tambour lace :** Know the tambour stitch and be able to work in several colours, or an alternative, do a picec of "needle run" with at least eight varieties stitch in the net.

e) **Applieque on net :** Carrickamacross, Applieque, Duchess, etc., Show a piece of either style, with lawn or spring applied (the spring to be self made)

f) **Tatting lace :** To know single and double thread tatting both or insertion and lace, be able to manage the threads to separate shutting at a time.

g) **Knitted lace :** Be able to copy a simple design or follow instruction both in edging and insertion.

h) **Crochet :** Be able to copy a simple design from instructions or specimen. Show insertion and corner made unaided: one piece to Irish contain rosettes.

i) **Netting lace :** Work Two doyleys with varying width of mesh and different designs. such as shell or pointed edges.

ಸೂಚನೆ: ಹೊಲಿಗೆಗಳಿಗೆ ತತ್ಸಮ ಪದಗಳು ದೊರೆಯದ ಕಾರಣ ಭಾಷಾಂತರಿಸಲಾಗಿಲ್ಲ.

61. ಮಡಿವಾಳಗಿತ್ತಿ - Laundress :

1. ಈ ಕೆಳಗಿನವುಗಳನ್ನು ಒಗೆದು ಅಚ್ಚುಕಟ್ಟಾಗಿ ಮಡಚಿ ಪರೀಕ್ಷೆಗೆ ತರುವುದು.

   (ಅ) ಒಂದು ಬಿಳಿ ಹತ್ತಿ ಉಡುಪು.

   (ಆ) ಒಂದು ಬಣ್ಣದ ಹತ್ತಿ ಉಡುಪು.

   (ಇ) ಒಂದು ಉಣ್ಣೆಯ ಉಡುಪು ಅಥವಾ ಒಂದು ಜೊತೆ ಕಾಲು ಚೀಲ.

   (ಈ) ಕುಪ್ಪಸ ಅಥವಾ ಮಕ್ಕಳ ಅಂಗಿ, ನಯವಾದ ವಸ್ತ್ರಕ್ಕೆ ಆದ್ಯತೆ ನೀಡುವುದು, ತೋಳುಗಳನ್ನು ಮಡಚುವುದು.

2. ಕಲೆಯನ್ನು ತೆಗೆಯುವುದು ಮತ್ತು ಬಿಸಿನೀರಿನಲ್ಲಿ ಗಂಜಿ ಮಾಡಿ ಹಾಕುವುದು.

ಸೂಚನೆ: ಇವುಗಳಲ್ಲಿ ಕೆಲವನ್ನು ಪರೀಕ್ಷಕರ ಮುಂದೆ ಪ್ರತ್ಯಕ್ಷವಾಗಿ ಪ್ರದರ್ಶಿಸುವುದು.

62. ಚರ್ಮ ಕುಶಲಿ - Leather worker :

1. ಹರಿದುಹೋದ ಚರ್ಮದ ಪಾದರಕ್ಷೆಗಳನ್ನು ದುರಸ್ತಿ ಮಾಡುವುದು, ಪಾದರಕ್ಷೆಗಳಿಗೆ ಅಟ್ಟೆ ಕಟ್ಟುವುದು ಅಥವಾ ಮೊಳೆ ಹೊಡೆಯುವುದು ಅಥವಾ ಹೊಲಿಯುವುದು.

ಅಥವಾ

2. ಪಾದರಕ್ಷೆಯನ್ನು ಅಲಂಕರಿಸುವುದು, ವಿವಿಧ ರೀತಿಯ ಚರ್ಮದ ಬಗ್ಗೆ ತಿಳಿದುಕೊಳ್ಳುವುದು, ಕುದುರೆ ಲಾಳ, ಜೀನು ಮತ್ತು ರಿಕಾಬು ಭಾಗಗಳನ್ನು ತಿಳಿಯುವುದು. (harness & stirrup) ದುರಸ್ತಿ ಮಾಡುವುದು.

ಅಥವಾ

3. ಚರ್ಮದ ಅಲಂಕರಣ ಕಾರ್ಯಮಾಡುವುದು.

ಚರ್ಮ ಕುಶಲ ಕಲೆಗೆ ಬೇಕಾದ ವಿವಿಧ ಬಗೆಯ ಚರ್ಮಗಳ ಮತ್ತು ಸಲಕರಣೆಗಳ ಬಗ್ಗೆ ತಿಳಿಯುವುದು ಮತ್ತು ಉಪಯೋಗಿಸುವುದು. ಚರ್ಮಕ್ಕೆ ಹಾಕುವ ಬಣ್ಣಗಳನ್ನು ಮಿಶ್ರಮಾಡಿ, ಕೈಚೀಲ, ಸಂಚಿಗಳ ಮೇಲೆ ಅಲಂಕರಿಸುವುದು

63. ಕುಷ್ಠ ನಿಯಂತ್ರಣ - Leprosy Control :

1. ಕುಷ್ಠರೋಗವನ್ನು ಗುಣಪಡಿಸಬಹುದು ಎಂಬುದನ್ನು ಶ್ರವಣ ದೃಶ್ಯ ಸಾಧನಗಳ ಮೂಲಕ ಪ್ರಸಾರ ಮಾಡುವುದು.
2. ಕುಷ್ಠತಜ್ಞರು ರಾಷ್ಟ್ರೀಯ ಕುಷ್ಠನಿವಾರಣಾ ಕಾರ್ಯಕರ್ತರು ಮತ್ತು ಸ್ವಯಂ ಸೇವಕರನ್ನು ಹಾಗೂ ಸಹಾಯಕ ಸಂಪನ್ಮೂಲಗಳನ್ನು ಗುರುತಿಸುವುದು.
3. ನಿಮ್ಮ ಗ್ರಾಮ/ಬಡಾವಣೆ/ಶಾಲೆಗಳಲ್ಲಿ ಕುಷ್ಠ ತಪಾಸಣಾ ಕಾರ್ಯಕ್ರಮವನ್ನು ಏರ್ಪಡಿಸುವುದು.
4. ಕುಷ್ಠರೋಗದ ಸಮಸ್ಯೆಯ ಬಗ್ಗೆ ಸಮುದಾಯದ ಮನೋಭಾವ ವನ್ನು ಬದಲಾಯಿಸುವಂತೆ ಶಿಕ್ಷಣ ನೀಡುವುದು.
5. ನಿಮ್ಮ ಬಡಾವಣೆಯಲ್ಲಿರುವ ಕುಷ್ಠರೋಗ ತಜ್ಞರು ಮತ್ತು ವೈದ್ಯಕೀಯ ತಜ್ಞರುಗಳ ಪಟ್ಟಿಮಾಡಿಕೊಳ್ಳುವುದು.

64. ಸಾಕ್ಷರತೆ - Literacy



1. ವಯಸ್ಕರ ಸಾಕ್ಷರತಾ ಆಂದೋಲನವನ್ನು ನಿಮ್ಮ ಗ್ರಾಮ/ ಕೊಳಚೆ ಪ್ರದೇಶ/ ಬಡಾವಣೆ ಯಲ್ಲಿ ಏರ್ಪಡಿಸುವುದು.
2. ವಯಸ್ಕರಿಗೆ / ಶಾಲೆ ಬಿಟ್ಟವರಿಗೆ ರಾತ್ರಿ ಶಾಲೆಯನ್ನು ಪ್ರಾರಂಭಿಸಲು ಸಹಾಯ ಮಾಡುವುದು.

3. ಹತ್ತು ಅನಕ್ಷರಸ್ಥರಿಗೆ ಓದುವುದನ್ನು, ಬರೆಯುವುದನ್ನು ಮತ್ತು ಲೆಕ್ಕವನ್ನು ಕಲಿಸುವುದು ಅಥವಾ ಹತ್ತು ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವುದು.

4. ವಯಸ್ಕರ ಸಾಕ್ಷರತಾ ಆಂದೋಲನಕ್ಕೆ ಪ್ರೇರಣೆ ನೀಡುವ ಕನಿಷ್ಠ ಮೂರು ಭಿತ್ತಿಚಿತ್ರಗಳನ್ನು ತಯಾರಿಸುವುದು.

5. ಸ್ವಂತ ತಯಾರಿಸಿದ ಭಿತ್ತಿಚಿತ್ರಗಳ ಜೊತೆಗೆ ಸರ್ಕಾರ ಪ್ರಕಟಿಸಿದ ಮತ್ತು ಸರ್ಕಾರೇತರ ಸಂಸ್ಥೆಗಳು ಪ್ರಕಟಿಸಿದ ಭಿತ್ತಿಚಿತ್ರಗಳ ಪ್ರದರ್ಶನ ಏರ್ಪಡಿಸುವುದು.

65. ಪವನಶಾಸ್ತ್ರಜ್ಞ - Meteorologist :

1. (ಅ) ಒಂದು ಸರಳ ಮಾಪಕವನ್ನು ತಯಾರಿಸುವುದು.

   (ಆ) ವಾಯು ಗಿರಿಗಿಟ್ಲೆ ಮಾಡಿ ಗಾಳಿಯ ವೇಗವನ್ನು ಅಂದಾಜಿಸುವುದು.

   (ಇ) ಉಷ್ಣತಾಮಾಪಿಗೆ ಒಂದು ಗೂಡುಮಾಡಿ ಅದರಲ್ಲಿ ಉಷ್ಣತಾಮಾಪಿಯನ್ನು ಇಟ್ಟು ಗಾಳಿಯ ಉಷ್ಣತೆ ಮತ್ತು ತೇವಾಂಶವನ್ನು ಅಳತೆಮಾಡಲು ಸಿದ್ಧಮಾಡುವುದು.

   (ಈ) ಒಂದು ತಿಂಗಳ ಕಾಲ ಹವಾಮಾನವನ್ನು ಅಳತೆಮಾಡಿ ಅದರ ದಿನಚರಿ ಬರೆಯುವುದು.

2. ಸ್ಥಳೀಯ ಹವಾಮಾನ ಕುರಿತು ಒಂದು ಲೇಖನ ಬರೆಯುವುದು.

3. ಕೆಳಗಿನ ವಿಧಾನಗಳನ್ನು ಅನುಸರಿಸಿ ಹವಾ ಮುನ್ಸೂಚನೆ ನೀಡುವುದರಲ್ಲಿ ನಿಮ್ಮ ಸಾಮರ್ಥ್ಯ.

   (ಅ) ಉಷ್ಣತೆಯ ಮುನ್ಸೂಚನೆ, ಮೋಡ, ಸಾಮಾನ್ಯ ಹವಾಮಾನ, ವಾಯು ವೇಗ ಮತ್ತು ದಿಕ್ಕಿನ ಮುನ್ಸೂಚನೆ ನೀಡುವುದು.

   (ಆ) ವಾಯು ಭಾರಮಾಪಕವನ್ನು ಉಪಯೋಗಿಸಿ ಹವಾಮಾನದ ಮುನ್ಸೂಚನೆ ನೀಡುವುದು.

   (ಇ) ಮೋಡದ ಚಲನೆ ಮತ್ತು ವಿಧಗಳಿಂದ ಮುನ್ಸೂಚನೆ ನೀಡುವುದು.

   (ಈ) ಹವಾಮಾನದ ಸಾಮಾನ್ಯ ಜ್ಞಾನದ ಆಧಾರದ ಮೇಲೆ ಅಲ್ಪಕಾಲಿಕ ಮುನ್ಸೂಚನೆ ನೀಡುವುದು.

   (ಉ) ಹವಾಮಾನದ ಸಾಮಾನ್ಯ ಜ್ಞಾನದ ಆಧಾರದ ಮೇಲೆ ಅಭ್ಯಾಸ ಮಾಡುತ್ತಾ ಮುನ್ಸೂಚಿಸುವ ಅವಧಿಯನ್ನು ವಿಸ್ತರಿಸಿ ಕೊಳ್ಳುವುದು.

66. ಸಂಗೀತಗಾರ್ತಿ - Musician :



1. ರಾಷ್ಟ್ರಗೀತೆಯನ್ನು ನುಡಿಸಿ

   ಸೂಚನೆ: ಪಿಯಾನೊ, ವೈಯಲಿನ್ ಸಿಲೋ, ವೀಣಾ, ಗೋಟುವಾದ್ಯ ಸಿತಾರ್ ಕೀಬೋರ್ಡ್ ಅಥವಾ ಕೊಳಲನ್ನು ಉಪಯೋಗಿಸಬಹುದು.

2. ಈ ಕೆಳಗಿನ ರಾಗಗಳಲ್ಲಿ ಯಾವುದಾದರೂ ಒಂದರ ಸ್ವರಗಳನ್ನು ನುಡಿಸಿ

ಕರ್ನಾಟಕ

ಹನುಮ ತೋಡಿ	ಹರಿಕಾಂಬೋಜಿ
ಮಾಯಾಮಾಳವಗೌಳ	ಮೇಚ ಕಲ್ಯಾಣಿ
ನಟ ಭೈರವಿ	ಧೀರಶಂಕರಾಭರಣಂ

ಅಥವಾ

ಹಿಂದೂಸ್ತಾನಿ

ಭೂಪಾಲಿ – ತೀನ್ ತಾಲ್‌ನಲ್ಲಿ

ಖಮಾಚ್ – ಝುಂಪ್ ತಾಲ್‌ನಲ್ಲಿ

ಭೈರವಿ – ದಾದ್ರ ತಾಲ್‌ನಲ್ಲಿ

ಅಥವಾ

ಕೀ ಬೋರ್ಡ್‌ನಲ್ಲಿ ಮುಖ್ಯ ಮತ್ತು ಪೂರಕ ಸ್ಕೇಲ್ ಮತ್ತು Arpeggios ನುಡಿಸಬೇಕು.

3. ಶಂಕರಾಭರಣ ಆದಿತಾಳ ವರ್ಣ ಮತ್ತು ಭೈರವಿ ಆದಿತಾಳ ವರ್ಣ

ಅಥವಾ

ಈ ಕೆಳಗಿನ ತಾಳ ಮತ್ತು ಸ್ಕೇಲ್‌ಗಳನ್ನು ವಾದ್ಯಗಳನ್ನು ನುಡಿಸಿ.

ಕಲ್ಯಾಣಿ, ತೋಡಿ, ಪೂರ್ವಿ, ಅಸಾವೇರಿ

4. Easy Sight Reading Test Western ನಲ್ಲಿ ತೇರ್ಗಡೆ ಹೋದಬೇಕು

ಅಥವಾ

ಕೊಟ್ಟಿರುವ ಸಂಗೀತ ಟಿಪ್ಪಣಿ ರಾಗಗಳನ್ನು ನುಡಿಸಬೇಕು, ಇಲ್ಲವೇ ಹಾಡಬೇಕು (ಭೈರವಿ ಖಮಾಚ್, ಬಿಲಹರಿ ಕುಂತಲವರಾಳಿ.)

ಅಥವಾ

ಕೊಟ್ಟಿರುವ ಸಂಗೀತ ಟಿಪ್ಪಣಿಯಿಂದ ಕಾಪಿ, ಭೈರವಿ ಅಥವಾ ಖಮಾಚ್ ರಾಗಗಳಲ್ಲಿ ಸುಲಭ ದೃಕ್ ವಾಚನ ಪರೀಕ್ಷೆಯಲ್ಲಿ ಪಾಸಾಗಬೇಕು.

5. ಶಾಸ್ತ್ರೀಯ ಸಂಗೀತ ರಚನಕಾರರ ಮತ್ತು ಆಧುನಿಕ ರಚನಕಾರರ ಎರಡು ಭಿನ್ನ ಕೃತಿಗಳನ್ನು ನುಡಿಸಬೇಕು ಅಥವಾ ಸ್ವಂತ ಆಯ್ಕೆಯ ಕೃತಿಯನ್ನು ನುಡಿಸಬೇಕು.

67. ಸಂಗೀತ ಪ್ರೇಮಿ - Music Lover :

ಕೆಳಗಿನ ಯಾರಾದರೂ ಇಬ್ಬರು ಗೀತರಚನಕಾರರ ಜೀವನ ಮತ್ತು ಕೆಲಸವನ್ನು ತಿಳಿಯುವುದು.

ಪಂಡಿತ ಭಟ್ಕಡೆ, ರವೀಂದ್ರನಾಥ ಟಾಗೋರ್, ತಾನ್‌ಸೇನ್, ತ್ಯಾಗರಾಜ, ಭಾರತಿ ಪರ್ಸೆಲ್, ವಿಷ್ಣು ದಿಗಂಬರ್, ಪಾಲುಸ್ಕರ್, ಭಾಷ್, ಪರ್ಸೆಲೆ ಸಿಸಿಲ್ ಶಾರ್ಪ್, ಬೆತೋವೆನ್ ಇವರಲ್ಲದೆ ನಿಮ್ಮ ಆಯ್ಕೆಯ ಯಾರಾದರೂ ಒಬ್ಬ ಸಂಗೀತಗಾರರ ಬಗ್ಗೆ ತಿಳಿಯುವುದು.

2) ಇವುಗಳಲ್ಲಿ ಯಾವುದಾದರೂ ಒಂದು ಸಂಗೀತದ ಅರ್ಥ ತಿಳಿಯುವುದು.

ಕರ್ನಾಟಕ ಸಂಗೀತ : ರಾಗ, ಸಂಗತಿ, ವರ್ಣ, ಆದಿತಾಳ ಪಲ್ಲವಿ, ಆಲಾಪನೆ, ಗಮಕ.

ಹಿಂದೂಸ್ತಾನಿ ಸಂಗೀತ : ರಾಗ, ಆಲಾಪ್, ಚಾರ್ ತಾಲ್, ದಾದ್ರ, ದ್ರುಪದ್, ಟುಮ್ರಿ, ಸ್ವರ್ ಮತ್ತು ಸಂಗೀತ.

ಪಾಶ್ಚಿಮಾತ್ಯ ಸಂಗೀತ : ಒಪೇರಾ, ಸಿಂಪೋನಿ, ಟ್ರೈಯೋ, ಮಾಡ್ಯುಲೇಷನ್ ಟ್ರಾನ್ಸ್‌ಪೊಸಿಷನ್, ಸ್ಕೋರ್, ಕಂಟ್ರಾಲ್‌ಟೊ, ಕ್ಯಾಡೆನ್ಸ್.

3) ಮೂರು ತಿಂಗಳ ಕಾಲ ಕಲಿತ ಹಾಡುಗಳು ಮತ್ತು ರಚನೆಗಳನ್ನು ದಾಖಲೆ ಇಡಿ.

4) ಆರ್ಕೆಸ್ಟ್ರಾ ಸಂಯೋಜನೆಯನ್ನು ತಿಳಿಯಿರಿ ಮತ್ತು ಕೆಳಗಿನ ವಾದ್ಯಗಳನ್ನು ಚಿತ್ರಗಳಲ್ಲಿ ನಾಲ್ಕನ್ನು ಗುರುತಿಸಿ.

ವಯಲಿನ್, ಡಬ್ಬಲ್ ಬಾಸ್, ಫ್ಲೂಟ್, ಬೇಸನ್, ಹಾರನ್, ಟ್ರಾಂಬೋನ್ ಹಾರ್ಪ್, ಸಿಂಬಲ್ಸ್, ವೀಣಾ, ಸಿತಾರ್, ತಂಬೂರಾ, ಗೋಟುವಾದ್ಯ, ಮೃದಂಗ.

5) ಕೆಳಗಿನ ರಾಗಗಳಲ್ಲಿ ಒಂದು ಹಾಡನ್ನು ಹಾಡುವುದು ಇಲ್ಲವೆ ನುಡಿಸುವುದು ಅಥವಾ ಪರೀಕ್ಷಕರು ಆರಿಸಿದ್ದನ್ನು ಹಾಡುವುದು ಇಲ್ಲವೆ ನುಡಿಸುವುದು.

ಕರ್ನಾಟಕ ಸಂಗೀತ : ಶಂಕರಾಭರಣ, ಕಾಂಬೋಡಿ, ತೋಡಿ, ಕಲ್ಯಾಣಿ, ಭೈರವಿ.

ಹಿಂದೂಸ್ತಾನಿ ಸಂಗೀತ : ಬಿಲ್ವಾಲ್, ಖಮಾಚ್, ಕಾಫಿ, ಯಮನ್ ಕಲ್ಯಾಣಿ, ಜಂಜೂಟಿ.

ಪಾಶ್ಚಿಮಾತ್ಯ ಸಂಗೀತ : ನಿಮ್ಮ ಆಯ್ಕೆಯನ್ನು ಹಾಡುವುದು ಇಲ್ಲವೆ ನುಡಿಸುವುದು.

6) ಗೈಡ್ ತನ್ನ ಅಷ್ಟಕ/ದಳಕ್ಕೆ ಜನಪದ ಗೀತೆ, ಸುತ್ತು ಹಾಡು. (Rounds) ಕೀರ್ತನೆ, ಭಜನೆ ಇವುಗಳಲ್ಲಿ ಯಾವುದಾದರೂ ಒಂದನ್ನು ಹೇಳಿಕೊಟ್ಟಿದ್ದಾಳೆಂದು ತನ್ನ ಗೈಡ್ ನಾಯಕಿಯವರಿಂದ ಪ್ರಮಾಣ ಪತ್ರವನ್ನು ಹೊಂದಿರುವುದು.

68. ನಿಸರ್ಗ ತಜ್ಞೆ - Naturalist :

1. ಮೂರು ತಿಂಗಳ ಅವಧಿಗೆ ವಿಸ್ತರಿಸಿ ನಿಸರ್ಗ ಕುರಿತ ಕನಿಷ್ಠ 60 ಅಂಶಗಳನ್ನು ಹೊಂದಿರುವ ದಿನಚರಿಯನ್ನು ಬರೆಯುವುದು.
2. ಗೊತ್ತು ಪಡಿಸಿದ ಕ್ಷೇತ್ರದಲ್ಲಿ ಮೂರು ತಿಂಗಳಕಾಲ ದಿನ ನಿತ್ಯದಲ್ಲಿ ನಿಸರ್ಗದಲ್ಲಿ ಆಗುವ ಬದಲಾವಣೆಗಳನ್ನು ವೀಕ್ಷಿಸುವುದು. ಗಿಡ, ಮರ, ಪಕ್ಷಿಗಳ ಬಗ್ಗೆ ಹೊಸ ವಿಷಯಗಳನ್ನು ಕಂಡುಕೊಳ್ಳುವುದು.
3. ಕೆಳಗಿನವುಗಳಲ್ಲಿ ಯಾವುದಾದರೂ ಎರಡನ್ನು ಮಾಡಿ.

   ಅ) ಪಕ್ಷಿಗಳ ಅಥವಾ ವನ್ಯ ಜೀವಿಗಳ ಆರು ಛಾಯಾಚಿತ್ರಗಳನ್ನು ಸಾಲಾಗಿ ತೆಗೆಯುವುದು. ಅವುಗಳ ಜೀವನ, ಅಭ್ಯಾಸ ಮತ್ತು ಸಂತಾನೋತ್ಪತ್ತಿ ಕಾಲವನ್ನು ತಿಳಿಯುವುದು.

   ಆ) ವಸ್ತು ಸಂಗ್ರಹಾಲಯು ಬಣ್ಣದ ಫಲಕಗಳು ಮತ್ತು ಮೃಗಾಲಯಗಳಲ್ಲಿನ 40 ಪ್ರಾಣಿಗಳನ್ನು ಕೀಟಗಳು, ಸರಿಸೃಪ ಮತ್ತು ಹಕ್ಕಿಗಳ ಹೆಸರಿಸಿ. ಅವುಗಳಲ್ಲಿ ಐದರ ಜೀವನ ಸ್ವಭಾವ, ಸ್ವರೂಪವನ್ನು ವೀಕ್ಷಿಸಿ ಬರೆಯುವುದು.

   ಇ) ಇಪ್ಪತ್ತು ಹೂಗಳ ಬಣ್ಣದ ಚಿತ್ರ ಬಿಡಿಸಿ ಅಥವಾ ಹನ್ನೆರಡು ಪ್ರಾಣಿಗಳ ಬಣ್ಣದ ಚಿತ್ರ ಬಿಡಿಸಿ, ಅವುಗಳಲ್ಲಿ ಐವರ ಜೀವನ ಸ್ವಭಾವ, ಸ್ವರೂಪವನ್ನು ವೀಕ್ಷಿಸಿ ಬರೆಯುವುದು.

ಈ) 15 ಮರಗಳನ್ನು ವೀಕ್ಷಿಸುವುದು, ಅವುಗಳ ಹೆಸರು ಲಕ್ಷಣ ಮತ್ತು ಉಪಯೋಗಗಳನ್ನು ಬರೆಯುವುದು, ಅವುಗಳ ಎಲೆ, ಕಾಂಡ ಮತ್ತು ಹೂಗಳ ಚಿತ್ರ ಬಿಡಿಸುವುದು.

ಉ) 50 ಬಣ್ಣದ ಹೂಗಳನ್ನು ಸಂಗ್ರಹಿಸಿ ಅಂಟಿಸಿ ಹೆಸರಿಸುವುದು; ಈ ಹೂಗಳು ದೊರೆತ ಸ್ಥಳ ಮತ್ತು ದಿನಾಂಕವನ್ನು ಬರೆಯುವುದು. ಇವುಗಳನ್ನು ವರ್ಗೀಕರಿಸುವ ಪ್ರಯತ್ನ ಮಾಡುವುದು; ಅಪರೂಪದ ಹೂಗಳ ಪರಿಚಯ ತಿಳಿಸುವುದು.

ಊ) ಕೆಳಗಿನವುಗಳನ್ನು ಸಂಗ್ರಹಿಸಿ, ಪ್ರದರ್ಶಿಸಿ

i) ಬೀಜ ಹೇಗೆ ಪ್ರಸಾರವಾಗುತ್ತವೆ?

ii) ಬಳ್ಳಿಯು ಹೇಗೆ ಹಬ್ಬುತ್ತದೆ?

iii) ಸಸ್ಯಗಳು ತಮ್ಮನ್ನು ಹೇಗೆ ರಕ್ಷಿಸಿಕೊಳ್ಳುತ್ತವೆ?

69. ಪೌಷ್ಠಿಕ ಆಹಾರ ಶಿಕ್ಷಕಿ - Nutrition Educator :

1. ಪೌಷ್ಠಿಕ ಆಹಾರ ಕೊರತೆಯ ಲಕ್ಷಣ ಮತ್ತು ಅದರ ಮುಖ್ಯ ಪರಿಣಾಮಗಳನ್ನು ತಿಳಿಯುವುದು.

2. ಬಾಟಲಿ ಹಾಲುಣಿಸುವ ಅನಾನುಕೂಲತೆಗಳನ್ನು ಜನರಿಗೆ ತಿಳಿಸಿ ಮತ್ತು ಮಗುವಿಗೆ ಸ್ತನ್ಯಪಾನ (ಎದೆಹಾಲು) ಮಾಡಿಸುವಂತೆ ತಾಯಂದಿರಿಗೆ ತಿಳಿಹೇಳುವುದು.

3. ಸಮತೋಲನ ಆಹಾರದ ಘಟಕಗಳ ಬಗ್ಗೆ ತಿಳಿಯುವುದು ಮತ್ತು ಅದನ್ನು ತಯಾರಿಸುವ ಕ್ರಮ ತಿಳಿಯುವುದು.

4. ಆಹಾರವಲ್ಲದ ಚಹ, ಕಾಫಿ, ಮುಂತಾದ ಪಾನೀಯಗಳನ್ನು ಕುಡಿಯುವುದು ಉಪಯುಕ್ತವಲ್ಲವೆಂದು ತಿಳಿಹೇಳುವುದು.

5. ತನ್ನ ಗ್ರಾಮ/ಬಡಾವಣೆಯಲ್ಲಿ ಪೌಷ್ಟಿಕ ಆಹಾರ ಸಮೀಕ್ಷೆ ಮಾಡಿ ಅವಶ್ಯಕತೆ ಕಂಡು ಬಂದರೆ ವೈದ್ಯರನ್ನು ಸಂಪರ್ಕಿಸಲು ಉತ್ತೇಜಿಸುವುದು.

6. ಪೌಷ್ಟಿಕತೆಯನ್ನು ಕುರಿತು ಶಿಕ್ಷಣ ನೀಡಲು ಕನಿಷ್ಠ 3 ಭಿತ್ತಿ ಚಿತ್ರಗಳನ್ನು ತಯಾರಿಸುವುದು.

70. ಮಾರ್ಗಾನ್ವೇಷಕಿ - Path finder :

1. ಬಡಾವಣೆಯಲ್ಲಿನ ಆರಕ್ಷಕ ಠಾಣೆ, ಅಗ್ನಿಶಾಮಕ ನಿಲ್ದಾಣ, ಆಸ್ಪತ್ರೆ, ಜನಾನಾ ಆಸ್ಪತ್ರೆ ಔಷಧಾಲಯ, ಆರೋಗ್ಯ ಕೇಂದ್ರ ಶಾಲೆ, ಅಂಚೆಕಛೇರಿ, ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ, ವೈದ್ಯರು, ಮೋಟಾರು ಗ್ಯಾರೇಜು, ಪೆಟ್ರೋಲ್ ಪಂಪ್, ಸೈಕಲ್ ಶಾಪ್ ಇವುಗಳ ಸ್ಥಳಗಳನ್ನು ಸರಿಯಾಗಿ ತಿಳಿದಿರಬೇಕು ಮತ್ತು ಇವುಗಳ ದೂರವಾಣಿ ಸಂಖ್ಯೆಗಳ ಪಟ್ಟಿಮಾಡಿಕೊಳ್ಳಬೇಕು ಹಳ್ಳಿಗಳಲ್ಲಿ. ನೀರು ಸರಬರಾಜು ಕೇಂದ್ರ ಇರುವ ಸ್ಥಳ ತಿಳಿದುಕೊಳ್ಳುವುದು. ಗ್ರಾಮಪಂಚರ ಮನೆ ಮತ್ತು ಅವರ ಕರ್ತವ್ಯಗಳನ್ನು ತಿಳಿದುಕೊಳ್ಳುವುದು.

ಅಥವಾ

ನಗರಗಳಲ್ಲಿ ಮುಖ್ಯ ದಿನಸಿ ಅಂಗಡಿಗಳು, ಸರ್ಕಾರಿ ಹಾಲು ಕೇಂದ್ರ, ಆಟೋರಿಕ್ಷಾ, ಟ್ಯಾಕ್ಸಿ ಮತ್ತು ಟಾಂಗಾ ನಿಲ್ದಾಣ, ಕೋಟೆಗಳು, ಪುರಸಭೆ, ಟೌನ್ ಹಾಲ್, ಉಪ ಆಯುಕ್ತರ ಕಛೇರಿ ಈ ಸ್ಥಳಗಳನ್ನು ತಿಳಿಯುವುದು.

2. 40 ಕಿ.ಮೀ. ಸುತ್ತಳತೆಯಲ್ಲಿರುವ ಜಿಲ್ಲೆಯ ಮುಖ್ಯ ಕಛೇರಿಗಳ ಪರಿಚಯವಿರಬೇಕು.

3. ಸ್ಥಳೀಯ ಇತಿಹಾಸ, ಮುಖ್ಯ ಕಟ್ಟಡ ಅಥವಾ ಇತಿಹಾಸ ಪ್ರಸಿದ್ಧ ಸ್ಥಳದ ಬಗೆಗೆ ತಿಳಿದುಕೊಳ್ಳುವುದು.

ಸೂಚನೆ : ಮೇಲಿನವುಗಳ ಮಾರ್ಗವನ್ನು ಸರಿಯಾಗಿ ಅನ್ವೇಷಿಸಿ ಸರಿಯಾಗಿ ತಿಳಿದುಕೊಂಡಲ್ಲಿ ಆಗಂತುಕರಿಗೆ ಮಾರ್ಗದರ್ಶನ ಮಾಡಲು ಅನುಕೂಲವಾಗುತ್ತದೆ.

71. ಛಾಯಾಗ್ರಾಹಕಿ - Photographer :

1. ತಾನೇ ತೆಗೆದ, ತೊಳೆದು ಮುದ್ರಿಸಿದ ಛಾಯಾಚಿತ್ರವನ್ನು ಪರೀಕ್ಷೆಗೆ ತರಬೇಕು. ಈ ಕೆಳಗಿನ 5 ವಿಷಯುಗಳಲ್ಲಿ ಒಂದನ್ನು ಆರಿಸಿ ಛಾಯಾಚಿತ್ರಗ್ರಹಣ ಮಾಡುವುದು.

ಅ) ಒಳಾಂಗಣ

ಆ) ಭಾವಚಿತ್ರ

ಇ) ಭೂದೃಶ್ಯ

ಈ) ವಾಸ್ತುಶಿಲ್ಪ

ಉ) ಸಮಯಸ್ಫೂರ್ತಿ ಛಾಯಾಗ್ರಣ.

ಊ)ಚಿತ್ರಕಲೆಯ ಛಾಯಾಚಿತ್ರ,

ಋ) ಹೂಗಳು.

ೠ) ಪಕ್ಷಿಗಳು, ಪ್ರಾಣಿಗಳು, ಕೀಟಗಳು.

ಛಾಯಾಚಿತ್ರಗಳನ್ನು 9 ತಿಂಗಳುಗಳಿಂದೀಚೆಗೆ ತೆಗೆದಿರಬೇಕು ಎಲ್ಲಾ ಚಿತ್ರಗಳನ್ನು ರಟ್ಟಿಗೆ ಅಂಟಿಸಿರಬೇಕು.

2. ಛಾಯಾಗ್ರಹಣದ ಮಸೂರ, ಮುಚ್ಚಿಕೆಗಳ ಮತ್ತು ವಿವಿಧ ಭಾಗಗಳ ಬಗ್ಗೆ ಕೇಳುವ ಪ್ರಶ್ನೆಗಳಿಗೆ ಉತ್ತರ ನೀಡುವ ಸಾಮರ್ಥ್ಯ ಪಡೆಯುವುದು.

3. ಛಾಯಾಚಿತ್ರದ ನೆಗೆಟೀವ್, ಪಾಸಿಟೀವ್ ಮುದ್ರಣಗಳಿಗೆ ಕಾರಣವನ್ನು ಸಂಕ್ಷಿಪ್ತವಾಗಿ ತಿಳಿಸಿ.

72. ಅಗ್ರಗಾಮಿನಿ - Pioneer :

1. ಸೌದೆಗೆ ಮರವನ್ನು ಆಯ್ಕೆ ಮಾಡುವುದು, ಸೌದೆಯನ್ನು ಸಂಗ್ರಹಿಸುವುದು ಮತ್ತು ಜೋಡಿಸುವುದು; ಶಿಬಿರಾಗ್ನಿಗೆ ಸೌದೆಗಳನ್ನು ಜೋಡಿಸುವ ವಿವಿಧ ವಿಧಾನಗಳನ್ನು ತಿಳಿದಿರುವುದು. ಪಾಕಪ್ರವೀಣೆ ಪದಕ ಪಡೆದಿದ್ದು ಶಿಬಿರಾಗ್ನಿ ಸಮಯದಲ್ಲಿ ಎರಡು ಅಡುಗೆ ಮಾಡುವುದು.

2. ಪರದೆ ನಿಲ್ಲಿಸುವುದು.

3. ಕೆಳಗಿನ ಗಂಟುಗಳನ್ನು ಕಟ್ಟುವುದನ್ನು ಮತ್ತು ಬಳಸುವುದನ್ನು ಅಭ್ಯಾಸ ಮಾಡುವುದು. ಬೊಲೈನ್ ಆನ್ ಬೈಟ್ ಜೀವರಕ್ಷಕ ಗಂಟನ್ನು (Bowline on bight) ಬೆಕ್ಕಿನ ಪಾದ (Cat's Paw) ದ್ವಿಮೂಲೆಗಂಟು, (Double sheet bend) ಮ್ಯಾನ್‌ಹಾರ್ ನಸ್ ಗಂಟು, ಸನ್ನೆ ಗಂಟು, (Lever hitch) ಸೆಳೆವ ಗಂಟು, (draw hitch) ಬೆಸ್ತರಗಂಟು (Fishermen Knot).

4. ಪ್ರಥಮ ಮತ್ತು ದ್ವಿತೀಯ ಸೋಪಾನದ ಅಗ್ರಗಾಮಿ ಪರೀಕ್ಷೆಗಳಲ್ಲಿ ಅರ್ಹತೆ ಪಡೆಯುವುದು.

5. ಸರಿಯಾದ ಕಟ್ಟು ಮತ್ತು ಗಂಟುಗಳನ್ನು ಉಪಯೋಗಿಸಿ ಸೇತುವೆ, ಏಣಿ, ಧ್ವಜಸ್ತಂಭ ಕೈತೊಳೆಯುವ ತೊಟ್ಟಿ, ಗುಡಿಸಲು, ಗುಡಾರಗಳನ್ನು ಕಟ್ಟುವುದು.

73. ಜನಸಂಖ್ಯಾ ಶಿಕ್ಷಣ - Population Education :

1. ಇವುಗಳ ಬಗ್ಗೆ ಜನರಿಗೆ ಶಿಕ್ಷಣ ನೀಡುವುದು.

   (ಅ) ಮಕ್ಕಳ ಹಕ್ಕು.

   (ಆ) ಹೆಚ್ಚು ಮಕ್ಕಳನ್ನು ಹೊಂದಿರುವುದರಿಂದ ಆಗುವ ಪರಿಣಾಮ.

   (i) ಮಕ್ಕಳ ಮೇಲೆ

   (ii) ತಾಯಿಯ ಮೇಲೆ

   (iii) ಕುಟುಂಬದ ಮೇಲೆ

   (iv) ಸಮುದಾಯದ ಮೇಲೆ

   (ಇ) ಜನಸಂಖ್ಯಾ ಸ್ಫೋಟದಿಂದ ಉಂಟಾಗುವ ರಾಷ್ಟ್ರೀಯ ಸಮಸ್ಯೆಗಳು.

2. ನಾಲ್ಕು ಜನರಿಗೆ ಕುಟುಂಬ ಕಲ್ಯಾಣ ಕಾರ್ಯಕ್ರಮ ಅನುಸರಿಸುವಂತೆ ಪ್ರೇರಣೆ ನೀಡುವುದು.

3. ವಿಶ್ವಸಂಸ್ಥೆಯು ಪ್ರಕಟಿಸಿದ ಭಿತ್ತಿಚಿತ್ರಗಳನ್ನು ಪ್ರದರ್ಶಿಸುವುದು.

74. ಕುಕ್ಕುಟ ಕೃಷಿಕ - Poultry Farmer :

1. ಗೈಡಳು ಕನಿಷ್ಟ ಒಂದು ವರ್ಷ ಕೆಲವು ಕೋಳಿಗಳನ್ನು ಸಾಕಬೇಕು ಕೋಳಿಯ ಮನೆಯ ಯೋಜನೆಯನ್ನು ರೇಖಾ ಚಿತ್ರದ ಮೂಲಕ ಕೋಳಿಯ ಸಂಖ್ಯೆಗೆ ಅನುಗುಣ ವಾಗಿ ಸಿದ್ಧಪಡಿಸಬೇಕು.

2. ಲೈಂಗಿಕ ಸಂತಾನ ಉತ್ಪತ್ತಿ ಬಗೆಗಿನ ಪ್ರಶ್ನೆಗಳಿಗೆ ಉತ್ತರಿಸಲು ಸಮರ್ಥರಾಗಿರಬೇಕು.

3. ಕೋಳಿ ಮತ್ತು ಬಾತುಮರಿಗಳನ್ನು ಸಾಕುವ ವಿಧಾನವನ್ನು ಸರಿಯಾಗಿ ತಿಳಿದಿರಬೇಕು. ಕೋಳಿ ಮರಿಯ ಶಾಖ ಪೋಷಣಾ ಅವಧಿಯನ್ನು ಮಾರುಕಟ್ಟೆಗೆ ರವಾನಿಸುವ ಸೂಕ್ತ ಅವಧಿಯನ್ನು ತಿಳಿದಿರಬೇಕು. ಕೋಳಿ ಸಾಕಾಣಿಕೆಯ ಅನುಕೂಲತೆ ಮತ್ತು ಪ್ರತಿಕೂಲತೆಯ ಬಗ್ಗೆ ವಿಚಾರ ವಿನಿಮಯ ಮಾಡುವುದು.

4. ತೂಕಡಿಸುವ ಖಾಯಿಲೆ ಮತ್ತು ಕೆಲವು ಸರಳ ರೋಗಗಳಿಗೆ ಪರಿಹಾರ ತಿಳಿದಿರುವುದು. ಕೋಳಿಯ ಆಹಾರ ಅಭ್ಯಾಸದ ವಿವರವನ್ನು ತಿಳಿಯುವುದು.

5. ಮೊಟ್ಟೆ ಮತ್ತು ಪಕ್ಷಿಗಳನ್ನು ಮಾರುಕಟ್ಟೆಗೆ ಕಳುಹಿಸಲು ಸಿದ್ಧಪಡಿಸಿ.

6. ವರ್ಷದ ಲೆಕ್ಕಪತ್ರವನ್ನು ಇಡುವುದು.

75. ಸಾರ್ವಜನಿಕ ಆರೋಗ್ಯ - Public Health:

1. ಕೆಳಗಿನ ರೋಗಗಳು ಪ್ರಸಾರವಾಗುವ ವಿಧಾನಗಳನ್ನು ತಿಳಿಯುವುದು: ಡಿಫ್ತೀರಿಯಾ, ಕ್ಷಯ, ಅಮ್ಮ, ಗದಕಟ್ಟು, ನಾಯಿ ಕೆಮ್ಮು, ಸಿಡುಬು,. ವಿಷಮಶೀತ ಜ್ವರ, ಆಮಶಂಕೆ, ಅತಿಸಾರ, ಚಿಕ್ಕ ಅಮ್ಮ, ಮಲೇರಿಯಾ, ಪ್ಲೇಗು, ಹುಳಕಡ್ಡಿ, ಕಜ್ಜಿ ಮತ್ತು ಕಾಲರಾ, ಇವುಗಳನ್ನು ತಡೆಗಟ್ಟಲು, ನೈರ್ಮಲ್ಯ ಅಧಿಕಾರಿಗಳು ತೆಗೆದುಕೊಂಡಿರುವ ಕ್ರಮಗಳನ್ನು ಒಬ್ಬ ವ್ಯಕ್ತಿಗೆ ತಗುಲಿದಾಗ ತೆಗೆದುಕೊಳ್ಳಬೇಕಾದ ಕ್ರಮವನ್ನು ತಿಳಿದುಕೊಳ್ಳುವುದು.

   ಸೂಚನೆ: ಅಣುಜೀವಶಾಸ್ತ್ರ ಮತ್ತು ವೈದ್ಯಕೀಯ ವಿವರದ ಅಗತ್ಯವಿಲ್ಲ.

2. ವಲಸೆ ಬರುವವರ ಮತ್ತು ಇಲಿ, ನಾಯಿ. ಬೆಕ್ಕುಗಳಿಂದ ಹರಡುವ ರೋಗಗಳನ್ನು ತಡೆಗಟ್ಟುವ ಕ್ರಮ, ಹೊರ ದೇಶದಿಂದ ಬರುವವರ ಬಗ್ಗೆ ಸೋಂಕು ನಿವಾರಣೆಗಾಗಿ ತೆಗೆದುಕೊಳ್ಳುವ ಕ್ರಮಗಳನ್ನು ತಿಳಿಯುವುದು.

3. ಮನೆಯಲ್ಲಿ ವಾಸಿಸುವ ಹಾನಿಕಾರಕ ಕೀಟಗಳಾದ ಸೊಳ್ಳೆ, ತಿಗಣೆ, ನೊಣ, ಜಿರಳೆ ಮತ್ತು ಇತರೆ ಕೀಟಗಳನ್ನು ನಾಶಮಾಡುವ ಕ್ರಮವನ್ನು ವಿವರಿಸುವುದು. ಮನೆಯನ್ನು ಪೂರ್ಣವಾಗಿ ಅಣುನಾಶಮಾಡುವ ಒಂದು ಅಥವಾ ಎರಡು ವಿಧಾನಗಳನ್ನು ತಿಳಿಯುವುದು.

4. ಮನೆಯಲ್ಲಿ ಉತ್ಪತ್ತಿಯಾಗುವ ಕಸವನ್ನು ವಿಲೇವಾರಿ ಮಾಡುವುದು/ ಕಾಂಪೋಸ್ಟ್ ಗೊಬ್ಬರ ತಯಾರಿಸುವುದು. ಶಿಬಿರದ ಅಡುಗೆಮನೆ, ಶೌಚಾಲಯ ನೈರ್ಮಲ್ಯ, ಕುಡಿಯುವ ನೀರು, ಆಹಾರ ಶೇಖರಣೆಯ ಬಗ್ಗೆ ತಿಳಿದಿರುವುದು.

76. ವಾಚಕಿ - Reader :

1. ಕನಿಷ್ಟ ಈ ಪುಸ್ತಕಗಳನ್ನು ಓದಿರುವುದು:
   ಅ) ಎರಡು ಪ್ರಸಿದ್ಧ ಭಾರತೀಯರ ಆತ್ಮ ಚರಿತ್ರೆ.
   ಆ) ಎರಡು ಸಾಹಸಮಯ, ಅನ್ವೇಷಕ, ಪ್ರವಾಸಿಗ, ವೈಜ್ಞಾನಿಕ ಸಾಧನೆಯ ಪುಸ್ತಕಗಳು.
   ಇ) ನಿಸರ್ಗ ಸಂರಕ್ಷಣೆ ಮತ್ತು ಜನಸಂಖ್ಯೆ ಬಗ್ಗೆ ಎರಡು ಪುಸ್ತಕಗಳು.
   ಈ) ಎರಡು ಧಾರ್ಮಿಕ ಪುಸ್ತಕಗಳು
   ಉ) ಭಾರತೀಯ ಸಂಸ್ಕೃತಿ ಮತ್ತು ಪರಂಪರೆ ಬಗ್ಗೆ ಎರಡು ಪುಸ್ತಕಗಳು.
   ಊ) ಭಾರತೀಯ ಸ್ವಾತಂತ್ರ್ಯದ ಬಗ್ಗೆ ಎರಡು ಪುಸ್ತಕಗಳು.
   ಋ) ವೃತ್ತಿ ಮತ್ತು ಹವ್ಯಾಸದ ಬಗ್ಗೆ ಎರಡು ಪುಸ್ತಕಗಳು.
2. ತೇವ, ಗೆದ್ದಲು, ಇತರ ಕೀಟಗಳಿಂದ ಪುಸ್ತಕಕ್ಕೆ ಉಂಟಾಗುವ ಆಪತ್ತುಗಳನ್ನು ತಿಳಿದು ಅದರಿಂದ ಪುಸ್ತಕಗಳನ್ನು ರಕ್ಷಿಸುವುದು.
3. ಗ್ರಂಥಪಾಲಕರಿಗೆ ಗ್ರಂಥಾಲಯದಲ್ಲಿ ಪುಸ್ತಕಗಳನ್ನು ಜೋಡಿಸಲು ಪುಸ್ತಕದ ಪಟ್ಟಿಯನ್ನು ಬರೆಯಲು ಸಹಾಯಮಾಡುವುದು.

77. ಜೀವರಕ್ಷಕರು - Rescuer :

1. ಈಜು ಪ್ರಾವೀಣ್ಯತಾ ಪದಕವನ್ನು ಪಡೆದಿರುವುದು
2. ಉಡುಗೆ ಸಹಿತ ಯಾವ ವರಸೆಯಲ್ಲಾದರೂ 45 ಮೀ. ಈಜುವುದು.

3. ಯಾವುದಾದರೂ ಎರಡು ವಿಧಾನದಿಂದ ನೀರಿನ ಆಪತ್ತಿನಿಂದ ರಕ್ಷಿಸುವುದು.
4. ಚಲನೆಯಿಲ್ಲದೆ 30 ಸೆಂ. ಅಂಗಾತವಾಗಿ ತೇಲುವುದು.
5. ಉತ್ತಮ ಎದೆ ವರಸೆ ಮತ್ತು ಎರಡು ಆಯ್ದ ವರಸೆಗಳನ್ನು ಪ್ರದರ್ಶಿಸುತ್ತಾ 45.7 ಮೀ ಈಜುವುದು (ಪಾರ್ಶ್ವವರಸೆ ಆಯ್ಕೆ ಮಾಡಿದ್ದರೆ ಮೇಲಿನ ತೋಳನ್ನು ನೀರಿನಿಂದ ಮೇಲಕ್ಕೆ ಎತ್ತುವುದು)
6. ಬಟ್ಟೆ ಸುತ್ತಿ 1.5 ಮೀ. ಗೆ ಕಡಿಮೆ ಇಲ್ಲದೆ ಈಜುಕೊಳದ ತಳದಲ್ಲಿಟ್ಟ ಇಟ್ಟಿಗೆಯನ್ನು ಈಜುತ್ತ ಎತ್ತುವುದು.
7. ಸ್ವೀಕೃತ ಕೃತಕ ಉಸಿರಾಟ ವಿಧಾನವೊಂದು ತಿಳಿದಿರುವುದು ಮುಳುಗಿದ ವ್ಯಕ್ತಿಗೆ ಚಿಕಿತ್ಸೆ ನೀಡುವುದು.
8. ಹತ್ತು ಮೀಟರಿಗೆ ಕಡಿಮೆ ಇಲ್ಲದಂತೆ ಜೀವರಕ್ಷಕ ಸೂತ್ರವನ್ನು ಎಸೆಯುವುದು.
9. ಅಪಾಯಕ್ಕೆ ಒಳಗಾದವರನ್ನು ಸಾಗಿಸುವ ಎರಡು ವಿಧಾನಗಳನ್ನು ಪ್ರದರ್ಶಿಸುವುದು.

78. ಗ್ರಾಮೀಣ ಕಾರ್ಯಕರ್ತೆ - Rural worker :

1. ಗ್ರಾಮೀಣ ಕಸುಬುಗಳ ಉತ್ಪನ್ನಗಳು, ನೀರಿನ ಮೂಲಗಳು ಶಾಲೆಗೆ ಹೋಗುವ ಮಕ್ಕಳ ಅಕ್ಷರಸ್ಥರ ಸಂಖ್ಯೆಗಳು ಮತ್ತು ಸಂಪ್ರದಾಯ ಗಳ ವಿವರವನ್ನು ತಿಳಿಯವುದು.

2. ಗ್ರಾಮ ಪಂಚಾಯಿತಿ, ಆಡಳಿತ ವ್ಯವಸ್ಥೆ, ಗ್ರಾಮ ನೈರ್ಮಲ್ಯಗಳ ಬಗ್ಗೆ ತಿಳಿದಿರುವುದು.

3. ಗ್ರಾಮದಲ್ಲಿ ಸಾಕ್ಷರತೆ, ವಯಸ್ಕರ ಶಿಕ್ಷಣ, ನೈರ್ಮಲ್ಯ ಮತ್ತು ಸ್ವಚ್ಛತೆ, ಬೇಸಾಯ, ಆಟಗಳ ಕ್ಷೇತ್ರದಲ್ಲಿ ಸೇವೆ ಹಾಗೂ ಮದ್ಯಪಾನ ಜೂಜು, ಮಾದಕವಸ್ತುಗಳ ನಿಷೇಧಕ್ಕಾಗಿ ಸಲ್ಲಿಸುವ 6 ತಿಂಗಳು ಸತತ ಸೇವೆಯ ವರದಿಯನ್ನು ಅಥವಾ ಶಿಬಿರದಲ್ಲಿ 15 ಕೂಲಿ ದಿನಗಳು ಸೇವೆ ಸಲ್ಲಿಸಿರುವುದನ್ನು ವರದಿ ಮಾಡುವುದು.

4. ಕುಷ್ಠ ರೋಗಕ್ಕಾಗಿ ಕನಿಷ್ಟ 50 ಜನರಿಗೆ ತಪಾಸಣೆ ಮಾಡಿಸುವುದು.

5. ಕನಿಷ್ಟ 20 ಮಕ್ಕಳಿಗೆ ಸೋಂಕು ನಿರೋಧಕ ಪಡೆಯಲು ಸಹಾಯ ಮಾಡುವುದು.

6. ಬಾಯಿಂಯ ಮೂಲಕ ಜಲಪೂರಕ ಚಿಕಿತ್ಸೆಯನ್ನು ಆರು ತಾಯಂದಿರಿಗೆ ಕಲಿಸುವುದು.

7. ನಿಮ್ಮ ಗ್ರಾಮ/ಬಡಾವಣೆ/ಕೊಳಚೆ ಪ್ರದೇಶದಲ್ಲಿ ಕಣ್ಣು ಅಥವಾ ಹಲ್ಲಿನ ಆರೋಗ್ಯದ ಬಗ್ಗೆ ಆಂದೋಲನ ವ್ಯವಸ್ಥೆ ಮಾಡುವುದು.

8. ನೆರೆಯವರಲ್ಲಿ ಅತಿಸಾರ, ಆಮಶಂಕೆ ಅಥವಾ ಜಲನಷ್ಟವಾದಾಗ ಚಿಕಿತ್ಸೆಯನ್ನು ಕಲಿಸುವುದು.

79. ಸುರಕ್ಷತಾ ಅರಿವು - Safety Knowledge :

A) ವೈಯಕ್ತಿಕ ಪರೀಕ್ಷೆಗಳು

1. ಸುರಕ್ಷತೆಯ ಮೂಲ ಮತ್ತು ಅರ್ಥ ತಿಳಿಯುವುದು ಉತ್ತಮ ಸಾಹಸ ಚಟುವಟಿಕೆಗಳಿಗಾಗಿ ಸುರಕ್ಷತೆ ಅಗತ್ಯತೆಯನ್ನು ತಿಳಿಯವುದು.

2. **ರಸ್ತೆ ನಿಯಮಗಳು :**

ಪಾದಚಾರಿಗಳು: ಪಾದಚಾರಿ ರಸ್ತೆಯಲ್ಲಿ (Pavement) ಸಾಹಸ ಚಟುವಟಿಕೆಗಳಿಗಾಗಿ ಸುರಕ್ಷತೆ ಅಗತ್ಯತೆಯನ್ನು ತಿಳಿಯವುದು

3. ರಸ್ತೆ ದಾಟುವ ಮೂಲ ನಿಯಮಗಳನ್ನು ತಿಳಿಯುವುದು. ಸಾರಿಗೆ ನಿಯಂತ್ರಣ ನಿಯಮ, ದೀಪ ಸಂಕೇತ ನಿಯಮ ತಿಳಿಯುವುದು.

4. ಸಾರ್ವಜನಿಕ ವಾಹನಗಳಲ್ಲಿ ಅಪಾಯವಿಲ್ಲದೆ ಹತ್ತುವ ಮತ್ತು ಇಳಿಯುವುದನ್ನು ತಿಳಿಯುವುದು.

5. **ಪ್ರಯಾಣಿಕರ ಕರ್ತವ್ಯ:** ಕನ್ನಡಿಗೆ ಅಡ್ಡಲಾಗದಿರುವುದು, ಬಾಗಿಲು ಹಾಕುವ, ತೆಗೆಯುವ ಕಾರ್ಯಕ್ಕೆ ಮಧ್ಯೆ ಹೋಗದಿರುವುದು.

B) ಸಮೂಹ ಪರೀಕ್ಷೆಗಳು

1. ಶಾಲೆ ರಸ್ತೆ ದಾಟಲು ಶಾಲಾ ಮಕ್ಕಳಿಗೆ ಸಹಾಯಮಾಡುವುದು.

2. **ಸಾರಿಗೆ ಆಟ:** ಎಲ್ಲಾ ವರ್ಗದ ರಸ್ತೆಯ ಸಂಕೇತಗಳನ್ನು ಉಪಯೋಗಿಸುವ ರೀತಿಯನ್ನು ನಾಟಕಗಳ ಮೂಲಕ ಜನರಿಗೆ ಕಲಿಸುವುದು.

3. **ಗೃಹ ಸುರಕ್ಷತೆ :** ಮನೆಯಲ್ಲಿ ಬೀಳುವ ಸಂದರ್ಭಗಳು, ಸುಟ್ಟ ಮತ್ತು ಬೆಂದ ಗಾಯ, ಕತ್ತರಿಸಿದ ಗಾಯಕ್ಕೆ ಆಗುವ ಸೋಂಕು ಮತ್ತು ವಿದ್ಯುತ್ ಆಘಾತ, ಅಪಾಯಗಳನ್ನು ಗುರಿತಿಸುವ ಮನೆಯ ತಪಾಸಣೆ ಮತ್ತು ವಿದ್ಯುತ್ ಮಂಡಲಕ್ಕೆ ವಿದ್ಯುತ್ ಉಪಕರಣಗಳ ಜೋಡಣೆ ಇವುಗಳ ಬಗ್ಗೆ ಎಚ್ಚರಿಕೆ ವಹಿಸುವುದು.

4. **ಕೈಗಾರಿಕಾ ಸುರಕ್ಷತೆ :** ಯಂತ್ರ ಮತ್ತು ಉಪಕರಣಗಳ/ಉಡುಪುಗಳ ಸುರಕ್ಷತಾ ಬಳಕೆ ಬಗ್ಗೆ ಎಚ್ಚರಿಕೆ. ಕೈಗಾರಿಕಾ ಗೃಹದ ಸೂಕ್ತ ನಿರ್ವಹಣೆ.

5. **ಇತರ ಸುರಕ್ಷತೆ:** ಕೋವಿ, ತುಪಾಕಿ, ಗಾಳಿಪಟಗಳನ್ನು ಹಾರಿಸುವುದು, ಗುಡುಗು, ಮಿಂಚುಗಳಿಂದ ರಕ್ಷಣೆ. ಹೊತ್ತಿ ಉರಿಯುತ್ತಿರುವ ವ್ಯಕ್ತಿಯ ರಕ್ಷಣೆ ಮತ್ತು ಅಗ್ನಿಶಾಮಕ ದಳವನ್ನು ಕರೆಯುವುದು.

80. ಮಾರಾಟಗಾರ್ತಿ - Sales woman :

1. ಐದು ಅಂಗಡಿಗಳಲ್ಲಿ ತಯಾರಕರಿಂದ ಕೊಳ್ಳುವವರಿಗೆ ವಸ್ತುಗಳು ಏನಾಗುತ್ತವೆ. ಎಂಬುದನ್ನು ಪತ್ತೆ ಮಾಡಿ ವಿಶ್ಲೇಷಿಸುವುದು.
2. ತಯಾರಕರು – ಕೆಲಸಗಾರರು – ಸಣ್ಣ ವ್ಯಾಪಾರಿಗಳು, ಇವರುಗಳ ಮಧ್ಯೆ ಮಾರಾಟಗಾರ್ತಿಯ ಮಹತ್ವವನ್ನು ವಿವರಿಸುವುದು.
3. ನಿರ್ದಿಷ್ಟ ಪ್ರಮಾಣದ ವ್ಯಾಪಾರದ ಸರಕುಗಳನ್ನು ರೂ. 150 ಕಡಿಮೆ ಇಲ್ಲದಂತೆ ಮಾರಿ ಅನುಭವ ಪಡೆಯುವುದು. ಸಾಮಾನು ವಿಕ್ರಯಮಾಡಲು ಉಪಯೋಗಿಸುವ ವಿಧಾನ, ಜನರ ಮೇಲೆ ಪ್ರಭಾವ ಬೀರಿದ ರೀತಿ, ಕ್ರಯ–ವಿಕ್ರಯ ಮಾಡಿದಾಗ ಕೊಳ್ಳುವವರು ಪ್ರತಿರೋಧವನ್ನು ಎದುರಿಸಿದ ಬಗೆಯನ್ನು ಹೇಳುವುದು.
4. ಅವಳು ಮಾಡಿದ ಅಥವಾ ಬೆಳೆದ ವಸ್ತುವನ್ನು ಲಾಭಕ್ಕೆ ಮಾರುವುದು. ಮಾರಿದ ವಸ್ತುಗಳು ಅವುಗಳಿಗೆ ನಿಗದಿ ಪಡಿಸಿದ ಬೆಲೆ ಮತ್ತು ಪಡೆದ ಲಾಭವನ್ನು ಬರೆದಿಡುವುದು ಮತ್ತು ಹೇಳುವುದು.
5. ರಜಾ ದಿನಗಳಲ್ಲಿ ಅಥವಾ ಶನಿವಾರ ಮಧ್ಯಾಹ್ನ ಅಥವಾ ಶಾಲೆಯ ನಂತರ ಮೂರು ತಿಂಗಳ ಕಾಲ ವ್ಯಾಪಾರಿ ಮಹಿಳೆಯಾಗಿ ಕೆಲಸ ಮಾಡುವುದು. ತನ್ನ ವ್ಯಾಪಾರದ ವಸ್ತುಗಳನ್ನು ವ್ಯಾಪಾರ ಮಾಡಲು ಅವಶ್ಯಕವಾದ ಅಂಶಗಳನ್ನು ವಿವರಿಸುವುದು.

6. ಯಾವುದಾದರೂ ಒಂದು ವ್ಯಾಪಾರ ಕೇಂದ್ರಕ್ಕೆ ಹೋಗಿ, ಅವರು ವಸ್ತುಗಳನ್ನು ಹೇಗೆ ಮಾರುತ್ತಾರೆ ಎಂದು ತಿಳಿಯುವುದು ಮತ್ತು ತಿಳಿಸುವುದು. ಮೊದಲೇ ತಯಾರಿಸಿಕೊಂಡ ಪ್ರಶ್ನೆಗಳನ್ನು ಗೈಡಿಗೆ ಪರೀಕ್ಷಕರು ಕೇಳುವುದು.

7. ವ್ಯಾಪಾರದಲ್ಲಿ ಯಶಸ್ವಿಯಾಗಲು ಅಗತ್ಯವಾದ ಐದು ಮೂಲಭೂತ ಅಂಶಗಳನ್ನು ಹೆಸರಿಸುವುದು.

8. ಬಡಾವಣೆಯಲ್ಲಿ ಯಶಸ್ವಿ ವ್ಯಾಪಾರಿ ಮಹಿಳೆಯರ/ಪುರುಷರ ಬಳಿ ಹೋಗಿ ಅವರಿಂದ ವ್ಯಾಪಾರಿ ಉದ್ಯೋಗದ ಬಗ್ಗೆ ಅಭಿಪ್ರಾಯವನ್ನು ಸಂಗ್ರಹಿಸಿ 500 ಪದಕ್ಕೆ ಮೀರದಂತೆ ವಿಚಾರ ಕುರಿತು ಬರೆಯುವುದು.

9. ವಿವರಿಸಿ :

(ಅ) ಒಳ್ಳೆಯ ವ್ಯಾಪಾರದಲ್ಲಿ ವಸ್ತುಗಳ ಗುಣಮಟ್ಟದ ಸತ್ಯತೆಯು ಒಂದು ಮುಖ್ಯವಾದ ಅವಶ್ಯಕತೆ ಏಕೆ?

(ಆ) ಪ್ರತಿಯೊಬ್ಬ ವ್ಯಾಪಾರಿ ಮಹಿಳೆಯು ಯಜಮಾನನಿಗೆ ಹೇಳುವುದು ಏನು?

(ಇ) ವಿನಯವಂತಿಕೆಯು ಹೇಗೆ ವ್ಯಾಪಾರಮಾಡಲು ಸಹಾಯಕ ವಾಗುತ್ತದೆ?

81. ನೈರ್ಮಲ್ಯ ಪ್ರವರ್ಧಕಿ - Sanitation promoter :

1. ಗೊತ್ತುಪಡಿಸಿದ ಬಡಾವಣೆಯಲ್ಲಿ ಸಮೀಕ್ಷೆ ಮಾಡಿ ಈ ಕೆಳಕಂಡ ವಿಷಯಗಳಲ್ಲಿ ಜನರಿಗೆ ಸಹಾಯ ಮಾಡಿ :

(ಅ) ಶುದ್ಧ ಕುಡಿಯುವ ನೀರು.

(ಆ) ಕುದಿಸುವ, ಶೋಧಿಸುವ, ಸಂಗ್ರಹಿಸುವ ವಿಧಾನಗಳ ಪ್ರದರ್ಶನ.

(ಇ) ಇದ್ದಿಲಿನ ಶೋಧಕದ ಪ್ರದರ್ಶನ.



2. ಇಲಿ ಮತ್ತು ಇತರ ಮೂಷಕ ವರ್ಗದ ಪ್ರಾಣಿಗಳಿಂದ ಕಾಳುಗಳನ್ನು ರಕ್ಷಿಸುವುದು.
3. ಬೇಯಿಸಿದ ಮತ್ತು ಕರಿದ ಆಹಾರ ಪದಾರ್ಥಗಳನ್ನು ಸೊಳ್ಳೆ, ನೊಣ ಮತ್ತು ಧೂಳಿನಿಂದ ರಕ್ಷಿಸುವುದು.
4. ಸರಿಯಾದ ರೀತಿಯಲ್ಲಿ ಕಸ ವಿಲೇವಾರಿ ಮತ್ತು ಕಾಂಪೋಸ್ಟ್ ಗುಂಡಿ ಮಾಡುವುದನ್ನು ತೋರಿಸುವುದು.
5. ಬಯಲಿನಲ್ಲಿ ಮಲಮೂತ್ರ ವಿಸರ್ಜನೆ ಮಾಡುವ ಪರಿಣಾಮದ ಬಗ್ಗೆ ಶಿಕ್ಷಣ ನೀಡುವುದು.
6. ಕಡಿಮೆ ವೆಚ್ಚದ ಶೌಚಾಲಯದ ನಿರ್ಮಾಣ.
7. ಧೂಮರಹಿತ ಒಲೆಯನ್ನು ಉಪಯೋಗಿಸುವಂತೆ ಮಹಿಳೆಯರ ಮನ ಒಲಿಸುವುದು.
8. ಕನಿಷ್ಠ 25 ಮನೆಗಳಿಗೆ ಆರೋಗ್ಯ ಉಪ್ಪು (Iodised Salt) ಐಯೋಡಿನ್ ಪೂರಿತ ಉಪ್ಪು ಬಳಸುವಂತೆ ಕರಪತ್ರ, ಭಿತ್ತಿಚಿತ್ರ, ಸಂಭಾಷಣೆಯ ಮೂಲಕ ಪ್ರೋತ್ಸಾಹಿಸುವುದು.

82. ಪಂಡಿತೆ - Scholar :

ಪ್ರಾಂಶುಪಾಲಕಿ / ಮುಖ್ಯ ಶಿಕ್ಷಕರಿಂದ ಈ ಕೆಳಗಿನ ಚಟುವಟಿಕೆಗಳ ಪ್ರಮಾಣ ಪತ್ರವನ್ನು ಪಡೆಯುವುದು.

1. ಹಾಜರಿಯ ಕ್ರಮಬದ್ಧತೆ (80%ಕ್ಕಿಂತ ಹೆಚ್ಚು).

2. ಈ ಗೈಡ್ ನಡತೆ ಸಾಮಾನ್ಯ ಮಕ್ಕಳಿಗಿಂತ ಉತ್ತಮವಾಗಿದೆ.
3. ಶಾಲೆ / ಕಾಲೇಜಿನಲ್ಲಿ ಈ ಗೈಡ್ ಸತತವಾಗಿ ಸಹಾಯ ನೀಡುವ ಸ್ಪೂರ್ತಿ ಮತ್ತು ಪ್ರಾಮಾಣಿಕತೆಯನ್ನು ಹೊಂದಿದ್ದಾಳೆ.
4. ಮೂರು ವಾರ್ಷಿಕ ಪರೀಕ್ಷೆಗಳಲ್ಲಿ ಪಡೆದ ಅಂಕಗಳನ್ನು ತಿಳಿಸುವುದು. ಪ್ರತಿ ವರ್ಷ ಶೇ.75% ಕಡಿಮೆ ಇರಬಾರದು.

ಸೂಚನೆ: ಮೇಲಿನ ಗುಣಮಟ್ಟಕ್ಕಿಂತ ಕಡಿಮೆಯಾದರೆ ಪದಕವನ್ನು ಹಿಂದಿರುಗಿಸಬೇಕು.

83. ಸಮುದ್ರದ ಮೀನುಗಾರ್ತಿ - Sea Fisher Woman :

1. ಮೀನು ಹಿಡಿಯುವ ವಿವಿಧ ವಿಧಾನಗಳನ್ನು ತಿಳಿದಿರಬೇಕು. ಉದಾ: ಗಾಣ, ಬಲೆ.
2. ವಿವಿಧ ಬಲೆಯನ್ನು ಹೆಣೆಯುವುದು, ಬಳಸುವುದು, ದುರಸ್ತಿ ಮಾಡುವುದು ತಿಳಿದಿರಬೇಕು.
3. ಬಿರುಗಾಳಿ ಮತ್ತು ಸಮುದ್ರದಲ್ಲಿನ ವಿಕೋಪಗಳ ಮುನ್ಸೂಚನೆ ತಿಳಿದಿರಬೇಕು.
4. ಸ್ಥಳೀಯವಾಗಿ ಹಿಡಿಯುವ ಮೀನುಗಳ ಹೆಸರುಗಳನ್ನು ತಿಳಿದಿರಬೇಕು.

84. ಕಾರ್ಯದರ್ಶಿ - Secretary :

1. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಆಡಳಿತ ವ್ಯವಸ್ಥೆಯ ಸಾಮಾನ್ಯ ಅರಿವು ಹೊಂದಿರುವುದು. ದಳ, ಗುಂಪು, ಸ್ಥಳೀಯ ಸಂಸ್ಥೆ, ಜಿಲ್ಲಾ ಸಂಸ್ಥೆ ದಳದ ಆಡಳಿತ ವ್ಯವಸ್ಥೆಯಾದ ಅಷ್ಟಕ ಮಂಡಳಿ ಮತ್ತು ದಳದ ಗೌರವ ನ್ಯಾಯ ಸಭೆಯ ಬಗ್ಗೆ ತಿಳಿದಿರುವುದು.

2. ಪರೀಕ್ಷಕರ ಸಮ್ಮುಖದಲ್ಲಿ 250 ಪದಗಳ ಸ್ಪಷ್ಟ ಅಕ್ಷರಗಳಿಂದ ಕೂಡಿದ ಬರಹವನ್ನು ಬರೆಯುವುದು ಅಥವಾ 100 ಪದಗಳ ಬರಹವನ್ನು 5ಕ್ಕಿಂತ ಹೆಚ್ಚು ತಪ್ಪಿಲ್ಲದಂತೆ ಬೆರಳಚ್ಚು ಮಾಡುವುದು ಬೆರಳಚ್ಚು ಯಂತ್ರವನ್ನು ಸ್ವಚ್ಛಮಾಡಿ ಟೇಪ್‌ನ್ನು ಬದಲಾಯಿಸುವುದು. (ಗಣಕಯಂತ್ರವನ್ನು ಬಳಸಬಹುದು)

3. ಒಂದು ಸಮಿತಿಯ ಸಭೆಯ ನಡವಳಿಕೆಯನ್ನು ಬರೆಯುವ ಕ್ರಮವನ್ನು ತಿಳಿಯುವುದರ ಜೊತೆಗೆ ಕಾರ್ಯಸೂಚಿ ಸಿದ್ಧಪಡಿಸುವುದು ಮತ್ತು ಟಿಪ್ಪಣಿ ಬರೆದುಕೊಳ್ಳುವುದು.

4. ಗೈಡ್ ದಳದ ಆರ್ಥಿಕ ವ್ಯವಸ್ಥೆ, ರಸೀದಿ ಮತ್ತು ಪಾವತಿಯ ಲೆಕ್ಕಾಚಾರಗಳನ್ನು ದಳ ಅಥವಾ ಅಷ್ಟಕದ ಮಟ್ಟಕ್ಕೆ ಸಿದ್ಧಪಡಿಸುವುದು. ಬ್ಯಾಂಕ್‌ನಲ್ಲಿ ವೈಯಕ್ತಿಕ ಲೆಕ್ಕಾಚಾರವನ್ನು ಹೇಗೆ ನಿರ್ವಹಿಸಬೇಕೆಂಬುದನ್ನು ತಿಳಿಯುವುದು.

5. ಪರೀಕ್ಷಕರು ಆಯ್ಕೆ ಮಾಡಿದ ವಿಷಯದ ಮೇಲೆ ಒಂದು ಪತ್ರ ಬರೆಯುವುದು, ಆಹ್ವಾನ ಪತ್ರಿಕೆಯ ಕರಡನ್ನು ತಯಾರಿಸುವುದು. ಗುಂಪು/ದಳ/ಅಷ್ಟಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಭಾಷಣ ಬರೆಯುವುದು.

6. ಗುಂಪಿನ ಕಾರ್ಯಕ್ರಮದ ಬಗ್ಗೆ ಲೇಖನ ಬರೆದು ಪತ್ರಿಕೆಯಲ್ಲಿ ಪ್ರಕಟಿಸಿ, ಅಥವಾ ಗುಂಪು/ದಳ/ಜಿಲ್ಲೆಯ ಕಾರ್ಯಕ್ರಮಗಳ ವರದಿಯನ್ನು ಬರೆದು ಗೈಡ್ ಮಾಸಿಕ ಪತ್ರಿಕೆಯಲ್ಲಿ ಪ್ರಕಟಿಸುವುದು.

7. ಕಾರ್ಯದರ್ಶಿನಿಯಾಗಿ ಗೌರವ ನ್ಯಾಯಸಭೆ ಅಥವಾ ಯಾವುದಾದರೂ ಶಾಲಾ ಸಮಿತಿ ಅಥವಾ ಶಾಲೆಯೇತರ ಮಕ್ಕಳ ಸಂಘ ಸಂಸ್ಥೆಯಲ್ಲಿ

ಗೈಡ್ ನಾಯಕಿಗೆ ತೃಪ್ತಿಯಾಗುವಂತೆ ಕಾರ್ಯದರ್ಶಿನಿಯಾಗಿ ಅಥವಾ ಅಧ್ಯಕ್ಷಳಾಗಿ ಮೂರು ತಿಂಗಳು ಕಾರ್ಯ ನಿರ್ವಹಿಸುವುದು.

85. ಸ್ವ–ರಕ್ಷಣೆ - Self defence :

ಕರಾಟೆ ಅಥವಾ ಜೂಡೋ

ಅ) ಕರಾಟೆ.

ಮೈಮೇಲೆ ದಾಳಿ ಮಾಡುವವರ ವಿರುದ್ಧ ಕರಾಟೆ ಮಾದರಿಯ ಸಂರಕ್ಷಣೆಯನ್ನು ಪಡೆಯಲು ಅರ್ಹ ಕರಾಟೆ ತಜ್ಞರಿಂದ ಕ್ರಮಬದ್ಧ ವಿಧಾನವನ್ನು ಅರಿತಿರುವುದು ಅವಶ್ಯಕ.

ಪರೀಕ್ಷಕರಿಗೆ ಕೆಳಗಿನ ಗುಂಪುಗಳಲ್ಲಿ ಯಾವುದಾದರೂ ಎರಡನ್ನು ಮಾಡಿ ತೋರಿಸಲು ಸಮರ್ಥರಿರಬೇಕು.

ಗುಂಪು – ಅ

ಪ್ರಚೋದನಾ ವ್ಯಾಯಾಮಗಳು, ಕರಾಟೆ ಸ್ಟಾನ್ಸ್ (Stances), ಗುದ್ದುವ ಮತ್ತು ಎಳೆಯುವ ತಂತ್ರಗಳು, ಉಸಿರಾಡುವ ತಂತ್ರಗಳು; ಯಾವುದಾದರೂ 4 ಕರಾಟೆ ಕ್ರಮಗಳು–ತುಡುಕಿ ದಾಳಿ ಮಾಡುವ ವಿರುದ್ಧ ರಕ್ಷಣೆ:

ಗುಂಪು – ಆ

ಕಾವೇರುವ ವ್ಯಾಯಾಮಗಳು; ಕರಾಟೆ ರಕ್ಷಣಾ ತಂತ್ರಗಳು.

ಆ) ಜೂಡೋ

ಅರ್ಹ ತರಬೇತಿದಾರರು ಕೊಡುವ ತರಗತಿಗೆ ಸೇರಿರಬೇಕು.

1. ಕೆಳಗಿನವುಗಳಲ್ಲಿ ಯಾವುದಾದರೂ ಎರಡನ್ನು ಪ್ರದರ್ಶಿಸಲು ಮತ್ತು ಅರ್ಥ ವಿವರಿಸಲು ಸಮರ್ಥರಿರಬೇಕು.

ಅ) ಬದಿಗೆ ಬೀಳುವುದನ್ನು ತಡೆಗಟ್ಟುವುದು ಮತ್ತು ಎಬ್ಬಿಸುವುದು ಮತ್ತು ಮುಂದೆ ಉರುಳುವುದು.

ಆ) ಸಮತೋಲನವನ್ನು ಕಳೆಯುವುದು.

ಇ) ಮೂಲಭೂತ ಸ್ಥಿತಿಗಳು ತಸುಗಿಯಾಷಿ ಮತ್ತು ತೆಸ್ವಾಕಿ.

ಈ) ಜೊಂಡು ಎತ್ತಿ ಎಸೆಯುವುದು.

ಉ) ಒ–ಸೋತೋ–ಗಾರಿ

ಊ) ಕೆಸಾಗಟಮೆ.

2. ಸ್ವ–ರಕ್ಷಣೆಯ ಮೂಲ ಜ್ಞಾನದ ಜೊತೆಗೆ.

ಅ) ಶರೀರದ ಮೇಲೆ ಕನಿಷ್ಠ ಆರುಪಟ್ಟು ದಾಳಿ ಮಾಡಬಹುದಾದ ಸ್ಥಾನ ತಿಳಿದಿರಬೇಕು.

ಆ) ಕುತ್ತಿಗೆ ಹಿಸುಕಿ ಕೊಲ್ಲುವ ಎದುರಾಳಿಯಿಂದ ಮುಂಗೈ ಹಿಡಿತದಿಂದ ತಪ್ಪಿಸಿಕೊಳ್ಳುವ ಅಥವಾ ಬಿಡಿಸಿಕೊಳ್ಳುವ ವಿಧಾನ ತಿಳಿದಿರಬೇಕು.

86. ದಾದಿ (ರೋಗ ಶುಶ್ರೂಷಕಿ) - Nurse :

ಬಿಳಿ ಅಡ್ಡಗೆರೆ ಕೆಂಪು ತಳದ ಮೇಲೆ ಬಿಳಿ ಅಂಚಿನ ಜೊತೆ.

1. ರೋಗಿಗಳ ಕೊಠಡಿಯ ಸಿದ್ಧತೆ ಹಾಗೂ ಗವಾಕ್ಷಿ ಕುರಿತು ಪ್ರಶ್ನೆಗಳಿಗೆ ಉತ್ತರಿಸುವುದು.

2. ರೋಗಿಗಳಿಗೆ ಹಾಸಿಗೆಯನ್ನು ಸಿದ್ಧಗೊಳಿಸುವುದು, ಮೇಲು ಹಾಸನ್ನು ಬದಲಾಯಿಸುವುದು. ವೈದ್ಯಕೀಯ ಉಷ್ಣತಾಮಾಪಿ ಮತ್ತು ವಾಯು

ಉಷ್ಣತಾಮಾಪಿಯನ್ನು ಬಳಸುವುದು, ನಾಡಿ ಮತ್ತು ಉಸಿರಾಟ ಎಣಿಸುವುದು, ರೋಗಿಯನ್ನು ಸ್ವಚ್ಛಗೊಳಿಸಿ ಉಡುಪನ್ನು ಬದಲಾಯಿಸುವುದುನ್ನು ತಿಳಿದಿರುವುದು.

3. ರೋಗಾಣು ಜೀವಿಗಳು ಅವುಗಳ ಬೆಳವಣಿಗೆ ಮತ್ತು ತಡೆಗಟ್ಟುವ ಕ್ರಮಗಳ ಬಗ್ಗೆ ತಿಳಿದಿರುವುದು.

4. ಮಲೇರಿಯ, ಪ್ಲೇಗು, ಮಡಿವಾಳ ತುರಿಕೆ, ಅಮ್ಮ, ಕಾಲರ, ನಾಯಿ ಕೆಮ್ಮು, ಗದಕಟ್ಟು, ಇನ್‌ಪ್ಲೂಯೆನ್ಸಾ, ಕರಳು ಜ್ವರ ಇವುಗಳ ಲಕ್ಷಣಗಳನ್ನು ತಿಳಿಯುವುದು, ಕ್ಷಯ ರೋಗದ ಲಕ್ಷಣಗಳನ್ನು ಮತ್ತು ಪ್ರಾರಂಭಿಕ ಚಿಕಿತ್ಸೆಯನ್ನು ತಿಳಿಯುವುದು.

5. ಔಷಧಿಯನ್ನು ಕೊಡುವುದು, ಬಾಹ್ಯಲೇಪನ ಮಾಡುವುದು ಬಿಸಿ ಮತ್ತು ತಂಪಿನ ಚಿಕಿತ್ಸೆ ನೀಡುವುದು, ಪೋಟ್ಲೀಸ್ ಹಾಕುವುದು ಶಾಖ ಕೊಡುವುದನ್ನು ತಿಳಿದಿರಬೇಕು.

6. ರೋಗಗ್ರಸ್ತರಿಗೆ ಮತ್ತು ರೋಗ ಪರಿಹಾರವಾಗುತ್ತಿರುವವರಿಗೆ ನೀಡುವ ಆಹಾರದ ಬಗೆಗಿನ ಪ್ರಶ್ನೆಗಳಿಗೆ ಉತ್ತರಿಸುವುದು. ಯಾವುದಾದರೂ ಎರಡು ಪಥ್ಯದ (diet) ತಿನಿಸುಗಳನ್ನು ತಯಾರಿಸುವುದು.

7. ರೋಗಗಳ ಸೂಚನೆ ಸಂಕೇತ ಮತ್ತು ಚಿನ್ಹೆಗಳನ್ನು ತಿಳಿದುಕೊಂಡು ಸೂಕ್ತ ವೈದ್ಯರಲ್ಲಿಗೆ ಹೋಗಲು ರೋಗಿಗೆ ಮಾರ್ಗದರ್ಶನ ನೀಡುವುದು.

8. ಬೆರಳು ಪಟ್ಟಿ, ಕೈಪಟ್ಟಿ, ಕಾಲುಪಟ್ಟಿ ಈ ಪಟ್ಟಿಗಳನ್ನು ಕಟ್ಟುವುದರಲ್ಲಿ ಪ್ರಾವೀಣ್ಯತೆಯನ್ನು ಪಡೆದಿರುವುದು.

87. ಸಂಕೇತಗಾರ್ತಿ - Signaller :

1. ಸೆಮೋಫೋರ್ ಸಂಕೇತದ ಮೂಲಕ ಒಂದು ನಿಮಿಷದಲ್ಲಿ 35 ಅಕ್ಷರಗಳಿಂದ ಕೂಡಿದ 7 ಪದಗಳ ಸುದ್ದಿಯನ್ನು ಅಥವಾ ಮೋರ್ಸ್ ಸಂಕೇತದ ಮೂಲಕ 35 ಅಕ್ಷರಗಳಿಂದ ಕೂಡಿದ 5 ಪದಗಳ ಸುದ್ಧಿಯನ್ನು ಒಂದು ನಿಮಿಷದಲ್ಲಿ ಕಳುಹಿಸುವುದು

2. 20 ಝೇಂಕಾರಕ (buzzer) ಅಥವಾ ಶಬ್ದಕಾರಕ (sounder) ಮೂಲಕ ಒಂದು ನಿಮಿಷಕ್ಕೆ 30 ಅಕ್ಷರಗಳಿಂದ ಕೂಡಿದ 6 ಪದಗಳನ್ನು ಕಳುಹಿಸುವುದು ಮತ್ತು ಸ್ವೀಕರಿಸುವುದು.

3. ದೀಪ ಅಥವಾ ಬೀಸು ತಟ್ಟೆಯ (Disc) ಸಹಾಯದಿಂದ 25 ಅಕ್ಷರಗಳಿಂದ ಕೂಡಿದ 5 ಪದಗಳನ್ನು ಒಂದು ನಿಮಿಷದಲ್ಲಿ ಕಳುಹಿಸುವುದು ಮತ್ತು ಸ್ವೀಕರಿಸುವುದು.

   ಸೂಚನೆ: ಮೇಲಿನ ಎಲ್ಲಾ ಪರೀಕ್ಷೆಗಳಲ್ಲಿ ಶೇ 90 ರಷ್ಟು ನಿಖರವಾಗಿರಬೇಕು.

4. ಸುದ್ಧಿಯನ್ನು ಕಳುಹಿಸುವ ಮತ್ತು ಸ್ವೀಕರಿಸುವ ಒಂದು ಅಧಿಕೃತ ವಿಧಾನವನ್ನು ಪ್ರದರ್ಶಿಸುವುದು.

5. 'ಸ್ಕೌಟಿಂಗ್ ಫಾರ್ ಬಾಯ್ಸ್' ಪುಸ್ತಕದಲ್ಲಿ ಕೊಟ್ಟಿರುವ ಚಿನ್ಹೆ ಮತ್ತು ಸಂಕೇತಗಳನ್ನು ತಿಳಿದುಕೊಳ್ಳುವುದು.

6. ಮೋರ್ಸ್ ಅಥವಾ ಸೆಮೊಫೋರ್ ಸಂಕೇತದ ಮೂಲಕ 1. ಕಿ.ಮೀ. ದೂರಕ್ಕೆ 20 ಅಕ್ಷರಗಳಿಂದ ಕೂಡಿದ ನಾಲ್ಕು ಪದಗಳನ್ನು

ನಿಮಿಷದಲ್ಲಿ ಕಳುಹಿಸುವ ಎರಡು ಸುಧಾರಿತ ವಿಧಾನಗಳನ್ನು ಕಂಡುಹಿಡಿಯುವುದು.

ಸೂಚನೆ : ಕಳುಹಿಸುವ ಕೇಂದ್ರ ಮತ್ತು ಸ್ವೀಕರಿಸುವ ಕೇಂದ್ರವು 150 ಮೀ. ದೂರ ಇರಬೇಕು. ಹೊರಾಂಗಣದಲ್ಲಿರಬೇಕು. ಝೇಂಕಾರಕ ಮತ್ತು ಶಬ್ದಕಾರಕಗಳಿದ್ದರೆ. ಬೇರೆ ಬೇರೆ ಕೊಠಡಿಯಲ್ಲಿರಬೇಕು.

88. ಗಾಯಕಿ-Singer :

ಒಂದು ಜಾನಪದ ಗೀತೆ, ಪಥಸಂಚಲನ ಗೀತೆ, ಅಭಿನಯಗೀತೆ, ಪ್ರಾರ್ಥನಾಗೀತೆ, ಲಘು ಸಂಗೀತ ಮತ್ತು ಅವಳ ಆಯ್ಕೆಯ ಹಾಡುಗಳನ್ನು ಹೇಳಲು ಸಮರ್ಥಳಾಗಿರಬೇಕು.

ಸೂಚನೆ : ಸರಿಯಾದ ರಾಗ ಮತ್ತು ಭಾವಕ್ಕೆ ಮಾನ್ಯತೆ ನೀಡುವುದು.

89. ಮಣ್ಣಿನ ಸಂರಕ್ಷಕಿ - Soil Conservator:

1. ಸವಕಳಿ, ಸಾರಿಗೆ ಮತ್ತು ಸಂಗ್ರಹಗಳಿಂದ ಭೂ ಮೇಲ್ಮೈಯಲ್ಲಿ ಉಂಟಾಗಿರುವ ಬದಲಾವಣೆಯ ಬಗ್ಗೆ ಕಾರಣ ತಿಳಿಯುವುದು.
2. ಮಣ್ಣು ಸವಕಳಿಯ ವಿಧಗಳು, ಅಪಾಯಗಳು, ಕಾರಣಗಳು ಮತ್ತು ಸಮಸ್ಯೆಗಳನ್ನು ತಡೆಯುವ ವಿಧಾನಗಳ ಬಗ್ಗೆ ಸಾಮಾನ್ಯ ಅರಿವನ್ನು ಪಡೆಯುವುದು.
3. ನಮ್ಮ ರಾಷ್ಟ್ರದಲ್ಲಿ ಮಣ್ಣಿನ ಸಂರಕ್ಷಣೆಗಾಗಿ ಕೈಗೊಂಡಿರುವ ಕಾರ್ಯಕ್ರಮಗಳ ಮಾಹಿತಿಯನ್ನು ಮತ್ತು ಮಣ್ಣಿನ ಸವಕಳಿ, ಕಾಡು ಬೆಳೆಸುವುದು ಮತ್ತು ನೀರಿನ ಅಭಾವದ

ಪರಿಹಾರದ ಬಗ್ಗೆ ಅಧ್ಯಯನ ಮಾಡಿ ಒಂದು ಸಮಗ್ರ ಪುಸ್ತಕವನ್ನು ತಯಾರಿಸುವುದು. ಮೂರು ತಿಂಗಳ ಕಾಲ ತನ್ನ ಬಡಾವಣೆಯಲ್ಲಿ ಮಣ್ಣಿನ ಸಂರಕ್ಷಣೆಯ ಸ್ಥಳೀಯ ಸಮಸ್ಯೆಗಳನ್ನು ವೀಕ್ಷಿಸಿ, ಅಧ್ಯಯನ ಮಾಡಿ ಒಂದು ಸಮಗ್ರ ಪುಸ್ತಕವನ್ನು ಸಿದ್ಧಪಡಿಸುವುದು.

4. ಗಿಡ ನೆಡುವ ಮರ ಬೆಳೆಸುವ ಹಳ್ಳಗಳನ್ನು ತುಂಬುವ ಮೂಲಕ ಮಣ್ಣನ್ನು ರಕ್ಷಿಸುವ ವಿಧಾನಗಳ ಮಹತ್ವವನ್ನು ತಿಳಿಯುವುದು 40 ಗಂಟೆಗಳ ಕಾಲ ಮಣ್ಣಿನ ಸಂರಕ್ಷಣಾ ಸೇವಾ ಯೋಜನೆಯಲ್ಲಿ ಭಾಗವಹಿಸಿ ಸೇವಾ ವರದಿಯ ಪುಸ್ತಕವನ್ನು ಸಿದ್ಧಗೊಳಿಸಿ ಸಲ್ಲಿಸುವುದು.

5. ಸಮಷ್ಟಿಯ ಸಹಾಯದಿಂದ 10 ಗಿಡಗಳನ್ನು ನೆಡುವುದು ಮತ್ತು 3 ತಿಂಗಳ ಕಾಲ ಗಿಡಗಳನ್ನು ನೋಡಿಕೊಳ್ಳುವುದು.

6. ಮಣ್ಣಿನ ಸಂರಕ್ಷಣೆಯ ಮಂಡಲಿಯಲ್ಲಿ ಕೆಲಸಮಾಡುವುದು ಮತ್ತು ಪ್ರಯೋಗ ಮಾಡುವುದು. ಈ ಸಂಸ್ಥೆಯ ಬಗ್ಗೆ ಸಾಮಾನ್ಯ ಮಾಹಿತಿ ಸಂಗ್ರಹಿಸುವುದು.

90. ಸೌರಶಕ್ತಿ ಜಾಗೃತಿ - Solar Energy awareness :



1. ಸೌರಶಕ್ತಿಯು ಸೂರ್ಯನಿಂದ ಯಾವ ಯಾವ ಸ್ಥಳದಲ್ಲಿ ಯಾವ ಯಾವ ಸಮಯದಲ್ಲಿ ಎಷ್ಟೆಷ್ಟು ದೊರೆಯುತ್ತದೆ ಮತ್ತು ಏನಾಗುತ್ತದೆ ಎಂದು ತಿಳಿಯುವುದು. ಕ್ಷಿತಿಜ ಹಾಗೂ ನಿಜ ಉತ್ತರದಿಂದ ಸೂರ್ಯನ ಚಲನೆಯನ್ನು ತಿಳಿಯಲು ಸೂರ್ಯನ ಸ್ಥಾನ ಕೋನಮಾಪಕ ಬಳಸುವುದು. ಸೌರ ಯಂತ್ರ ಮಾಡಿ ಬಳಸುವುದು. ಭಾರತೀಯ ಪಂಚಾಂಗ ಬಳಸುವುದು.

2. ಶಾಖಾ ಮತ್ತು ವಿದ್ಯುತ್ತನ್ನು ಪಡೆಯಲು ಸೌರಶಕ್ತಿಯನ್ನು ಸಂಗ್ರಹಿಸುವ ಮತ್ತು ದಾಸ್ತಾನು ಮಾಡುವ ವಿವಿಧ ವಿಧಾನಗಳನ್ನು ತಿಳಿಯುವುದು ಚಪ್ಪಟೆ ತಟ್ಟೆ, ಕೇಂದ್ರೀಕೃತ ಸಂಗ್ರಹ, ಗಾಜಿನ ಮುಚ್ಚಳಿಕೆ ಪ್ರತಿಫಲನ ಫಲಕಗಳ ಬಗ್ಗೆ ತಿಳಿಯುವುದು. ಕನಿಷ್ಠ ಎರಡು ವಿಧದ ಸೌರ ಒತ್ತಡ ಪಾತ್ರೆ ಶುಷ್ಕ ಕಾರಕಗಳು ಬಟ್ಟೆ ಇಳಿಸುವುದು, ಸೌರ ಒಲೆ, ಸೌರದೀಪ, ಸೌರಪಂಪು, ಸೌರಶಕ್ತಿಯಿಂದ ಟಿ.ವಿ. ಬಳಸುವ ಉಪಯೋಗ, ಯೋಗ್ಯವಾದ ಯಾವುದಾದರೂ ಎರಡು ಮಾದರಿಯನ್ನು ಮಾಡುವುದು.

3. (ಅ) ಕನಿಷ್ಟ ಮೂರು ವಿಧದ ಸೌರ ಸಲಕರಣೆಗಳನ್ನು ನೋಡಿ ಕಾರ್ಯಗಳನ್ನು ವಿವರಿಸುವುದು.

   (ಆ) ಸೌರ ಅಡಿಗೆ ಪಾತ್ರೆ ಸೌರ ನೀರು ಒಲೆಗಳನ್ನು ಬಳಸುವುದನ್ನು ತಿಳಿದಿರುವುದು.

4. ಸೌರಶಕ್ತಿಯ ಬಳಕೆಯಿಂದಾಗುವ ಅನುಕೂಲತೆ ಮತ್ತು ಪ್ರತಿಕೂಲತೆಗಳನ್ನು ತಿಳಿಯುವುದು. ಸೌರ ಸಲಕರಣೆ ತಯಾರಕರು, ಪರೀಕ್ಷಕರು ಸಹಾಯ ಮಾಡುವ ಸರಕಾರಿ ಮತ್ತು ಇತರೆ ಸಂಘ ಸಂಸ್ಥೆಗಳ ಬಗ್ಗೆ ತಿಳಿಯುವುದು.

91. ನಕ್ಷತ್ರ (ತಾರಾ) ವೀಕ್ಷಕರು - Star Gazer :

1. ನಕ್ಷತ್ರಗಳನ್ನು ಗ್ರಹಗಳನ್ನು ಮತ್ತು ಚಂದ್ರನನ್ನು ಕಿಟಕಿ, ತೋಟ, ಹತ್ತಿರದ ಮನೆ, ಬಯಲು, ಮೇಲ್ಛಾವಣಿಯಿಂದ ಮೂರು ತಿಂಗಳಕಾಲ ವೀಕ್ಷಿಸಿ ಒಂದು ಮಾಹಿತಿ ಪುಸ್ತಕ ತಯಾರಿಸುವುದು.

ಸೂಚನೆ: ಪ್ರತಿದಿನವು ಒಂದೇ ಸಮಯಕ್ಕೆ ನೋಡಿ ವಾರಕ್ಕೆ ಒಂದಾದರು ವೀಕ್ಷಣಾ ವರದಿಯನ್ನು ಕ್ರಮವಾಗಿ ಬರೆಯುವುದು.

2. ಸೂರ್ಯ, ಚಂದ್ರ, ಭೂಮಿ ಮತ್ತು ಗ್ರಹಗಳ ಗಾತ್ರ, ಸ್ಥಾನ ಮತ್ತು ಪಥವನ್ನು ತೋರಿಸುವ ಮಾದರಿ (ಸೌರವ್ಯೂಹ) ಮಾದರಿಗೆ ಆದ್ಯತೆ ನೀಡುವುದು ಚಿತ್ರವನ್ನು ಪ್ರದರ್ಶಿಸುವುದು.

3. ಆಕಾಶದಲ್ಲಿ ತೋರಿಸಿ :

   ಅ) ವರ್ಷಪೂರ್ತಿ ಕಾಣುವ ಕನಿಷ್ಟ ನಾಲ್ಕು ನಕ್ಷತ್ರ ಪುಂಜಗಳು.

   ಆ) ವರ್ಷಪೂರ್ತಿ ಕಾಣದೇ ಆಗಾಗ್ಗೆ ಕಾಣಿಸಿಕೊಳ್ಳುವ ನಾಲ್ಕು ನಕ್ಷತ್ರ ಪುಂಜಗಳು.

   ಇ) ಕನಿಷ್ಟ ನಾಲ್ಕು ನಕ್ಷತ್ರಗಳು ಯಾವ ಪುಂಜಕ್ಕೆ ಸೇರಿವೆ ಅವುಗಳು ಯಾವ ಕಾಲದಲ್ಲಿ ಕಾಣಿಸಿಕೊಳ್ಳುತ್ತವೆ.

4. ನಕ್ಷತ್ರದ ಮೂಲಕ ದಿಕ್ಕುಗಳನ್ನು ಗುರುತಿಸುವುದು.

92. ಈಜುಗಾರ್ತಿ - Swimmer :

1. ಎದೆ ವರಸೆ ಉಪಯೋಗಿಸಿ 45.70 ಮೀಟರ್ ಈಜುವುದು.

2. ತೋಳು ಎತ್ತಿ ಬಡಿಯುತ್ತಾ 22.85 ಮೀಟರ್ ಈಜುವುದು. ನೀರಿನಲ್ಲಿ ನಡೆ/ತೋಳು/ಹಿಂದಕೆ/ತೆವಳುತ್ತಾ ಈಜುವುದು.

3. ತೋಳನ್ನು ಬಳಸದೇ ಬೆನ್ನಿನ ಮೇಲೆ 22.85 ಮೀ. ಈಜುವುದು.

4. ಯಾವುದಾದರೂ ಪಟ್ಟು ಉಪಯೋಗಿಸಿ 30 ಸೆಕೆಂಡಿನಲ್ಲಿ 22.85 ಮೀ. ಈಜುವುದು (ಇದನ್ನು ಒಂದು ಮತ್ತು ಎರಡನೆಯ ಅಂಶಗಳಲ್ಲಿ ಪರೀಕ್ಷಿಸಬಹುದು)

5. ಪೂರ್ಣವಾಗಿ ನಿತ್ಯದ ಉಡುಗೆ ತೊಟ್ಟು 22.85 ಮೀಟರ್ ಈಜುವುದು.

6. 2 ಮೀಟರ್ ಗೆ ಕಡಿಮೆ ಇಲ್ಲದಂತೆ ನೀರಿನ ತಳದಲ್ಲಿ ಇಟ್ಟಿರುವ ಇಟ್ಟಿಗೆಯನ್ನು ಎತ್ತುವುದು.

7. ಮೇಲಿನಿಂದ ನೀರಿಗೆ ಧುಮುಕುವುದು. (Diving)

8. ಅಲುಗಾಡದಂತೆ 20 ಸೆಕೆಂಡ್ ಯಾವ ಭಂಗಿಯಲ್ಲಾದರೂ ತೇಲುವುದು.

9. ಕೆಳಗಿನವುಗಳನ್ನು ವಿವರಿಸಿ

   – ಸ್ನಾಯು ಸೆಡೆತವನ್ನು (Muscle Cramps) ತಡೆಗಟ್ಟುವುದು.
   – ಅಪರಿಚಿತ ಸ್ಥಳದಲ್ಲಿ ಈಜುವಾಗ ಮತ್ತು ನೀರಿಗೆ ಹಾರುವಾಗ ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳು
   – ಹೆಚ್ಚು ಸಂಖ್ಯೆಯಲ್ಲಿ ಈಜುವಾಗ ಮಾಡಬೇಕಾದ ವ್ಯವಸ್ಥೆ.

10. ಪರೀಕ್ಷಕರಿಗೆ ತೃಪ್ತಿಯಾಗುವಂತೆ ಈಜುಬಾರದವರಿಗೆ ಈಜುವಿಕೆಯ ಮೂಲತತ್ವವನ್ನು ಸಮರ್ಥವಾಗಿ ತಿಳಿಯ ಹೇಳುವುದು.

93. ಸಿಂಪಿಗಿತ್ತಿ - Tailor :

1. ಹತ್ತಿ ಮತ್ತು ಉಣ್ಣೆ ಬಟ್ಟೆಯಲ್ಲಿ ಪರೀಕ್ಷಕರು ಕೊಟ್ಟಿರುವ ಮಾದರಿಯನ್ನು ಕತ್ತಿರಿಸಿ ಸರಳ ಉಡುಪನ್ನು ಸಿದ್ಧಗೊಳಿಸುವುದು.

2. ಇವುಗಳನ್ನು ಸ್ವತಃ ಮಾಡಿ ಪರೀಕ್ಷೆಗೆ ತರಬೇಕು.

   ಅ) ತೋಳು ಇರುವ ಕುಪ್ಪಸ / ಮಗುವಿನ ಅಂಗಿ, (ಫ್ರಾಕ್)

ಆ) ಒಂದು ಜೊತೆ ಕಾಜಾ ಅಥವಾ ಒಂದು ಜೊತೆ ಒಳಲಂಗ.

ಸೂಚನೆ: ಬೇಕಾದಲ್ಲಿ ಇವುಗಳಲ್ಲಿ ಒಂದನ್ನು ಯಂತ್ರದಲ್ಲಿ ಹೊಲಿಯುವುದು.

3. ಪರೀಕ್ಷೆಯಲ್ಲಿ ಕಾಜಾ ಮಾಡುವುದು, ಮೂಲೆಯಲ್ಲಿ ಮಡಿಚುವಾಗ ನೆರಿಗೆ ಹಿಡಿಯುವುದು, ತುದಿಯನ್ನು ಮಡುಚುವುದು, ಹತ್ತಿ ಬಟ್ಟೆಯಲ್ಲಿ ತೇಪೆ ಹಾಕಲು, ಫ್ಲಾನಲ್ ಬಟ್ಟೆ, ಅಥವಾ ನೇಯ್ದ ಬಟ್ಟೆಗಳನ್ನು ಬಳಸಿ ಚಿತ್ತಾರ ಮಾಡುವುದು. ಕನಿಷ್ಟ ಎರಡು ಹರಿದ ಭಾಗವನ್ನು ಎಳೆ ತುಂಬಿ ಹೊಲಿದು ಪ್ರದರ್ಶಿಸುವುದು.

94. ಜಾಡುಗಾಮಿ - Tracker

1. ಮೂರು ವಿವಿಧ ಮನುಷ್ಯರ ಹೆಜ್ಜೆ ಗುರುತುಗಳನ್ನು ಮತ್ತು ಪಾದರಕ್ಷೆ ಗುರುತುಗಳನ್ನು ಗುರುತಿಸಿ, ಅವುಗಳ ವಿವಿಧ ಲಕ್ಷಣಗಳನ್ನು ವಿವರಿಸುವುದು.

2. ಮರಳು, ಮಂಜು ಅಥವಾ ಯಾವುದಾದರು ವಸ್ತುಗಳ ಮೇಲೆ ಹೆಜ್ಜೆಗುರುತುಗಳಿಂದ ಹೆಣೆದಿರುವ, ಜಾಡುಗಥೆಯಲ್ಲಿ ಬರುವ ಸಮಸ್ಯೆಗಳನ್ನು ಸರಿಯಾದ ಕಾರಣಗಳನ್ನು ಹುಡುಕಿ ಪರಿಹಾರ ಸೂಚಿಸುವುದು.

3. ಕಾರು, ಸೈಕಲ್, ಟಾಯರ್‌ನ ಗುರುತು, ಪಕ್ಷಿ ಪ್ರಾಣಿಗಳ ಹೆಜ್ಜೆ ಗುರುತುಗಳ ಆಕೃತಿಗಳನ್ನು ತೆಗೆಯುವುದು ಸ್ವತಃ ಅಚ್ಚುಗಳನ್ನು ಮಾಡಿ ತೆಗೆದು ತಾರೀಖು, ಹೆಸರು ಮತ್ತು ಸ್ಥಳವನ್ನು ಬರೆದಿಡುವುದು. ಇವುಗಳಲ್ಲಿ ಕನಿಷ್ಟ ಎರಡು ವನ್ಯ ಪಕ್ಷಿಗಳ ಮತ್ತು ವನ್ಯ ಪ್ರಾಣಿಗಳ ಅಚ್ಚುಗಳಾಗಿರಬೇಕು.

4. ನೈಸರ್ಗಿಕ ವಸ್ತುಗಳಿಂದ 1 ಕಿ.ಮೀ. ದೂರದವರೆಗೆ ವಿವಿಧ ರೀತಿಯ ಜಾಡುಗಳನ್ನು ಹಾಕುವುದು. ಕನಿಷ್ಟ 40 ಸಂಕೇತಗಳನ್ನು ಬಳಸುವುದು ಜಾಡನ್ನು ದ್ವಿತೀಯ ಸೋಪಾನ ಮಾಡಿರುವ ಗೈಡ್‌ಳನ್ನು ಅನುಸರಿಸುವುದು.

95. ಮಿತವ್ಯಯಿ - Thrifty :

1. ಗೈಡಳು ಒಂದು ವರ್ಷಕಾಲ ಅಂಚೆಕಛೇರಿ ಬ್ಯಾಂಕ್/ಸಹಕಾರ ಸಂಘಗಳಲ್ಲಿ, ಸಣ್ಣ ಉಳಿತಾಯ ಖಾತೆಯನ್ನು ತೆಗೆದು ಪ್ರತಿವಾರ ಅಥವಾ ತಿಂಗಳಿಗೊಮ್ಮೆ ಹಣ ಪಾವತಿ ಮಾಡುವುದು ಹಣವು ತನ್ನ ಪುಡಿಕಾಸಿನ (Pocket Money) ಉಳಿತಾಯವಾಗಿರಬೇಕು. 50 ರೂ.ಗಳಿಗೆ ಕಡಿಮೆ ಇಲ್ಲದಂತೆ ಉಳಿತಾಯ ಮಾಡಬೇಕು. ಪ್ರತಿವರ್ಷವೂ ವಾರ್ಷಿಕ ಉಳಿತಾಯಕ್ಕೆ ಹಣ ಸೇರಿಸುತ್ತಾ ಹೋದರೆ ಮಾತ್ರ ಪದಕ ಅವಧಿಯನ್ನು ವಿಸ್ತರಿಸುತ್ತಾ ಹೋಗಬಹುದು.

   ತನ್ನ ಪುಡಿಕಾಸು ಅಥವಾ ಸಂಪಾದನೆಯಿಂದ ಸಣ್ಣ ಉಳಿತಾಯ ಮಾಡಬೇಕೆಂಬುದು ಈ ಪದಕದ ತತ್ವವಾಗಿದೆ.

2. ಗೈಡ್ ನಾಯಕಿಯು ಗೈಡಳು ಬಟ್ಟೆ, ಪಾದರಕ್ಷೆಗಳನ್ನು ಜಾಗರೂಕತೆಯಿಂದ ನೋಡಿಕೊಳ್ಳುತ್ತಾಳೆಂದು, ಅವುಗಳನ್ನು ಹರಿದರೆ ಹೊಲಿದಿಡುತ್ತಾಳೆಂದು, ಗುಂಡಿ ಹೋದರೆ ಹಾಕಿಕೊಳ್ಳುತ್ತಾಳೆಂದೂ ಪೋಷಕರಿಂದ ಹಾಗೂ ಶಿಕ್ಷಕರಿಂದ ಸಾಕ್ಷಿಯನ್ನು ಪಡೆಯಬೇಕು ಹಾಗೂ ದಳ ಮತ್ತು ಶಾಲೆಯ ಆಸ್ತಿಗಳನ್ನು ಗೌರವಿಸುತ್ತಾಳೆಂದು ಗೈಡ್ ನಾಯಕಿ ದೃಢೀಕರಿಸುವುದು.

96. ಆಟಿಕೆ ತಯಾರಿಕೆ - Toy Maker

ಕೆಳಗಿನ ಯಾವುದಾದರು ಎರಡು ಆಟಿಕೆಯನ್ನು ಮಾಡುವುದು ಮತ್ತು ನಿನ್ನ ಆಯ್ಕೆಯ ಒಂದು ಆಟಿಕೆ ಮಾಡುವುದು ಪ್ರತಿ ಆಟಿಕೆಯು ಮಾರಾಟ ಮಟ್ಟದಲ್ಲಿರಬೇಕು.

1. ಪ್ರಾಣಿಯ ಆಕೃತಿಯನ್ನು ಕತ್ತರಿಸುವುದು ತುಂಬುವುದು ಮುಖ್ಯಭಾಗಗಳಿಗೆ ಬಣ್ಣ ಕೊಡುವುದು, ಹರಕು ಬಟ್ಟೆ ಮತ್ತು ಉಣ್ಣೆ ಉಪಯೋಗಿಸಿ ಪ್ರಾಣಿಗಳನ್ನು ಮಾಡುವುದು.
2. ಮರ, ರಟ್ಟು, ಬೆಂಡು ಇವುಗಳನ್ನು ಉಪಯೋಗಿಸಿ ಒಂದು ಬಂಡಿಯನ್ನು ಮಾಡಿ ಮಗುವಿಗೆ ಎಳೆಯಲು ಕೊಡುವುದು.
3. ರಟ್ಟಿನ ಮೇಲೆ ಉಣ್ಣೆ ಉಂಡೆ ಮಾಡಿಕೊಂಡು ಇದಕ್ಕೆ ಕೊಕ್ಕು, ಪುಕ್ಕ, ಬಣ್ಣಹಚ್ಚಿ ಎಳೆಯ ಮಗುವಿಗಾಗಿ ಒಂದು ಪಕ್ಷಿ ಮಾಡುವುದು.
4. ಒಂದು ಗೊಂಬೆಗೆ ಮಗುವಿನ ಉಡುಪಿನಂತಹ ಉಡುಪನ್ನು ಮಾಡಿ ತೊಡಿಸುವುದು. ಗೊಂಬೆಯನ್ನು ಚಿಂದಿಯಿಂದ ಮಾಡಿರಬಹುದು ಅಥವಾ ಪ್ಲಾಸ್ಟಿಕ್ ಗೊಂಬೆಯಾಗಿರಬಹುದು.
5. ಒಂದು ರಟ್ಟಿನ ಪೆಟ್ಟಿಗೆಯಿಂದ ಬೊಂಬೆ ಮನೆ ಮಾಡಿ ಬಣ್ಣ ಹಚ್ಚುವುದು. ಎಸೆಯುವ ವಸ್ತುಗಳಿಂದ ಪೀಠೋಪಕರಣ ಮಾಡಿ ಅದನ್ನು ಅಲಂಕರಿಸುವುದು.
6. ಒಂದು ಅಪ್ಸರೆ, ಒಂದು ನಿಸರ್ಗ, ಒಂದು ಸಾಹಸ ಕಥೆಯನ್ನು ಚಿತ್ರಸಹಿತ ಬರೆದು ಚಿತ್ರ ಕಥೆ ಪುಸ್ತಕ ಮಾಡುವುದು.
7. ಚೀಲಕ್ಕೆ ಒಂದು ಹಿಡಿಕೆ ದಂಡವನ್ನು ತಯಾರಿಸುವುದು ಅಥವಾ ಗಾಳಿಪಟವನ್ನು ತಯಾರಿಸಿ ಹಾರಿಸುವುದು.

97. ನೇಕಾರ್ತಿ - Weaver :

12 ಕೌಂಟ್ ದಾರದಲ್ಲಿ 4.5 ಮೀಟರ್ ಉದ್ದದ 68.5 ಮೀಟರ್ ಅಗಲದ ಬಟ್ಟೆಯನ್ನು ನೇಯುವುದು.

98. ವಿಶ್ವ ಸಂರಕ್ಷಣೆ - World Conservation :

1. ನೀರಿನ ಚಕ್ರದ ಚಿತ್ರ ಬರೆದು ಅದರ ಉಪಯೋಗವನ್ನು ತಿಳಿಸುವುದು.

   ಅ) ಇಬ್ಬನಿಯಾಗುವುದು

   ಆ) ಹರಿದು ಹೋಗುವುದು

   ಇ) ಅಂತರ್ ಜಲ

   ಈ) ಆವೀಕರಣ

   ಉ) ಬಾಷ್ಪೀಕರಣ

2. ಕೆಳಗಿನ ಮಾಲಿನ್ಯಗಳ ಬಗ್ಗೆ ವಿಧಗಳು ಕಾರಣಗಳು ಹಾಗೂ ನಿಯಂತ್ರಣದ ಬಗ್ಗೆ ತಿಳಿದು ಹೇಳುವುದು.

   ಅ) ನೀರು ಇ) ಮಣ್ಣು

   ಆ) ಗಾಳಿ ಮತ್ತು ಶಬ್ದ ಈ) ತ್ಯಾಜ್ಯ ವಸ್ತುಗಳು

3. ಹೊರಸಂಚಾರ ಮತ್ತು ಶಿಬಿರಗಳನ್ನು ಮಾಡುವಾಗ ಪರಿಸರವನ್ನು ಉತ್ತಮಗೊಳಿಸಲು ಮಾಡಬೇಕಾದ ಮತ್ತು ಮಾಡಬಾರದ್ದನ್ನು ಪಟ್ಟಿಮಾಡುವುದು.

4. ಸಂಕುಲ ವಿನಾಶದ ಅಂಚಿನಲ್ಲಿರುವ ಪ್ರಾಣಿ ಮತ್ತು ಸಸ್ಯಗಳ ಪಟ್ಟಿಯನ್ನು ಸಾಧ್ಯವಾದರೆ ಚಿತ್ರದ ಸಹಿತ ತಯಾರಿಸುವುದು.

5. ಏಕೆ ಪ್ರಾಣಿ ಮತ್ತು ಸಸ್ಯ ಸಂಕುಲಗಳು ವಿನಾಶದತ್ತ ಸಾಗುತ್ತಿವೆ

ಎಂಬುದಕ್ಕೆ ಕಾರಣಗಳನ್ನು ತಿಳಿದುಕೊಂಡು, ಇವುಗಳ ಉಳಿವಿಗಾಗಿ ಮಾಡಬಹುದಾದ ಸಹಾಯಧ ಬಗ್ಗೆ ಅರಿವನ್ನು ಹೊಂದಿರುವುದು.

6. ಈ ಕೆಳಗಿನವುಗಳಲ್ಲಿ ಯಾವುದಾದರು ಒಂದು ಪ್ರಯೋಗವನ್ನು ಮಾಡುವುದು.

ಅ) ಮಣ್ಣಿನ ಸವಕಳಿಯನ್ನು ತೋರಿಸುವ ಮತ್ತು ಸಸ್ಯಗಳಿಂದ ಸವಕಳಿಯನ್ನು ತಡೆಗಟ್ಟುವ ಪ್ರಯೋಗ

ಆ) ಮಣ್ಣಿನ ರಚನೆ ಕುರಿತು ಪ್ರಯೋಗ

ಇ) ಸಸ್ಯಗಳು ಆಮ್ಲಜನಕವನ್ನು ಹೇಗೆ ಬಿಟ್ಟುಕೊಡುತ್ತವೆ ಎಂಬುದನ್ನು ಪ್ರದರ್ಶಿಸುವುದು.

ಈ) ಮೇಲ್ಮಣ್ಣಿನಲ್ಲಿ ಎರಡು ಹುರಳಿ ಬೀಜ ಮತ್ತು ಒಳ ಮಣ್ಣಿನಲ್ಲಿ ಎರಡು ಬೀಜಗಳನ್ನು ನೆಟ್ಟು ಒಂದು ತಿಂಗಳು ಬೆಳೆಸಿ ವೀಕ್ಷಿಸಿ ವರದಿ ಮಾಡುವುದು. ಈ ಕೆಳಗಿನ ಅಂಶಗಳನ್ನು ಗಮನಿಸುವುದು.

i) ಎರಡೂ ಬೀಜಗಳ ಬೆಳವಣಿಗೆಯಲ್ಲಿನ ವ್ಯತ್ಯಾಸ

ii) ಆಕಾರದಲ್ಲಿನ ವ್ಯತ್ಯಾಸ

ಉ) ಮಣ್ಣಿನ ನೀರನ್ನು (Muddy water : ಕೆಸರಿನ ನೀರು) ಒಂದು ಗಾಜಿನ ಶೀಸೆಯಲ್ಲಿ ತುಂಬಿ 6 ಘಂಟೆಗಳ ಕಾಲ ಇಡುವುದು. ನೀರಿನಲ್ಲಿ ಮಣ್ಣಿನ ಪದರಗಳನ್ನು ವೀಕ್ಷಿಸುವುದು. ಪದರಗಳನ್ನು ಗುರುತಿಸುವುದು.

ಊ) ಒಂದು ತಿಂಗಳ ಕಾಲ ನೆರೆಹೊರೆಯಲ್ಲಿ ಹವಾಮಾನದ ಮಾಹಿತಿಗಳಾದ ಮಳೆ, ಬಿಸಿಲು, ಮಂಜು, ಮೋಡ, ಉಷ್ಣತೆ, ಗಾಳಿಯ ವೇಗ, ದಿಕ್ಕು ಮತ್ತು ತೇವಾಂಶಗಳ ದಾಖಲೆಯನ್ನು

ದಾಖಲಿಸುವುದು.

7. ಕೆಳಗಿನವುಗಳಲ್ಲಿ ಯಾವುದಾದರು ಒಂದನ್ನು ಮಾಡಿ :

ಅ) ದಿನಕ್ಕೆ ಒಂದು ಗಂಟೆಯಂತೆ ಒಟ್ಟು 6 ಗಂಟೆಗಳ ಕಾಲ ಸಾರ್ವಜನಿಕ ಉದ್ಯಾನ/ಶಾಲಾ ಆವರಣದಲ್ಲಿ ಎಸೆದಾಡುವ ಕಸದ ವಿರುದ್ಧ ಯೋಜನೆ ಹಾಕಿ ದಳ/ಅಷ್ಟಕ ದೊಡನೆ ಸೇರಿ ಆಂದೋಲನ ಮಾಡಿ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು.

ಆ) ಒಂದು ದಿನದ ಕಾಲ ಸಂರಕ್ಷಣಾ ಯೋಜನೆಯಲ್ಲಿ ಭಾಗವಹಿಸುವುದು.

ಇ) ತನ್ನ ದಳ / ಅಷ್ಟಕಕ್ಕೆ ನಿಸರ್ಗದಲ್ಲಿ ಜಾಡು (track) ಹಾಕುವುದು.

ಈ) ಪ್ರಾಣಿಗಳಿಗೆ ಗೂಡು ಮನೆಕಟ್ಟಿ ಅದರ ನಿರ್ವಹಣೆಯನ್ನು ಮಾಡುವುದು.

ಉ) ಪಕ್ಷಿಗಳಿಗಾಗಿ ಮತ್ತು ಅಲಂಕಾರಕ್ಕಾಗಿ ಒಂದು ಕೊಳವನ್ನು ನಿರ್ಮಿಸುವುದು.

ಊ) ಒಂದು ಮೀನಿನ ತೊಟ್ಟಿಯನ್ನು ತಯಾರಿಸುವುದು.

ಋ) ಕನಿಷ್ಟ ಪ್ರಾಣಿ ಮತ್ತು ಪಕ್ಷಿಗಳ ಆರು ವಿಧದ ಹೆಜ್ಜೆಗಳ ಅಚ್ಚನ್ನು ತೆಗೆದು ಸಂಗ್ರಹಿಸುವುದು.

ಸೂಚನೆ: 1) ಈ ಪದಕದ ಜೊತೆ ವಿಶೇಷ ಪ್ರಮಾಣ ಪತ್ರವನ್ನು ಕೊಡುವುದು.

2) ಈ ಪದಕವನ್ನು ಎಡತೋಳಿನ ಮೇಲೆ ರಾಜ್ಯ ಪುರಸ್ಕಾರ/ ರಾಷ್ಟ್ರಪತಿ ಗೈಡ್ ಪದಕದ ಕೆಳಗೆ ಧರಿಸುವುದು.

99. ವಿಶ್ವಮಿತ್ರತ್ವ - World friendship :



1. ಎರಡು ರಾಷ್ಟ್ರಗಳ (ತನ್ನ ರಾಷ್ಟ್ರ ಹೊರತು ಪಡಿಸಿ) ಭೂಗೋಳ, ಇತಿಹಾಸ, ಜನ ಜೀವನದ ಬಗ್ಗೆ ಮೂಲ ಜ್ಞಾನವನ್ನು ಪಡೆದಿರುವುದು.

2. ಅನ್ಯ ರಾಷ್ಟ್ರದ ಗೈಡಳೊಡನೆ ಒಂದು ವರ್ಷದಲ್ಲಿ ಕನಿಷ್ಠ 6 ಬಾರಿಯಾದರು ಕ್ರಮವಾಗಿ ಪತ್ರ ವ್ಯವಹಾರ ಮಾಡಿರುವುದು.

3. ವಿಶ್ವ ಬಾಲಕಿಯರ ಗೈಡ್ ಬಾಲಕೀಯರ ಸ್ಕೌಟ್ ಸಂಸ್ಥೆಯ ವಿಶ್ವ ಸಂಸ್ಥೆ ಗರ್ಲ್ ಗೈಡ್ ಗರ್ಲ್ ಸ್ಕೌಟ್ (WAGGGS) ಬಗ್ಗೆ ತಿಳಿಯುವುದು.

4. ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡನ್ನು ಮಾಡುವುದು:

   (ಅ) ಹೊರ ರಾಷ್ಟ್ರದ ಗೈಡ್‌ಗಳ ಗೈಡ್ ಚಟುವಟಿಕೆ, ಸಾಂಸ್ಕೃತಿಕ ಚಟುವಟಿಕೆ, ಆಟ, ಮನೆಯ ಜೀವನ ಮತ್ತು ಆ ರಾಷ್ಟ್ರಗಳ ಆಗು ಹೋಗುಗಳ ಬಗ್ಗೆ ಚಿತ್ರಕೋಶವನ್ನು ತಯಾರಿಸುವುದು.

   (ಆ) ವಿಶ್ವಸಂಸ್ಥೆಯ ವ್ಯವಸ್ಥೆ, ಉದ್ದೇಶ, ಕೆಲಸ, ತತ್ವ ಮತ್ತು ಅನುಕೂಲ ಮಧ್ಯವರ್ತಿ (Subsidiary Agencies) ಇವುಗಳನ್ನು ಸರಳ ಪದಗಳಲ್ಲಿ ವಿವರಿಸಲು ಸಮರ್ಥವಾಗಿರಬೇಕು.

   (ಇ) ಅಂತಾರಾಷ್ಟ್ರೀಯ ಪರಿಹಾರ ನಿಧಿ ಸಂಗ್ರಹ ಹಂಚಿಕೆ, ವಲಸೆ ಬಂದವರಿಗೆ ನೆಲೆಸಲು ಸಹಾಯ ಮಾಡುವುದು ಪಕ್ಷರಹಿತ ಯೋಜನೆ, ಸಂಸ್ಥೆಯ ಯೋಜನೆಗಳಲ್ಲಿ ಸಹಾಯ ಮಾಡು

ವುದು. ಈ ಅಂತಾರಾಷ್ಟ್ರೀಯ ಲಕ್ಷಣವುಳ್ಳ ಕಾರ್ಯಗಳಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸುವುದರ ಮೂಲಕ ಸೋದರಿತ್ವವನ್ನು ಬೆಳೆಸುವುದು.

(ಈ) ಅನ್ಯರಾಷ್ಟ್ರದ ಒಬ್ಬ ಗೈಡಳೊಡನೆ 7 ದಿನಗಳ ಕಾಲ ನಮ್ಮ / ಹೊರದೇಶದಲ್ಲಿ ಶಿಬಿರವಾಸ ಮಾಡಿ ಅನ್ಯರಾಷ್ಟ್ರ ಕುರಿತು ನಿಮ್ಮ ಅನುಭವ, ಅಭಿಪ್ರಾಯ ಮತ್ತು ಆ ರಾಷ್ಟ್ರದ ಮಾಹಿತಿಯನ್ನು ಚಿತ್ರಗಳನ್ನೊಳಗೊಂಡಂತೆ ಒಂದು ದಿನಚರಿ ಪುಸ್ತಕವನ್ನು (Log Book) ತಯಾರಿಸುವುದು.

(ಉ) ಹೊರದೇಶದ ಗೈಡ್ ಅಥವಾ ಗೈಡ್‌ಗಳಿಗೆ ಮನೆಯಲ್ಲಿ ಎರಡು ದಿನಗಳ ಕಾಲ ಆತಿಥ್ಯ ನೀಡುವುದು.

100. ಬರಹಗಾರ್ತಿ - Writer :

1. ಕೆಳಗಿನವುಗಳಲ್ಲಿ ಒಂದನ್ನು ಬರೆಯಿರಿ:

   (ಅ) ಒಂದು ಸಣ್ಣ ಕಥೆ

   (ಆ) 8 ಅಥವಾ ಹೆಚ್ಚಿನ ಸಾಲಿನ ಒಂದು ಪದ್ಯ ಬರೆಯುವುದು.

   (ಇ) ಒಂದು ನಾಟಕವನ್ನು ಬರೆಯುವುದು.

2. ಪರೀಕ್ಷಕರು ಆಯ್ಕೆ ಮಾಡಿದ ವಿಷಯದ ಮೇಲೆ ಒಂದು ಪ್ರಬಂಧ ವನ್ನು ಬರೆಯುವುದು. ಪ್ರಬಂಧವು ಸ್ವಂತ ಆಲೋಚನೆಯನ್ನು ಅಭಿವ್ಯಕ್ತಿಸಬೇಕು ಅಥವಾ ಸ್ನೇಹಿತೆಗೆ ಕುತೂಹಲ ಕೆರಳಿಸುವ ಒಂದು ಪತ್ರವನ್ನು ಬರೆಯುವುದು

101. ಯೋಗ - Yoga :

i) ಕೆಳಗಿನವುಗಳನ್ನು ತಿಳಿದಿರಬೇಕು
   - ಯೋಗದ ವಿವರಣೆ
   - ಯೋಗದ ವಿಧಗಳು – ಜ್ಞಾನ (Gyan) ಯೋಗ, ಕರ್ಮಯೋಗ, ಅಷ್ಟಾಂಗ ಯೋಗ, ಭಕ್ತಿಯೋಗ

ii) ಅಷ್ಟಾಂಗ (Hatha) ಯೋಗ ಎಂದರೇನು?

   ಅದರಲ್ಲಿರುವ ಎಂಟು ಭಾಗಗಳು ಯಾವುವು? ಅವುಗಳನ್ನು ಸಂಕ್ಷಿಪ್ತವಾಗಿ ವಿವರಿಸಿ

iii) ಯೋಗ ಮಾಡುವ ಸಂದರ್ಭದಲ್ಲಿ ಯಾವುದನ್ನು ಮಾಡಬೇಕು? ಯಾವುದನ್ನು ಮಾಡಬಾರದು ಎಂಬುದನ್ನು ತಿಳಿದಿರಬೇಕು.

iv) ಒಂದು ತಿಂಗಳು ಕಾಲ ಸೂರ್ಯ ನಮಸ್ಕಾರ ಅಭ್ಯಾಸ ಮಾಡಿ.

v) ಈ ಕೆಳಗಿನ ಆಸನಗಳನ್ನು ಅಭ್ಯಾಸ ಮಾಡಿ ಮತ್ತು ದೇಹಕ್ಕೆ ಅದರಿಂದಾಗುವ ಲಾಭವೇನೆಂದು ತಿಳಿಯುವುದು.

   ಪದ್ಮಾಸನ, ವಜ್ರಾಸನ, ಯೋಗಮುದ್ರೆ, ಉಷ್ಟ್ರಾಸನ, ತಾಡಾಸನ (Tadasana) ಅರ್ಧಕಟಿ ಚಕ್ರಾಸನ, ಭುಜಂಗಾಸನ, ನೌಕಾಸನ, ವಕ್ರಾಸನ, ಪವನಮುಕ್ತ ಆಸನ, ಸರ್ವಾಂಗಾಸನ, ಶವಾಸನ.

vi) ಈ ಕೆಳಗಿನ ಪ್ರಾಣಾಯಾಮವನ್ನು ಕನಿಷ್ಠ ಒಂದು ತಿಂಗಳು ಅಭ್ಯಾಸ ಮಾಡಿ–

   –ಅನುಲೋಮ–ವಿಲೋಮ, ಕಪಾಲಭಟ್ಟಿ (Kapalabhati) ಮತ್ತು ಭ್ರಮರಿ

vii) ಒಂದು ನಿಮಿಷ ತ್ರಾಟಕ ಮಾಡಲು ಶಕ್ತರಾಗಿಬೇಕು.

———*———

ಅಧ್ಯಾಯ-3

ಪ್ರಾದೇಶಿಕ ಆಸಕ್ತಿ ಪದಕ Regional Interest Badge

1. ಉದ್ದೇಶಗಳು

1. ತಮ್ಮ ಸದಸ್ಯತ್ವವಿರುವ ಏಷ್ಯಾ ಪೆಸಿಫಿಕ್ ಪ್ರದೇಶದ ಬಗ್ಗೆ ಅರಿವು ಮೂಡಿಸುವುದು.
2. ಈ ಪ್ರದೇಶವು ಒಳಗೊಂಡಿರುವ ಪ್ರಪಂಚದ ದ್ವೀಪಗಳಲ್ಲಿ ಅರ್ಧದಷ್ಟು ಜನಸಂಖ್ಯಾಭರಿತ ದ್ವೀಪ ಸಮೂಹಗಳನ್ನು ಹೊಂದಿರುವ ಬಗ್ಗೆ ತಿಳಿದುಕೊಂಡು ಮೆಚ್ಚುಗೆಯನ್ನು ವ್ಯಕ್ತಪಡಿಸುವುದು.
3. ಈ ಪ್ರದೇಶದಲ್ಲಿರುವ ಜನಾಂಗಗಳು, ಧರ್ಮಗಳು, ಚರಿತ್ರೆ ಮತ್ತು ಸಂಸ್ಕೃತಿಯಲ್ಲಿನ ವೈವಿಧ್ಯತೆಯ ಬಗ್ಗೆ ತಿಳಿದುಕೊಳ್ಳುವುದು.
4. ಸಹ ಚಟುವಟಿಕೆ ಮತ್ತು ಒಬ್ಬರನೊಬ್ಬರು ಅರ್ಥಮಾಡಿಕೊಳ್ಳುವುದರ ಮೂಲಕ ಪ್ರದೇಶದಲ್ಲಿ ಸಹಕಾರ ಮತ್ತು ಸ್ನೇಹವನ್ನು ಬೆಳೆಸಿಕೊಳ್ಳುವುದು.

ಪದಕ: ಹತ್ತಿ ಬಟ್ಟೆಯ ಮೇಲೆ ಏಷ್ಯಾ ಪೆಸಿಫಿಕ್ ಲಾಂಛನ ಇರುವ ಪದಕ.

ಮೌಲ್ಯಮಾಪನ: ಈ ಪದಕದ ಮೌಲ್ಯಮಾಪಕರನ್ನು ರಾಷ್ಟ್ರಸಂಸ್ಥೆ ನೇಮಕ ಮಾಡುವರು.

ಪದಕ ಕಾರ್ಯದ ವಿವರ : ಏಷ್ಯಾ ಪೆಸಿಫಿಕ್ ಪ್ರದೇಶದ ಅರಿವು

a) ಏಷ್ಯಾ ಪೆಸಿಫಿಕ್ ಪ್ರದೇಶದ ಲಾಂಛನದ ಅರ್ಥವನ್ನು ತಿಳಿದುಕೊಳ್ಳುವುದು ಹಾಗೂ ಅದರ ಪ್ರಕಟಣಾ ಪತ್ರ (leaf let)ವನ್ನು ಓದಿ ವಿಷಯ ಸಂಗ್ರಹಿಸುವುದು.

b) ಆಸಕ್ತಿ ಮೂಡಿಸುವ ದೃಶ್ಯ ಸಾಧನಗಳಾದ ಈ ಪ್ರದೇಶಕ್ಕೆ ಸೇರಿದ ಸದಸ್ಯ ರಾಷ್ಟ್ರಧ್ವಜಗಳು ಮಾದರಿ ಮತ್ತು ನಮ್ಮ ಸಂಸ್ಥೆಯ ವಿವಿಧ ಪದಕಗಳನ್ನು ಪ್ರದರ್ಶಿಸುವ ಮೂಲಕ ನಿಮ್ಮ ದಳಕ್ಕೆ ಈ ಪ್ರದೇಶದ ಬಗ್ಗೆ ಅರಿವು ಮೂಡಿಸುವುದು.

c) ಭೂಪಟದಲ್ಲಿ ಸದಸ್ಯ ರಾಷ್ಟ್ರಗಳನ್ನು ಗುರುತಿಸುವ ಸಾಮರ್ಥ್ಯವನ್ನು ಪಡೆಯುವುದು.

2. ಕಲಿಕೆ ಮತ್ತು ಹಂಚಿಕೆ :

a) ಕೆಳಗಿನವುಗಳನ್ನು, ಸದಸ್ಯ ರಾಷ್ಟ್ರಗಳ ಪ್ರವಾಸಿಗರಿಂದ ರಾಷ್ಟ್ರಗಳ ಜನರು ನಿಮ್ಮಲ್ಲಿ ನೆಲೆಸಿದ್ದರೆ ಅವರನ್ನು ಸಂಪರ್ಕಿಸಿ ತಿಳಿದುಕೊಳ್ಳುವುದು.

i) ಶುಭಕೋರುವ ವಿಧಾನ ಮತ್ತು ವಿವಿಧ ಭಾಷೆಗಳಲ್ಲಿ ವ್ಯವಹಾರಿಕ ವಿಷಯಗಳ ವಾಕ್ಯಾಂಗ (Phares)ಗಳನ್ನು ಕಲಿಯಿರಿ.

ii) ತಿನಿಸುಗಳನ್ನು ಮಾಡುವುದನ್ನು ಕಲಿತು ಪ್ರದರ್ಶಿಸುವುದು.

iii) ಹಾಡು ಮತ್ತು ಆಟಗಳನ್ನು ಕಲಿ

b) **ಕೌಶಲ:** ಯಾವುದಾದರೂ ಎರಡನ್ನು ಆಯ್ಕೆ ಮಾಡುವುದು

i) ಮೂರು ಬೊಂಬೆ ಅಥವಾ ಮೂರು ರಟ್ಟಿನ ಆಕೃತಿ ಕತ್ತರಿಸಿ, ಮೂರು ಸದಸ್ಯ ರಾಷ್ಟ್ರಗಳ ಸಮವಸ್ತ್ರಗಳನ್ನು ಕೂಡಿಸುವುದು.

ii) ಪ್ರದೇಶಗಳಲ್ಲಿ ಸಂಗ್ರಹಿಸಿದ ಸಾಮಾನುಗಳ ಸಂಚಿ (Kit) ಕಬ್ಬಾ ಪುಸ್ತಕ (Scrap Book) ಮತ್ತು ಚಿತ್ರ ಸಂಯೋಜನೆ ಅಥವಾ ಒರಟು ಆಕೃತಿಗಳನ್ನು ಆಸಕ್ತಿ ಮೂಡಿಸುವಂತೆ ಪ್ರದರ್ಶಿಸುವುದು.

iii) ಈ ಪ್ರದೇಶದ ಪ್ರಾಣಿಪಕ್ಷಿಗಳ ಆಟಿಕೆಗಳನ್ನು ಮಾಡುವುದು.

iv) ಈ ಪ್ರದೇಶದ ಯಾವುದಾದರೂ ರಾಷ್ಟ್ರಗಳ ದೃಶ್ಯಾವಳಿಗಳನ್ನು ಜೋಡಿಸುವುದು.

3. **ಸೇವೆ:**

ನೀವು ಮೇಲಿನ 2a) ಮತ್ತು b)ಗಳಲ್ಲಿ ಕಲಿತ ಕೌಶಲಗಳನ್ನು ಕನಿಷ್ಠ ಆರು ವಿವಿಧ ಸಂದರ್ಭಗಳಲ್ಲಿ ಅಂಗವಿಕಲ ಮಕ್ಕಳಿಗೆ ಅಥವಾ ಮಕ್ಕಳ ವಸತಿ ಗೃಹಕ್ಕೆ ಭೇಟಿ ನೀಡಿ ಕಲಿಸಿಕೊಡುವುದು.

———*———



ಬಲತೋಳಿನಲ್ಲಿ ಚಿತ್ರದಲ್ಲಿ ತೋರಿಸಿದಂತೆ ಪದಕಗಳನ್ನು ಹೊಲಿದುಕೊಳ್ಳುವುದು

ಎಡತೋಳಿನಲ್ಲಿ ಚಿತ್ರದಲ್ಲಿ ತೋರಿಸಿದಂತೆ ಪದಕಗಳನ್ನು ಹೊಲಿದುಕೊಳ್ಳುವುದು

ಸೂಚನೆ: ಹೊಲಿದುಕೊಳ್ಳುವ ಮುನ್ನ ಶಿಕ್ಷಕರಿಂದ ಮಾರ್ಗದರ್ಶನ ಪಡೆದು ಅಚ್ಚುಕಟ್ಟಾಗಿ ಹೊಲಿದುಕೊಳ್ಳುವುದು

ಗು.ನಿ.ನಿ.ಸಂ. ಭಾಗ–3 ಗೈಡ್ ವಿಭಾಗದದಲ್ಲಿ ನಮೂದಿಸಿರುವಂತೆ ಡವಾಲಿಯನ್ನು (Sash) ಹೊಲಿಸಿಕೊಂಡು ಅದರ ಮೇಲೆ ಚಿತ್ರದಲ್ಲಿ ತೋರಿಸಿರುವಂತೆ ಪದಕಗಳನ್ನು ಹೊಲಿದುಕೊಳ್ಳುವುದು



ಡವಾಲಿಯನ್ನು ಪದಕಗಳು ಕಾಣುವಂತೆ ಎಡಭುಜದ ಮೇಲೆ ಹಾಕಿಕೊಂಡು ತುದಿಗಳನ್ನು ಬಲಸೊಂಟದ ಮೇಲೆ ಪಿನ್ನಿನಿಂದ ಜೋಡಿಸುವುದು

1. ದ್ವಿತೀಯ ಸೋಪಾನದ ಪ್ರಾವೀಣ್ಯತಾ ಪದಕ – 2
2. ತೃತೀಯ ಸೋಪಾನದ ಪ್ರಾವೀಣ್ಯತಾ ಪದಕಗಳು – 1+2=3
3. ರಾಜ್ಯ ಪುರಸ್ಕಾರದ ಪ್ರಾವೀಣ್ಯತಾ ಪದಕಗಳು – 3+2
4. ರಾಷ್ಟ್ರಪತಿ ಪುರಸ್ಕಾರದ ಪ್ರಾವೀಣ್ಯತಾ ಪದಕಗಳು–2+1
5. ಅಷ್ಟಕದ ಪದಕ

ಸೂಚನೆ: ಶಿಕ್ಷಕರ ಮಾರ್ಗದರ್ಶನ ಪಡೆಯಿರಿ

Left Hand Sleeve (Guide)



Right Hand Sleeve (Guide)



Note:
A. Three Rashtrapati Proficiency Badges will be worn on the left sleeve.
B. Armlets for Company Leader / Assistant Company Leader / Patrol Leader / Second will be Worn over the cuff of the left sleeve as mentioned in the book and explained tn the diagram.

Note:
Company Leader Badge or Assistant Company Leader Badge will be stitched above the cuff of Right Sleeve as mentioned in the book and explained in the diagram.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ

ದೂರದರ್ಶಿತ್ವ - 2024

2024ರ ವೇಳೆಗೆ, ಅತ್ಯಂತ ಕ್ರಿಯಾಶೀಲ
ಯುವಚಳವಳಿಯಾದ ಅಂತರರಾಷ್ಟ್ರೀಯ ವ್ಯಾಪ್ತಿಯ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು
ಮೌಲ್ಯಾಧಾರಿತವಾದ, ಅತ್ಯಾಕರ್ಷಕ ಗುಣಗಳುಳ್ಳ,
ಸ್ವಾವಲಂಬಿಯಾದ, ಲಿಂಗತಾರತಮ್ಯವಿಲ್ಲದ
ಯುವಜನಾಂಗದ ಅವಶ್ಯಕತೆಗಳಿಗನುಗುಣವಾಗಿ ಬೆಳೆಯುತ್ತದೆ.

ಅಲ್ಲದೆ, ಸಮರ್ಥ ನಾಯಕರುಗಳ ಪರಿಣಾಮಕಾರಿ
ಮಾರ್ಗದರ್ಶನದ ಮೂಲಕ ಮುಂದುವರೆದ ತಂತ್ರಜ್ಞಾನ,
ಉತ್ತಮ ಆಡಳಿತ ವ್ಯವಸ್ಥೆಯುಳ್ಳ ಸವಾಲಿನಿಂದ ಕೂಡಿದ
ಸಂಸ್ಥೆಯಾಗುತ್ತದೆ.